It is learnt that there have been some good showers in that area after 14th August during the last four or five days. The rainfall details are as under.—

Nanjangud	...	21.8	mm
Yellandur	...	31.9	,,
Chamarajanagar	...	29.0	,,
Kollegal	...	42.3	,,
T. Narasipura	...	31.2	,,

However, it is reported that the tanks have not received adequate water yet and drinking water position has also not improved significantly. The showers of last week have helped sowing operations of ragi.

The situation continues to be watched closely and relief measures will be taken immediately if any need for them arises. All the Government staff has been alerted for this purpose.

3-30 P.M.

KARNATAKA LAND REFORMS (AMENDMENT) BILL, 1978

Motion to Consider (Debate Contd.)

† ಶ್ರೀ ಕೆ. ರಾಮಭಟ್ (ಪುತ್ತೂರು).—ಮಾನ್ಯ ಅಧ್ಯಕ್ಷರೇ, ನಾನು ಈಗ ತಂದಿರತಕ್ಕಂಥ ಮಸೂದೆಯನ್ನು ಸ್ವಾಗತ ಮಾಡುತ್ತೇನೆ. ಆದರೆ ಪ್ರಾರಂಭದಲ್ಲಿ ಅವಸರಅವಸರವಾಗಿ ಈ ಮಸೂದೆಯನ್ನು ತಂದಿದ್ದಾರೆ ಎಂದು ಹೇಳುತ್ತೇನೆ. ಇದರ ಬಗ್ಗೆ ನಾನಾದರೂ ಹೇಳುವುದೇನೆಂದರೆ ಈ ತಿದ್ದುಪಡಿ ಮಸೂದೆ ಈ ಸದನದಲ್ಲಿ ಚರ್ಚೆಯಾಗುತ್ತಿರಬೇಕಾದರೆ ಇದಕ್ಕೆ ಮತ್ತೆ ತಿದ್ದುಪಡಿಯನ್ನು ತರುತ್ತಿದ್ದಾರೆಂದರೆ ತಿದ್ದುಪಡಿಗೆ ಮತ್ತೆ ತಿದ್ದುಪಡಿಯನ್ನು ತರುತ್ತಿರುವುದು ಸಂಶಯಕ್ಕೆ ಎಡೆಮಾಡಿಕೊಟ್ಟಿದೆ ಎಂದು ಹೇಳುತ್ತೇನೆ. ಸಮಗ್ರವಾಗಿ ಆಲೋಚನೆ ಮಾಡಿ, ಬೇಕಾದಾಗ ತಿದ್ದುಪಡಿಯನ್ನು ತರತಕ್ಕಂಥ ಅವಕಾಶವನ್ನು ಇಟ್ಟುಕೊಂಡು ಮತ್ತೆ ಈ ಮಸೂದೆಗೆ ತಿದ್ದುಪಡಿಯನ್ನು ತರತಕ್ಕಂಥ ಅವಶ್ಯಕತೆ ಏನು ಇತ್ತೆಂದು ಕೇಳುತ್ತೇನೆ. ಆಮೂಲಾಗ್ರವಾಗಿ ಪರಿಶೀಲನೆ ಮಾಡಲು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಒಪ್ಪಿಸಬೇಕೆಂದು ಹೇಳಿ, ಈ ಒಂದು ಮಸೂದೆಯನ್ನು ಸಭೆಯಲ್ಲಿ ಪಾಸ್ ಮಾಡಬೇಕೆಂದು ತಂದಿರುವ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅದೇನೆಂದರೆ ಈಗ ಕೃಷಿ ಕಾರ್ಮಿಕರಿಗೆ ಭೂಮಿಯನ್ನು ಕೊಟ್ಟು, ಇರುವುದಕ್ಕೆ ಮನೆಗಳನ್ನು ಕೊಡುವಂಥ ಒಂದು ವ್ಯವಸ್ಥೆಯನ್ನು ಕಾನೂನಿನಲ್ಲಿ ಅಡಕಮಾಡಿದ್ದೀರಿ. ನಾನು ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ ಈ ರೀತಿಯಾದ ಕಾನೂನನ್ನು ಮಾಡುವುದರ ಬದಲಾಗಿ ಯಾರು ಯಾರು ಕೃಷಿ ಕಾರ್ಮಿಕರು ಇರುತ್ತಾರೆ ಅಂಥವರೆಲ್ಲರಿಗೂ ಸರ್ಕಾರದ ಜಾಗದಲ್ಲಿ ಮನೆಗಳನ್ನು ಕಟ್ಟಿಸಿಕೊಡುವಂಥ ವ್ಯವಸ್ಥೆಯನ್ನು ಮಾಡಬೇಕು. ಹಾಗೆ ಮಾಡಿದರೆ ಕಾನೂನನ್ನು ತಿದ್ದುಪಡಿ ಮಾಡತಕ್ಕಂಥ ಆವಶ್ಯಕತೆಯೇ ಇರುವುದಿಲ್ಲ. ಎಲ್ಲ ಕಾರ್ಮಿಕರಿಗೂ ಸರ್ಕಾರಿ ಜಾಗದಲ್ಲಿ ಮನೆಗಳನ್ನು ಕಟ್ಟಿಸಿಕೊಡತಕ್ಕಂಥ ವ್ಯವಸ್ಥೆ ಯಾವ ರೀತಿಯಲ್ಲಿ ಮಾಡಿರುತ್ತೀರಿ. ಅದೇ ರೀತಿಯಲ್ಲಿ ಕೃಷಿ ಕಾರ್ಮಿಕರಿಗೂ ಮನೆಗಳನ್ನು ಕಟ್ಟಿಸಿಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಯಾರ ಭೂಮಿಯಲ್ಲಿ ಒಬ್ಬ ಕೃಷಿ ಕಾರ್ಮಿಕ ಕೆಲಸ ಮಾಡುತ್ತಿದ್ದಾನೆ, ಅವನನ್ನು ಒಕ್ಕಲೆಬ್ಬಿಸಬಾರದು ಎನ್ನುವ ಬಗ್ಗೆ ಕಾನೂನನ್ನು ಮಾಡಿಲ್ಲ. ಈವತ್ತು ಭೂ ಸುಧಾರಣೆಗೂ, ಕೃಷಿ ಕಾರ್ಮಿಕರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೂ ಸಂಬಂಧ ಏನು ಎಂಬುದರ ಬಗ್ಗೆ ಎಲ್ಲೂ ಉಲ್ಲೇಖಿಸಿಲ್ಲ. ಉತ್ಪಾದಿಸತಕ್ಕಂಥ ಭೂಮಿಯಲ್ಲಿ ಯಾರು ಒಕ್ಕಲು ಇದ್ದುಕೊಂಡು ಕೆಲಸ ಮಾಡುತ್ತಿರುತ್ತಾರೆ ಅಂಥವರನ್ನೂ ಕೂಡ ಒಕ್ಕಲೆಬ್ಬಿಸಿ ಹೊರಗಡೆ ಹಾಕುತ್ತಿರುವ ಸಂದರ್ಭಗಳು ಇರುತ್ತವೆ.

ಆದ್ದರಿಂದ ಯಾರು ಭೂಮಿಯಲ್ಲಿ ಕೂಲಿಕಾರರಾಗಿ ಕೆಲಸಮಾಡುತ್ತಿದ್ದಾರೆ, ಅಂಥಾವರಿಗೆ ಯಾವ ವಿಧವಾದಂಥಾ ರಕ್ಷಣೆಯನ್ನೂ ಸಹ ಕೊಡತಕ್ಕಂಥ ವಿಷಯ ಈ ಮಸೂದೆಯಲ್ಲಿ ಕಂಡುಬರುತ್ತಿಲ್ಲ. ಆದ್ದರಿಂದ ಈ ಬಗ್ಗೆ ಅಗ್ರಿಕಲ್ಚರ್ ಲೇಬರರ್ಸ್ ಪ್ರೊಟೆಕ್ಷನ್ ಆಕ್ಟ್ ಬೇರೆ ತರಬೇಕೆಂದು ಹೇಳುತ್ತೇನೆ. ಈವೊತ್ತು ತಂದಿರತಕ್ಕಂಥ ಭೂ ಸುಧಾರಣಾ ಮಸೂದೆಯಲ್ಲಿ ಈ ಒಂದು ವಿಷಯವನ್ನು ಕೈಬಿಟ್ಟಿರತಕ್ಕಂಥದ್ದು ನಿಜವಾಗಿಯೂ ನನಗೆ ಅರ್ಥವಾಗುತ್ತಿಲ್ಲ. ಈವೊತ್ತಿನದಿವಸ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿ ಕೂಲಿಕಾರರಿಗೆ ಆಗಿರತಕ್ಕಂಥ ತೊಂದರೆ ಹೇಳತೀರದಾಗಿರುತ್ತದೆ. ಅವರಿಗೆ ಭೂಮಿ ಇರುವುದಿಲ್ಲ, ಮತ್ತು ನೆಲೆಸಲು ಮನೆಗಳಿಲ್ಲ. ಈ ಭೂ ಸುಧಾರಣೆ ತಿದ್ದುಪಡಿಯಿಂದ ನೆರವು ಅವರಿಗೆ ಆಗದಿದ್ದರೆ ಮತ್ತೆ ಯಾವ ರೀತಿ ಭೂ ಸುಧಾರಣೆಯಿಂದ ಅನುಕೂಲವಾಗುತ್ತದೆ ಎನ್ನುವುದನ್ನು ವಿವರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮುಖ್ಯವಾಗಿ ಬರುವಂಥ ವಿಚಾರವೆಂದರೆ ಈ ಕಾನೂನು ದೆಸೆಯಿಂದ ಬಹಳ ತೊಂದರೆಗೆ ಒಳಗಾಗುವವರು ಎಂದರೆ ಸಣ್ಣಪುಟ್ಟ ರೈತರು ಮಾತ್ರ ಎಂದು ಹೇಳಬಹುದು. ದೊಡ್ಡ ದೊಡ್ಡ ರೈತರು ಅವರಿಗೆ ಅಗತ್ಯವೆಂದು ಕಂಡುಬಂದರೆ ಕೂಲಿಕಾರರನ್ನು ಎಬ್ಬಿಸುವ ಪ್ರಯತ್ನ ಮಾಡಬಹುದು. ಆದರೆ ಚಿಕ್ಕ ರೈತ ಏನಿದ್ದಾನೆ ಅವನಿಗೆ ಇರತಕ್ಕಂಥ ಸಣ್ಣ ಭೂಮಿಯಲ್ಲಿ ಒಕ್ಕಲುತನ ಇದ್ದು, ಆ ಕೃಷಿ ಕಾರ್ಮಿಕರನ್ನು ಆ ಮನೆಗಳಿಂದ ಎಬ್ಬಿಸುವುದಕ್ಕೆ ಜಾಗವನ್ನು ಕೊಡಬೇಕೆಂದರೆ ಬಹಳ ತೊಂದರೆಯಾಗುತ್ತದೆ. ಇದರ ಬಗ್ಗೆ ಎಷ್ಟೋ ಸಂದರ್ಭಗಳಲ್ಲಿ ಪ್ರಶ್ನೆಯನ್ನೂ ಕೂಡ ಕೇಳಿದ್ದೇವೆ. ಅದರ ಬದಲಾಗಿ ಸರ್ಕಾರದವರು ಒಂದು ತಿದ್ದುಪಡಿ ಮಾಡಿ ಅಂಥಾ ಸಂದರ್ಭದಲ್ಲಿ ಅವನಿಗೆ ಸೈಟು ಕೊಟ್ಟು ದುಡ್ಡನ್ನು ಕೊಟ್ಟು ಮನೆಯನ್ನು ಕಟ್ಟಿಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಟ್ಟರೆ ನಿಜವಾಗಿಯೂ ಅವನಿಗೂ ಅನುಕೂಲವಾಗುತ್ತದೆ, ಮತ್ತು ಸಣ್ಣ ರೈತನಿಗೂ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಕಾನೂನಿನಲ್ಲಿ ಇದರ ಬಗ್ಗೆ ಯಾವ ಅಂಶವೂ ಸ್ಪಷ್ಟವಾಗಿ ಕಾಣುತ್ತಾ ಇಲ್ಲ. ಈಗ ಏನಾಗಿದೆ ಎಂದರೆ ಟ್ರಿಬ್ಯುನಲ್‌ಗಳಲ್ಲಿ ಈಗಾಗಲೇ ಅಕ್ಯುಪೆನ್ಸಿ ರೈಟ್ಸ್ ಪ್ರಕಾರವಾಗಿ ತೀರ್ಮಾನವಾದ ಭೂಮಿ ಸರ್ಕಾರದಲ್ಲಿ ವೇಸ್ಟ್ ಆಗಿರುತ್ತದೆ. ವೇಸ್ಟ್ ಆದಂಥ ಭೂಮಿಯಲ್ಲಿ ಒಬ್ಬ ಕೃಷಿ ಕಾರ್ಮಿಕನ ಮನೆ ಇದ್ದರೆ, ಅದರ ಬಗ್ಗೆ ಏನು ಮಾಡಬೇಕು ಎಂಬುದನ್ನು ಉಲ್ಲೇಖ ಮಾಡಿಲ್ಲ. ಭೂಮಾಲಿಕನಿಗೆ ಒಕ್ಕುಪೆಂಟಿಗೆ ಕೇಳುವ ಹಕ್ಕು ಯಾವ ರೀತಿ ಇರುತ್ತದೋ ಅದೇ ರೀತಿಯಲ್ಲಿ ಕೃಷಿ ಕಾರ್ಮಿಕನಿಗೂ ಕಾಂಪೆನ್‌ಸೇಷನ್ ಸಲ್ಲುವ ಬಗ್ಗೆ ಯಾವ ವಿಧವಾದ ಉಲ್ಲೇಖ ಇಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸರಿಯಾದ ಉತ್ತರವನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಡೆಫನೇಷನ್ ಸೆಕ್ಷನ್ (೧)ರಲ್ಲಿರುವ ತಿದ್ದುಪಡಿ ಮಸೂದೆಯಲ್ಲಿ ಕೋಕೋ ಬೆಳೆಯನ್ನು ಪ್ಲಾಂಟೇಷನ್ ಬೆಳೆಯಲ್ಲಿ ಸೇರಿಸಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ, ಅದೇ ರೀತಿಯಲ್ಲಿ ಅಡಿಕೆ ಬೆಳೆಯನ್ನೂ ಕೂಡ ಪ್ಲಾಂಟೇಷನ್ ಬೆಳೆಯಲ್ಲಿ ಸೇರಿಸಬೇಕೆಂದು ಹೇಳುತ್ತೇನೆ.

ಇನ್ನು ತಿದ್ದುಪಡಿ ಮಸೂದೆ ಕ್ಲಾಸ್ ೩೪ ಸಬ್ ಕ್ಲಾಸ್ ೨ರ ಪ್ರಕಾರ "A person who cultivates personally any land on lease under a lease created contrary to the provisions of section 5 as in force before the date of commencement of the Amendment Act"; ಈ ರೀತಿ ಉಲ್ಲೇಖ ಮಾಡಿದ್ದೀರಿ. ಆದರೆ ಇದು ಸೆಕ್ಷನ್ ೫ಕ್ಕೆ ವಿರುದ್ಧವಾಗಿರುತ್ತದೆ. ಇದು ಸೆಕ್ಷನ್ ೪ಕ್ಕೂ ಕೂಡ ಅನ್ವಯವಾಗುತ್ತದೆ. ಸೆಕ್ಷನ್ ೪ರಲ್ಲಿ ಏನು ಹೇಳಿರುತ್ತೀರಿ ಎಂದರೆ ಟೆನೆಂಟ್ ಯಾರು ಎನ್ನುವುದನ್ನು ಹೇಳಿದ್ದೀರಿ. ನಾನು ಈಗ ತಮ್ಮ ಗಮನಕ್ಕೆ ತರುವುದೇನೆಂದರೆ ನಮ್ಮ ಊರಿನಲ್ಲಿ ಈ ಕಾನೂನು ಬಂದಕೂಡಲೇ ಭೂ ಮಾಲೀಕರು ತಮ್ಮ ಮಗ, ಅಳಿಯ, ನೆಂಟರಿಷ್ಟರೆಲ್ಲರಿಗೂ ಗೇಣಿಯನ್ನು ಹಂಚಿ ಕೊಟ್ಟಿರುತ್ತಾರೆ. ಇದು ಸೆಕ್ಷನ್ ೫ಕ್ಕೆ ವಿರುದ್ಧವಾಗಿ ಕೊಟ್ಟಂತಾಗಿರುತ್ತದೆ. ಸೆಕ್ಷನ್ ೪ರ ಪ್ರಕಾರವಾಗಿ ಪ್ರೊಹಿಬಿಷನ್ ಇರುತ್ತದೆ. ಇದನ್ನು ತೆಗೆದುಹಾಕಿದರೆ ಮೂಲ ಉದ್ದೇಶಕ್ಕೆ ವ್ಯತಿರಿಕ್ತವಾದ ಕಾನೂನು ಆಗುತ್ತದೆ.

ಈ ಭೂಮಿಯನ್ನು ಯಾರು ಯಾರು ತಮ್ಮ ತಮ್ಮ ಸಂಬಂಧಿಕರುಗಳಿಗೆ ಕೊಟ್ಟಿದ್ದಾರೋ, ಹಂಚಿದ್ದಾರೋ ಅವರಿಗೆ ಇದರಿಂದ ತೊಡಕುಂಟಾಗುತ್ತದೆ. ಮತ್ತು ಈ ಸೆಕ್ಷನ್ ೫ರ ವಿರುದ್ಧವಾಗಿ ಯಾರು ಯಾರು ಲೀಸ್‌ಗೆ ಆ ಭೂಮಿಯನ್ನು ಕೊಟ್ಟಿದ್ದಾರೋ ಆ ಭೂಮಿ ಅವರವರಿಗೇ ಹೋಗುತ್ತದೆ, ಅವರು ಇದರಲ್ಲಿ ಕೈ ಹಾಕಬಾರದು ಅಂತ ಮಾಡಿದರೆ ನೀವು ಈಗ ಏನು ಭೂಸುಧಾರಣೆ ತಂದಿದ್ದೀರೋ ಇದರ ಮೂಲಕ್ಕೇನೇ ಒಂದು ಹೊಡೆತ ಬೀಳುವಂತಾಗುತ್ತದೆ ಎನ್ನುವ ವಿಷಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಕ್ಲಾಸ್ ೨ ಸೆಕ್ಷನ್ ೩೮ರ ಬಗ್ಗೆ ಒಂದು ತಿದ್ದುಪಡಿ ಮಂಡನೆ ಮಾಡಿದ್ದೀರಿ. Ordinarily residing in a house ಅಂತ ಇದೆ. ಇದನ್ನು ತರುವ ಮೊದಲು ಹೇಗಿತ್ತು ಎಂದರೆ as a tenant or otherwise ಅಂತ ಇತ್ತು. ಆದರ್‌ವೈಸ್ ಎಂದರೆ even a trespasser will be treated as an occupant ಅನ್ನುವ ಅರ್ಥ ಬರುತ್ತದೆ. ಆದುದರಿಂದ ಈಗ ಇದನ್ನು "ordinarily and lawfully residing in a house" ಈ ರೀತಿ ಮಾಡಬೇಕು ಎಂದು ಹೇಳುತ್ತೇನೆ. ಇದಕ್ಕೆ ಒಂದು ತಿದ್ದುಪಡಿ ತರಬೇಕು ಎಂದು ನನ್ನ ವಿನಂತಿ.

ಇನ್ನು ಸೆಕ್ಷನ್ ೩೮ ಕ್ಲಾಸ್ (೨) ರಲ್ಲಿರುವ ಪ್ರಕಾರ ಯಾವನಾದರೂ ಭೂಮಿ ಮಾಡುವುದಕ್ಕೆ ಬೇಕಾದರೆ ತನ್ನ ಸ್ವಂತಕ್ಕಾಗಿ ಕೇಳಬೇಕು ಎಂದು ಉಲ್ಲೇಖ ಮಾಡಿದ್ದೀರಿ. ಇದಕ್ಕೆ ಈ ರೀತಿಯಾಗಿ ಒಂದು ತಿದ್ದುಪಡಿ ತಂದಿದ್ದೀರಿ, ಏನೆಂದರೆ If the owner bonafide requires the dwelling house for his own use or for any other purpose ಅಂತ ಇದೆ. ಯಾವುದು ಎಂತಹ ಪರ್ಪಸ್ ಅನ್ನುವುದನ್ನು ಹೇಳಿಲ್ಲಾ. ಅವನು ಏನಾದರೂ ಒಂದು ಕ್ಷುಲ್ಲಕ ಕಾರಣಕ್ಕಾಗಿ ಈ ಜಮೀನಿನಿಂದ ಎಬ್ಬಿಸಬಹುದು. ಇದರಲ್ಲಿ ಒಂದು ಅನಿಶ್ಚಿತತೆ ಇದೆ. ಇದರಿಂದ ಲಿಟಿಗೇಷನ್ ಬೇಕಾದರೂ ಬರಬಹುದು. ಇದರಿಂದ ಲ್ಯಾಂಡ್ ಟ್ರಿಬ್ಯೂನಲ್ಸ್ ಮುಂದೆ ಮತ್ತು ತಾಸೀಲ್ದಾರರ ಮುಂದೆ ಇಂತಹ ಸಮಸ್ಯೆಗಳು ಬರುವುದಕ್ಕೆ ಉದ್ಭವವಾಗುತ್ತದೇ ವಿನಾ ನಿಜವಾಗಿ ಇದರ ಉದ್ದೇಶ ಏನು ಇದೆ ಆ ಶಬ್ದಕ್ಕೆ ವಿರುದ್ಧವಾಗಿರುತ್ತದೆ ಎಂದು ಹೇಳುತ್ತೇನೆ.

ಇನ್ನು ಕೃಷಿ ಕಾರ್ಮಿಕರಿಗೆ ಮನೆಗಳನ್ನು ಕಟ್ಟುವಂತಾ ಒಂದು ಏರ್ಪಾಡನ್ನು ಆಗಲಿ ಅಥವಾ ಅವರು ಈ ಬಗ್ಗೆ ಒಂದು ಅರ್ಜಿಯನ್ನು ಕೊಡಬೇಕಾದರೆ ಈ ಟ್ರಿಬ್ಯೂನಲ್ಸ್‌ಗೇನೇ ಕೊಡಬೇಕಾಗಿರುತ್ತೆ. ತಮಗೆ ಒಂದು ಉದಾಹರಣೆ ಹೇಳಬೇಕಾದರೆ ನಮ್ಮ ಜಿಲ್ಲೆಯಲ್ಲಿ ೧ ಲಕ್ಷ ೫೬ ಸಾವಿರ ಮೇಲ್ಪಟ್ಟು ಡಿಕ್ಲರೇಷನ್ ಈಗಾಗಲೇ ಉಂಟು. ಇನ್ನೂ ಅದರಲ್ಲಿ ಮುಕ್ಕಾಲುಭಾಗ ಅರ್ಜಿಗಳು ಹಾಗೆಯೇ ಇವೆ. ಈ ಅರ್ಜಿಗಳನ್ನೂ ಸಹ ಅಲ್ಲಿಗೆ ಕಳುಹಿಸಬೇಕು ಎಂದರೆ ಈ ಅರ್ಜಿಗಳು ಇತ್ಯರ್ಥವಾಗದೇ ಇರುವಪರಿಸ್ಥಿತಿ ಬರುತ್ತದೆ. ಆದುದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ ಈ ಅರ್ಜಿಗಳನ್ನು ಟ್ರಿಬ್ಯೂನಲ್‌ಗೆ ಕಳುಹಿಸುವ ಬದಲು ತಾಸೀಲ್ದಾರರಿಗೇನೇ ಕಳುಹಿಸುವಂತೆ ಮಾಡಿದರೆ ಅವರ ತಲೆಮೇಲೆ ಈ ಭಾರ ಹೊರಿಸಿದರೆ ಕೆಲಸವು ತೃಪ್ತಿಕರವಾಗಿ ನಡೆಯುವುದಲ್ಲದೆ ಕೆಲಸವೂ ಕೂಡ ಚೆನ್ನಾಗಿ ನಡೆಯುತ್ತದೆ. ಆದುದರಿಂದ ಈ ಅರ್ಜಿಗಳನ್ನು ಟ್ರಿಬ್ಯೂನಲ್ಸ್‌ಗಳಿಗೆ ಕಳುಹಿಸುವುದು ಬೇಡ ಎಂದು ಹೇಳುತ್ತೇನೆ.

ಇನ್ನು ಸೆಕ್ಷನ್ ೩೮ ಕ್ಲಾಸ್ (೩) (ಬಿ)ನಲ್ಲಿ ಈ ರೀತಿ ಹೇಳಿದ್ದೀರಿ. Subject to such rules as the tribunal may be prescribed ಅಂತ ಇದೆ. ಇದರಲ್ಲಿ ಹಿಂದು ಮುಂದು ಆಗಿದೆ. ಇಷ್ಟು ಅವಸರದಿಂದ ಏತಕ್ಕೆ ತರಬೇಕಾಗಿತ್ತು. ಇದರಲ್ಲಿ ಈರೀತಿ ಇದೆ. subject to such rules as may be prescribed the Tribunal shall after such enquiry etc., ಇದನ್ನು ಡ್ರಾಫ್ಟ್ ಮಾಡುವಾಗ ಅಮೂಲಾಗ್ರವಾಗಿ ನೋಡಿದ್ದೀರಾ ? ಇದನ್ನು ಇಷ್ಟು ಅವಸರವಾಗಿ ಮಾಡಿರುವುದರಿಂದ ಇದನ್ನು ಸರಿಮಾಡಿ ಇದಕ್ಕೆ ಒಂದು ತಿದ್ದುಪಡಿ ಮಾಡಬೇಕು ಎಂದು ನಾನು ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಇದರಲ್ಲಿ ಕೆಲವು ಸಮಸ್ಯೆಗಳು ಇವೆ. ಅದೇನೆಂದರೆ ತಾಸೀಲ್ದಾರರು ಈ ಮನೆಗಳ ಬಗ್ಗೆ ಹಣ ನಿಶ್ಚಿತ ಮಾಡಿ ಈ ಕೃಷಿ ಕಾರ್ಮಿಕರಿಗೆ ಡೈರಕ್ಟ್ ಆಗಿ ಸಲ್ಲುವಂತೆ ಏರ್ಪಾಡು ಮಾಡಬೇಕು. ಇಲ್ಲದೇ ಹೋದರೆ ಅವನ ಸ್ಥಿತಿ ಏನಾಗುತ್ತದೆ ಅನ್ನುವುದನ್ನು ಯೋಚನೆ ಮಾಡಿ. ಅವನಿಗೆ ತಕ್ಷಣ ಒಡೆತನ ಸಿಕ್ಕುವಂತಾಗಬೇಕು. ಇದಕ್ಕೆ ನನ್ನ ಸಲಹೆಯಾದರೂ ಇಷ್ಟೆ. ಅವನು ಸಕಾಲದಲ್ಲಿ ಡಿಕ್ಲರೇಷನ್ ಕೊಡದೇ ಹೋದರೆ in such a case he must be treated as if he has not filed any declaration ತಾವು ಈ ರೀತಿಯಾಗಿ ಇದರಲ್ಲಿ ಅಳವಡಿಸಬೇಕು ಎಂದು ಹೇಳುತ್ತೇನೆ.

ಇನ್ನು ಈ ತಿದ್ದುಪಡಿ ಜಾರಿಗೆ ಬಂದನಂತರ ಕಾಲಾವಧಿ ೩ ತಿಂಗಳು ಕೊಡುತ್ತಾರೆ ಎಂದು ಎಲ್ಲರೂ ಹೇಳುತ್ತಾರೆ. ಈ ಬಗ್ಗೆ ಇದರಲ್ಲಿರುವ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್‌ನಲ್ಲಿ ಏನೂ ಹೇಳಿಲ್ಲಾ. ೩ ತಿಂಗಳು ಅವಧಿ ಕೊಡುವುದು ಬೇಡ ಎಂದು ನಾವು ಹೇಳುತ್ತಿರುವಾಗ ಮತ್ತೆ ೬ ತಿಂಗಳ

ವರೆಗೂ ಅವಧಿ ಕೊಡುತ್ತೇವೆ ಎಂದು ಹೇಳುತ್ತೀರಿ. ಆದರೆ ಇದನ್ನು ವಿಸ್ತರಿಸುವ ಬಗ್ಗೆ ಇದರಲ್ಲಿ ಏನೂ ಹೇಳಿಲ್ಲಾ. ಇದರಲ್ಲಿ ಒಂದು ಅನಿಶ್ಚಿತತೆ ಉಂಟಾಗಿರುವುದರಿಂದ ಇದಕ್ಕೆ ಒಂದು ಮಾಂಗಳ ಹಾಡಬೇಕು ಎಂದು ನನ್ನ ಪ್ರಾರ್ಥನೆ.

ಇನ್ನು ಸೆಕ್ಷನ್ ೩೪ ೧೨೨(ಎ) ಮತ್ತು ೪೮(ಎ) ಇದರಲ್ಲಿ ಹೇಳಿದ್ದೀರಿ. ಇದರಲ್ಲಿ ಸರ್‌ಪ್ಲಸ್ ಲ್ಯಾಂಡ್ ಏನು ಇದೆ ಎಂದು ಒಮ್ಮೆ ನಿಶ್ಚಯವಾದದ್ದು ಪುನಃ ತನಿಖೆಗೆ ತೆಗೆಯಲ್ಪಡುತ್ತದೆ ೪೮ (ಎ) ಒಂದು ಪ್ರಕರಣದ ಬಗ್ಗೆ ಹೇಳಬೇಕಾದರೆ ಒಂದೇ ಭೂಮಿಯನ್ನು ೩ ಜನರಿಗೆ ಕೊಟ್ಟಂಥ ಉದಾಹರಣೆಗಳು ಇವೆ. ಆದುದರಿಂದ ಈವೊತ್ತಿನ ದಿವಸ ಇಂಥಾದ್ದನ್ನು ರಿವ್ಯೂ ಮಾಡುವುದಕ್ಕೆ ಟ್ರಿಬ್ಯೂನಲ್ಸ್‌ಗೆ ಪವರ್ಸ್ ಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಕ್ಲಾಸ್ ೪೦ರ ಪ್ರಕಾರ ರೀಓಪನ್ ಮಾಡುವ ಅವಕಾಶ ಕೊಟ್ಟಿದ್ದೀರಿ. ಇದನ್ನು ಪುನಃ ಈಗ ತಾಸೀಲ್ದಾರರಿಗೆ ಡಿಕ್ಲರೇಷನ್ ಕೊಡಬೇಕು. ಅಲ್ಲಿ ಸರಪ್ಲಸ್ ಲ್ಯಾಂಡ್ ಎಷ್ಟು ಇದೆ, ಎಷ್ಟು ಉಳಿದಿದೆ ಅನ್ನುವುದು ತೀರ್ಮಾನವಾದ ಮೇಲೆ ಅವರಿಗೆ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಈಗ small holder ಅವರ ಆದಾಯವನ್ನು ೨೪೦೦ ರೂಪಾಯಿ ಇದ್ದುದನ್ನು ೪೮೦೦ ರೂಪಾಯಿ ಮಾಡಬೇಕು. ೪೮೦೦ ರೂಪಾಯಿ ಕೂಡ ಬೆಲೆ ಈಗಿನ ಸ್ಥಿತಿಯಲ್ಲಿ ಕಡಿಮೆ ಆದುದರಿಂದ ಸ್ಮಾಲ್ ಹೋಲ್ಡರ್ಸ್‌ಗೂ ಕೂಡ ಇದು ಅನ್ವಯಿಸಬೇಕು ಎಂದು ನಾನು ಒಂದು ಸಲಹೆ ಕೊಡುತ್ತೇನೆ.

Clause 15–Amendment to section 51–sub-clause 3 (iii) reads as follows :—

> "in the case of religious, charitable or other institutions capable of holding property, in the form of an annual payment, as long as the institution exists, of a sum equal to the interest such amount would have fetched..."

ಇದರಲ್ಲಿ ಅದು ಯಾವ ತರಹ ಇಂಟರೆಸ್ಟ್ ಅಂತ ಯಾವುದನ್ನೂ ಹೇಳಿಲ್ಲಾ. ಈ ಇಂಟರೆಸ್ಟ್ ಆಗಾಗ ಬದಲಾವಣೆಯಾಗುತ್ತದೆ. ಬ್ಯಾಂಕ್‌ನ ಇಂಟರೆಸ್ಟ್ ತೆಗೆದುಕೊಂಡರೂ ಕೂಡ ಅದು ಆಗಾಗ ಬದಲಾವಣೆಯಾಗಿ ಕಡಿಮೆಯಾಗುತ್ತದೆ ಎಂದು ಹೇಳುತ್ತೇನೆ. ಈ ಬಗ್ಗೆ ತಾವು ಹೇಳದೇ ಹೋದರೆ ಇವರಲ್ಲಿ ಸ್ಪಷ್ಟವಾಗುವುದಿಲ್ಲ. ಇದರಲ್ಲಿ ರೇಟ್ ಆಫ್ ಇಂಟರೆಸ್ಟ್ ಏನು ಯಾವ ತರಹ ರೇಟಿನಲ್ಲಿ ಹಾಕಿದ್ದೀರಿ ಅನ್ನುವುದನ್ನು ಸ್ಪಷ್ಟಪಡಿಸಬೇಕು ಎಂದು ಹೇಳುತ್ತೇನೆ.

ಈ ತಿದ್ದುಪಡಿ ಮಸೂದೆಯಲ್ಲಿ ಹಲವಾರು ಲೋಪದೋಷಗಳಿರುವುದರಿಂದ, ಬರುವ ಅಧಿವೇಶನದಲ್ಲೂ ಮತ್ತೆ ತಿದ್ದುಪಡಿ ಮಾಡುವ ಸಂದರ್ಭ ಬಂದೀತು; ಅದಕ್ಕೆ ಅವಕಾಶ ಮಾಡಿಕೊಡುವುದು ಬೇಡ. ಆದುದರಿಂದ, ಇದರ ಬಗ್ಗೆ ಅಮೂಲಾಗ್ರವಾಗಿ ಪರಿಶೀಲನೆ ಮಾಡಲು, ದಯವಿಟ್ಟು ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಒಪ್ಪಿಸಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಂಡು, ಮಾನ್ಯ ಅಧ್ಯಕ್ಷರು ನನಗೆ ಹೆಚು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

† ಶ್ರೀ ಡಿ. ವಿ. ವೈಗಾಂವಕರ್ (ಕಾರವಾರ).—ಸ್ವಾಮಿ, ಭೂಸುಧಾರಣಾ ತಿದ್ದುಪಡಿ ಮಸೂದೆಯ ಸೆಕ್ಷನ್ ೩೮ರ ಸಬ್ ಸೆಕ್ಷನ್ (೧)ರಲ್ಲಿ ಕೃಷಿ ಕಾರ್ಮಿಕರಿಗೆ ಸರ್ಕಾರ ಉಪಕಾರ ಅಥವಾ ಕರುಣೆ ತೋರಿಸಿದೆ. ನನ್ನ ಅಭಿಪ್ರಾಯದ ಪ್ರಕಾರ, ಈ ಉಪಕಾರ ಮತ್ತು ಕರುಣೆಯನ್ನು ಸಬ್ ಸೆಕ್ಷನ್ ೨ ಮತ್ತು ೩ರಲ್ಲಿ ಕಸಿದುಕೊಂಡು ಬಿಡಲಾಗಿದೆ ಎಂದು ಹೇಳಬಯಸುತ್ತೇನೆ ಸಬ್ ಸೆಕ್ಷನ್ ೨ರಲ್ಲಿ "if the owner of the site on which the dwelling house is situate bonafide requires the dwelling house for his own use or for any other purpose or if the owner consider that the dwelling house is so located as to cause inconvenience to him he may require the agricultural labourer to shift to a new site belonging to him, subject to the following conditions......" ಈ ರೀತಿ ಇದೆ

ಇದರಲ್ಲಿ "bonafide requires the dwelling house "and" inconvenience" ಎನ್ನುವುದರ ಬಗ್ಗೆ ವ್ಯಾಖ್ಯಾನವನ್ನಾಗಲೀ ಅಥವಾ ವಿವರವನ್ನಾಗಲೀ ಕೊಟ್ಟಿಲ್ಲ. ಆದರೆ, ಬೇರೆ ಶಾಸನ

ಗಳಲ್ಲಿ ಉದಾಹರಣೆಗೆ ಹೌಸ್ ರೆಂಟ್ ಕಂಟ್ರೋಲ್ ಆ್ಯಕ್ಟ್‌ನಲ್ಲಿ what are the bonafides of the landlord ಎನ್ನುವುದರ ಬಗ್ಗೆ ವಿವರಣೆ ಕೊಡಲಾಗಿದೆ. ಕೃಷಿ ಕಾರ್ಮಿಕ ವಾಸ ಮಾಡುವುದು ಸಣ್ಣ ಗುಡಿಸಲಿನಲ್ಲಿ, ಅದರ ಬೆಲೆ ಹೆಚ್ಚೆಂದರೆ ೧೦೦-೨೦೦ ರೂಪಾಯಿ ಕಿಮ್ಮತ್ತಿನದು. ಆದರೂ, ಬೋನಾ ಫೈಡಿ ರಿಕ್ವೈರ್‌ಮೆಂಟ್ ಮತ್ತು ಇನ್‌ಕನ್‌ವೀನಿಯನ್ಸ್ ಪದಗಳಿಗೆ ವಿವರಣೆ ಕೊಡದಿದ್ದರೆ, ಭೂ ಮಾಲೀಕರು ಅದರ ಫಾಯಿದೆ ತೆಗೆದುಕೊಂಡು, ಕೃಷಿ ಕಾರ್ಮಿಕನನ್ನು ಆ ಮನೆಯಿಂದ ಹೊಡೆದು ಓಡಿಸ ಲಿಕ್ಕೆ ಪ್ರಯತ್ನ ಮಾಡಿದರೆ, ಕೃಷಿ ಕಾರ್ಮಿಕನಿಗೆ ಕಾನೂನಿನ ನೆರವಿದ್ದರೂ ಕೂಡ ಅದರಿಂದ ಯಾವ ಅನು ಕೂಲವಾಗುವುದಿಲ್ಲ. ಆದುದರಿಂದ, ಬೋನಾಫೈಡಿ ರಿಕ್ವೈರಮೆಂಟ್ ಮತ್ತು ಇನ್‌ಕನ್‌ವೀನಿಯನ್ಸ್ ಪದಗಳಿಗೆ ವಿವರಣೆಯನ್ನು ಕೊಟ್ಟು, ತೀರ್ಮಾನಗಳು ಕೃಷಿ ಕಾರ್ಮಿಕನ ವಿರುದ್ಧವಾಗದಂತೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ, ಸಬ್ ಸೆಕ್ಷನ್ (೧)ರಲ್ಲಿ ಕೃಷಿ ಕಾರ್ಮಿಕನಿಗೆ ರಕ್ಷಣೆ ಕೊಟ್ಟು, ಅದನ್ನು ಮತ್ತೆ ಸಬ್ ಸೆಕ್ಷನ್ ೨ ಮತ್ತು ೩ ರಲ್ಲಿ ಕಸಿದುಕೊಂಡಂತಾಗುತ್ತದೆ, ಅಲ್ಲದೆ ನಾಳೆ ಇದರ ಬಗ್ಗೆ ನ್ಯಾಯಾಲಯುಗಳಲ್ಲೂ ಪ್ರಶ್ನಿಸಿದರೆ, ಒಂದು ಉಪದ್ರವದ ಪರಿಸರವನ್ನೇ ನಿರ್ಮಾಣ ಮಾಡಿದಂತಾಗುತ್ತದೆ. ಆದುದರಿಂದ, ಸಬ್ ಸೆಕ್ಷನ್ ೨ ಮತ್ತು ೩ರನ್ನು ಸಂಪೂರ್ಣವಾಗಿ ಬಿಟ್ಟುಬಿಟ್ಟು ಸಬ್ ಸೆಕ್ಷನ್ ೧ನ್ನು ಮಾತ್ರ ಇಡಬೇಕೆಂದು ಹೇಳಬಯಸುತ್ತೇನೆ. ಸಬ್ ಸೆಕ್ಷನ್ ೩ರ (ಡಿ) ಕ್ಲಾಜ್‌ನಲ್ಲಿ ಇಂತಿಷ್ಟು ಅವಧಿ ಯೊಳಗೆ ಸಂಬಂಧಪಟ್ಟ ಅಥಾರಿಟಿ ಮುಂದೆ ಕೃಷಿ ಕಾರ್ಮಿಕ ತನ್ನ ಹಕ್ಕನ್ನು ಪ್ರತಿಪಾದಿಸಬೇಕೆಂದಿದೆ. ಆದರೂ, ಭೂಮಾಲಿಕ ಸಬ್ ಸೆಕ್ಷನ್ (೨)ರ ಫಾಯಿದೆ ಪಡೆದುಕೊಂಡು, ಕೃಷಿ ಕಾರ್ಮಿಕನನ್ನು ಅಲ್ಲಿಂದ ಓಡಿಸಲಿಕ್ಕೆ ಪ್ರಯತ್ನ ಮಾಡಬಹುದು. ಆದುದರಿಂದ, ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್‌ನ ಕ್ಲಾಜ್ (೪) ರಲ್ಲಿನ ಒಳ್ಳೆಯ ಉದ್ದೇಶದಿಂದ ಪ್ರೇರಿತರಾಗಿ ಸೆಕ್ಷನ್ ೩ನ್ನು ತಿದ್ದುಪಡಿ ಮಾಡಲಾಗಿದೆ ಅದರ ಉದ್ದೇಶ ಸಫಲವಾಗಬೇಕಾದರೆ ನನ್ನ ಅಭಿಪ್ರಾಯದ ಪ್ರಕಾರ ಸಬ್ ಸೆಕ್ಷನ್ (೧)ನ್ನು ಮಾತ್ರ ಇಟ್ಟುಕೊಂಡು ಸಬ್ ಸೆಕ್ಷನ್ (೨) ಮತ್ತು (೩)ರನ್ನು ಕೈಬಿಡಬೇಕೆಂದು ಪ್ರಾರ್ಥಿಸಿ, ನನಗೆ ಇಷ್ಟು ಮಾತನಾಡಲು ಆಸ್ಪದಮಾಡಿ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(*Madam Deputy Speaker in the Chair*)

† ಶ್ರೀಮತಿ ಅನುಸೂಯ ಗಜಾನನ ಶರ್ಮ (ಅಂಕೋಲ).—ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ಭೂಸುಧಾರಣಾ ತಿದ್ದುಪಡಿ ಮಸೂದೆಯಲ್ಲಿ ಕೆಲವು ಒಳ್ಳೆಯ ವಿಷಯಗಳೂ ಇವೆ ಮತ್ತು ಕೆಲವು ತೊಂದರೆ ದಾಯಕ ಅಥವಾ ದೋಷಪೂರಿತ ವಿಚಾರಗಳೂ ಇವೆ ಎಂದು ಮೊಟ್ಟಮೊದಲನೆಯದಾಗಿ ಹೇಳಬಯಸು ತ್ತೇನೆ. ಋಣ ಪರಿಹಾರ ಶಾಸನದಿಂದ ವಿಶೇಷವಾಗಿ ಹೆಣ್ಣುಮಕ್ಕಳಿಗೆ ಈಗಾಗಲೇ ತೊಂದರೆಯಾಗಿದೆ. ಮತ್ತೆ ಈಗ ಈ ಶಾಸನದಿಂದ, ಹೆಣ್ಣುಮಕ್ಕಳು ತಮ್ಮ ಸ್ವಂತ ಭೂಮಿಯನ್ನು ಸಾಗುವಳಿ ಮಾಡಿಸಿ ಕೊಳ್ಳುವುದರಲ್ಲೂ ತೊಂದರೆಯನ್ನು ಎದುರಿಸಬೇಕಾಗಿ ಬಂದಿದೆ. ಸಾಲ ತೆಗೆದುಕೊಂಡು ಲಗ್ನ ಮಾಡಿಸು ತ್ತಿದ್ದರು ಮತ್ತು ಹಣ ಕೊಟ್ಟು ಜಮೀನನ್ನು ಸಾಗುವಳಿ ಮಾಡಿಸಿಕೊಳ್ಳುತ್ತಿದ್ದರು. ಈಗ ಅದೂ ಇಲ್ಲ ದಂತಾಗಿದೆ. ಈಗ ಈ ತಿದ್ದುಪಡಿ ಮಸೂದೆಯ ಸೆಕ್ಷನ್ ೩೮ ರಲ್ಲಿ ಕೃಷಿ ಕಾರ್ಮಿಕನಿಗೆ ಕೊಟ್ಟಿದ್ದ ವಾಸದ ಮನೆಯನ್ನು ಅವನಿಗೇ ಕೊಟ್ಟುಬಿಡಬೇಕೆಂದು ಮಾಡಿರುವುದು ವಿಶೇಷವಾಗಿ ಹೆಣ್ಣು ಮಕ್ಕಳಿಗ ಬಹಳ ತೊಂದರೆಯಾಗುತ್ತದೆಂದು ಹೇಳುತ್ತೇನೆ. ಪಟ್ಟಣಗಳಲ್ಲಿ ಸಿಗುವ ಹಾಗೆ ಹಳ್ಳಿಗಳಲ್ಲಿ ಬಾಡಿಗೆ ಮನೆಗಳು ಸಿಗುವುದಿಲ್ಲ. ಪರಿಸ್ಥಿತಿ ಹೀಗಿರುವಾಗ, ಹದಿನೈದು ದಿವಸ ಕೆಲಸ ಮಾಡಲು ಬೇರೆ ಊರಿನಿಂದ ಬರುವ ಕೃಷಿ ಕಾರ್ಮಿಕನಿಗೆ ಸಾಮಾನ್ಯವಾಗಿ ತಮ್ಮ ಮನೆಯ ಉಪಗೃಹದಲ್ಲಿ, ಅಂದರೆ ಬಚ್ಚಲು ಮನೆಯಲ್ಲಿ ಅಥವಾ ಬೇರೆ ಕಡೆಯಲ್ಲಿ ಉಳಿದುಕೊಳ್ಳಲು ಅವಕಾಶ ಮಾಡಿಕೊಡುತ್ತಾರೆ ಅಥವಾ ತಮ್ಮ ತೋಟದಲ್ಲಿ ಒಂದು ಗುಡಿಸಲು ಕಟ್ಟಿಕೊಟ್ಟು, ಅವನನ್ನು ಅಲ್ಲೇ ಉಳಿಸಿಕೊಂಡು ಕೆಲಸ ಮಾಡಿಸಿಕೊಳ್ಳಬೇಕಾಗುತ್ತದೆ. ಕೊನೆಗೆ ಆ ಗುಡಿಸಲು ಅವನಿಗೆ ಸೇರುತ್ತದೆಂದು ಈ ಶಾಸನದ ಮೂಲಕ ಹೇಳುವುದಾದರೆ, ಅದರಿಂದ ಹೆಣ್ಣು ಮಕ್ಕಳಿಗೆ ಬಹಳ ತೊಂದರೆಯಾಗುತ್ತದೆ. ಸಾಮಾನ್ಯವಾಗಿ, ಸರ್ಕಾರ ಮಾಡುವುದೆಲ್ಲಾ ''ಹದ್ದನ್ನು ಹೊಡೆದು ಹಾವಿಗೆ ಹಾಕಿದಂತೆ''. ಅವನು ಎಷ್ಟೇ ಬಡವನಾಗಿರಲಿ ಸರ್ಕಾರದಿಂದ ಮಾಡಿದ ಸಾಲವನ್ನು ಅವನು ತೀರಿಸಬೇಕು. ಆದರೆ, ಒಡೆಯನಿಂದ ಮಾಡಿದ ಸಾಲವನ್ನು ಮಾತ್ರ ತೀರಿಸುವ ಹಾಗಿಲ್ಲ. ಹಾಗೆಯೇ, ಖಾಸಗಿ ಒಡೆಯನ ಜಮೀನಿನಲ್ಲಿ ಮನೆ ಕಟ್ಟಿಕೊಂಡಿದ್ದರೆ ಅದು ಕೃಷಿ ಕಾರ್ಮಿಕ ನಿಗೇ ಸೇರುತ್ತದೆ. ಆದರೆ, ಸರ್ಕಾರಿ ಜಾಗದಲ್ಲಿ ಮನೆಯನ್ನು ಕಟ್ಟಿಕೊಂಡಿದ್ದರೆ, ಅದು ಅವನಿಗೆ ಸೇರು ವುದಿಲ್ಲ. ಇಂತಹ ಶಾಸನಗಳನ್ನು ಮಾಡಿ, ಸರ್ಕಾರ ಜನರಿಗೆ ಹೆಚ್ಚು ಹೆಚ್ಚು ತೊಂದರೆ ಕೊಡುತ್ತಿದೆ ಎಂದು ಹೇಳಬಯಸುತ್ತೇನೆ.

ಇನ್ನು ಭೂ ನ್ಯಾಯ ಮಂಡಲಿಗಳ ಬಗ್ಗೆ ಹೇಳುವುದಾದರೆ, ಬಹುತೇಕ ಮಂಡಲಿಗಳು ಅಸಿಸ್ಟೆಂಟ್ ಕಮೀಷನರೊಬ್ಬರನ್ನು ಬಿಟ್ಟರೆ, ಅವು ಕಾಂಗ್ರೆಸ್ ಮಂಡಲಿಗಳಾಗಿ ಬಿಟ್ಟಿವೆ. ಇದರಿಂದಾಗಿ, ಸಾಮಾನ್ಯ ಜನರಿಗೆ ನ್ಯಾಯ ಸಿಕ್ಕುವುದು ಬಹಳ ಕಷ್ಟವಾಗಿದೆ. ಒಂದೇ ಪಕ್ಷದವರು ಒಂದು ಸಮಿತಿಯಲ್ಲಿ ಕುಳಿತು ಕೊಂಡು ಶ್ರೀಸಾಮಾನ್ಯನ ಕಷ್ಟಗಳನ್ನು ನಿವಾರಣೆ ಮಾಡುತ್ತಾರೆಂದು ಹೇಳುವುದಕ್ಕೆ ಸಾಧ್ಯವಿಲ್ಲ, ಅವರಿಗೆ ನ್ಯಾಯ ಸಿಕ್ಕುವುದಿಲ್ಲ. ಕೇರಳ ಮತ್ತು ಆಂಧ್ರ ಪ್ರದೇಶಗಳಲ್ಲಿ ಮಠ ಮತ್ತು ದೇವಸ್ಥಾನದ ಜಮೀನು ಗಳನ್ನು ಸರ್ಕಾರ ತೆಗೆದುಕೊಳ್ಳಲಿಲ್ಲ. ಆದರೆ, ನಮ್ಮ ರಾಜ್ಯದಲ್ಲಿ ಆ ಜಮೀನುಗಳನ್ನೂ ಕೂಡ ತೆಗೆದು ಕೊಂಡರು. ಅದಕ್ಕೆ ಸರ್ಕಾರದವರು ಕೊಡುವ ಪರಿಹಾರವು ಯಾವುದಕ್ಕೂ ಸಾಕಾಗುವುದಿಲ್ಲ. ಅಲ್ಲದೆ, ಈ ಪರಿಹಾರವನ್ನು ಪಡೆಯಬೇಕಾದರೆ ವರ್ಷಂಪ್ರತಿ ಹಣವನ್ನು ಖರ್ಚು ಮಾಡಬೇಕಾಗಿದೆ. ಆದುದರಿಂದ, ಈ ರೀತಿಯ ತೊಂದರೆ ತೊಡಕುಗಳು ಆದಷ್ಟು ಮಟ್ಟಿಗೆ ಬರದೆ ಇರುವಂತೆ ಮಾಡಿದರೆ ಒಳ್ಳೆಯದೆಂದು ಹೇಳಬಯಸುತ್ತೇನೆ,

೪–೦೦ ಪಿ. ಎಂ.

ಮತ್ತು ಸಿರಸಿ ಹಾಗೂ ಸಿದ್ದಾಪುರ ಮುಂತಾದ ಮಲೆನಾಡು ಪ್ರದೇಶದಲ್ಲಿ ಕೂಲಿಗಾರರು ಬೇರೆ ಊರಿನಿಂದ ಬರಬೇಕಾಗುತ್ತದೆ. ಆದ್ದರಿಂದ ಅವರಿಗೆ ಭೂಮಾಲೀಕರು ಮನೆಗಳನ್ನು ಕಟ್ಟಿಸಿಕೊಟ್ಟು ಅವರು ಆ ಮನೆಗಳಲ್ಲಿ ಉಳಿದು ಕೊಳ್ಳುವುದಕ್ಕೆ ಅವಕಾಶವನ್ನು ಕೊಡುವಂತೆ ಒಂದು ಪದ್ಧತಿ ಇದೆ. ಈ ಕಾಯಿದೆಯನ್ನು ಮಾಡುವುದರಿಂದ ಭೂ ಒಡೆಯರಿಗೂ ತೊಂದರೆಯಾಗಬಹುದು, ಕೂಲಿಗಾರರಿಗೂ ತೊಂದರೆಯಾಗುತ್ತದೆ. ಇಲ್ಲಿಯತನಕ ಕೂಲಿಗಾರರಿಂದ ಭೂಮಾಲೀಕರು ಯಾವುದೇ ಕೆಲಸವನ್ನು ಮಾಡಿಸಿ ಕೊಳ್ಳಬೇಕಾದರೂ ಕೂಡ ತಮ್ಮ ಜಾಗದಲ್ಲಿಯೇ ಅವರಿಗೆ ಮನೆಗಳನ್ನು ಕಟ್ಟಿಸಿಕೊಟ್ಟು ಅವರಿಗೆ ಅನು ಕೂಲ ಮಾಡಿಕೊಡುತ್ತಿದ್ದರು. ಈ ಕಾಯಿದೆಯು ಜಾರಿಗೆ ಬಂದರೆ ಆ ಕೂಲಿಗಾರರು ಭೂಮಾಲೀಕರ ಜಾಗ ವನ್ನು ಬಿಟ್ಟು ಬೇರೆ ಸರ್ಕಾರದ ಜಾಗವನ್ನೋ ಅಥವಾ ಬೇರೆ ಯಾವುದೋ ಜಾಗವನ್ನು ಗಳಿಸಿಕೊಂಡು ಮನೆಗಳನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಜೊತೆಗೆ ಅವರು ಕೂಲಿ ಕೆಲಸಕ್ಕೆ ಬರಬೇಕಾದರೆ ೨-೩ ಮೈಲಿ ದೂರದಿಂದ ನಡೆದುಕೊಂಡು ಕೆಲಸಕ್ಕೆ ಬರಬೇಕಾಗುತ್ತದೆ ಎಷ್ಟೊ ಕಡೆಗಳಲ್ಲಿ ಕೆಲಸದ ಕಾಲದಲ್ಲಿ ಕೂಲಿ ಗಾರರು ೨-೩ ದಿವಸ ಉಳಿದುಕೊಳ್ಳಬೇಕಾಗುತ್ತದೆ. ಆ ಕೆಲಸ ಮುಗಿದ ಮೇಲೆ ಅವರು ತಮ್ಮ ಊರಿಗೆ ಹೋಗುವ ಪದ್ಧತಿ ಇದೆ. ಈ ಕಾಯಿದೆ ಬಂದರೆ ಅವರಿಗೂ ತೊಂದರೆಯಾಗುತ್ತದೆ. ಕೂಲಿಗಾರರು ಯಾವುದೇ ಕೆಲಸವನ್ನು ಮಾಡಬೇಕಾದರೂ ಕೂಡ ಭೂಮಾಲೀಕರ ಜಮೀನಿನಲ್ಲಿ ತಮ್ಮದೇ ಆದ ಮನೆ ಗಳನ್ನು ಕಟ್ಟಿಕೊಂಡು ತಮ್ಮ ಸಾಮಾನುಗಳನ್ನು ಅದರಲ್ಲಿ ಇಟ್ಟುಕೊಂಡು ಕೆಲಸ ಮಾಡುತ್ತಿದ್ದರು. ಅವರಿಗೂ ಇದರಿಂದ ತೊಂದರೆಯಾಗುತ್ತದೆ. ಕೂಲಿಗಾರರಿಗೆ ಮನೆಗಳನ್ನು ಕಟ್ಟಿಕೊಡಬೇಕು ಎನ್ನುವ ಒಂದು ಕಾನೂನು ಏನಿದೆ ಅದಕ್ಕೆ ಈ ಕಾಯಿದೆ ತೊಂದರೆಯಾಗಬಹುದು. ಈ ಮಸೂದೆಯಲ್ಲಿ ಟೆನೆಂಟ್ಸ್ ಆರ್ ಅದರ್‌ವೈಜ್ ಎಂದು ಏನಿದೆ ಅದನ್ನು ಸ್ವಲ್ಪ ಕ್ಲಿಯರ್ ಮಾಡಬೇಕು. ಟೆನೆಂಟ್ ಆ ಜಮೀನಿನಲ್ಲಿ ಇಂತಿಷ್ಟು ವರ್ಷ ಖಾಯಂ ಆಗಿ ಕೆಲಸ ಮಾಡಬೇಕು, ಎಂದು ಒಂದು ನಿರ್ದಿಷ್ಟವಾದ ಶಬ್ದ ವನ್ನು ಹಾಕಿಲ್ಲ. ಸುಮ್ಮನೆ ಟೆನೆಂಟ್ಸ್ ಆರ್ ಅದರ್‌ವೈಜ್ ಎಂದು ಹೇಳಿ ಈ ರೀತಿ ಇಡುವುದು ಒಳ್ಳೆಯ ದಲ್ಲ. ಈಗ ಊರುಗಳಲ್ಲಿ ನಿರುದ್ಯೋಗಿ ಜನಗಳು ಏನಿದ್ದಾರೆ ಅವರು ಒಬ್ಬೊಬ್ಬರಿಗೊಬ್ಬರಿಗೆ ಹೇಳಿಕೊಟ್ಟು ಅವರ ಜಮೀನನ್ನು ಇವರಿಗೆ ಮಾರಿದ್ದಾರೆ ಎಂದು ಡಿಕ್ಲರೇಷನ್ ಕೊಡಿಸುವುದು ಇವರ ಜಮೀನನ್ನು ಅವರಿಗೆ ಮಾರಿದ್ದೇವೆ ಎಂದು ಡಿಕ್ಲೆರೇಷನ್ ಕೊಡುವುದು ಈ ರೀತಿ ಸುಳ್ಳು ಡಿಕ್ಲರೇಷನ್ ಮಾಡಿಸಿ ಅನೇಕ ಜನಗಳಿಗೆ ತುಂಬಾ ತೊಂದರೆಯನ್ನುಂಟುಮಾಡಿದ್ದಾರೆ. ಅಡವು ಇಟ್ಟಿದ್ದ ಸಾಮಾನುಗಳನ್ನು ಕೊಡು ವುದಿಲ್ಲ ಎಂದು ಸುಳ್ಳು ಕೇಸುಗಳನ್ನು ಕೊಟ್ಟು ಎಷ್ಟೋ ಜನಗಳಿಂದ ದುಡ್ಡು ವಸೂಲು ಮಾಡಿದ್ದಾರೆ. ಇಂಥವರ ಮನೆಯಲ್ಲಿ ನಾವು ಇಂತಿಂಥಾ ಸಾಮಾನುಗಳನ್ನು ಅಡವುಇಟ್ಟಿದ್ದೆವು ಅವರು ಕೊಡಲಿಲ್ಲ ಎಂದು ಹೇಳಿದ್ದೂ ಅಲ್ಲದೇ ಸುಳ್ಳು ಸುಳ್ಳು ಸಾಕ್ಷಿಗಳನ್ನು ಹೇಳಿ ಅವರಿಂದ ಹಣವನ್ನೂ ಸಹ ವಸೂಲು ಮಾಡಿ ದ್ದಾರೆ ಮತ್ತು ಅನೇಕ ಮನೆಗಳನ್ನು ಕೂಡ ಜಪ್ತಿ ಮಾಡಿಸಿದ್ದಾರೆ. ಆದ್ದರಿಂದ ಟೆನೆಂಟ್ ಆರ್ ಅದರ್ ವೈಜ್ ಎನ್ನುವುದಕ್ಕೆ ಒಂದು ಸರಿಯಾದ ನಿರ್ದಿಷ್ಟವಾದ ಶಬ್ದಗಳು ಇಲ್ಲದಿದ್ದರೆ ತೊಂದರೆಯಾಗುತ್ತದೆ, ನಿರ್ದಿಷ್ಟವಾದ ಧ್ಯೇಯ ಧೋರಣೆ ಈ ತಿದ್ದುಪಡಿಯಲ್ಲಿ ಇಲ್ಲದೇ ಇರುವುದರಿಂದ ಇಂಥಾ ತಿದ್ದುಪಡಿ ಗಳನ್ನು ಮಾಡಿ ನಿರುದ್ಯೋಗಿಗಳಿಗೆ ಹೆಚ್ಚಿನ ಅವಕಾಶವನ್ನು ಮಾಡಿಕೊಟ್ಟಂತಾಗುತ್ತದೆಯೇ ಹೊರತು ಇದರಿಂದ ಹೆಚ್ಚಿನ ಪ್ರಯೋಜನ ಆಗುವುದಿಲ್ಲ. ಟೆನೆಂಟ್ ಅಂದರೆ ಅವನು ಎಷ್ಟು ವರ್ಷ ಖಾಯಂ ಆಗಿ ಇರಬೇಕು ಎಂದು ನಿರ್ದಿಷ್ಟವಾಗಿ ಇದರಲ್ಲಿ ಹೇಳಿದರೆ ಸರಿಹೋಗುತ್ತದೆ. ಅದು ಇಲ್ಲದೆ ಇರುವುದರಿಂದ

ಈ ತಿದ್ದುಪಡಿ ಸರಿಯಾಗಿಲ್ಲ. ಇದರಲ್ಲಿ ಇರತಕ್ಕ ಕೆಲವು ಒಳ್ಳೆಯ ತಿದ್ದುಪಡಿಗಳು ಇವೆ. ಕೂಲಿಗಾರರ ಹಿತದೃಷ್ಟಿ ಇದರಲ್ಲಿ ಇದೆ. ಆದರೆ ಇದರಲ್ಲಿ ಕೆಲವು ದೋಷಗಳು ಏನಿವೆ ಅವುಗಳನ್ನು ಸರಿಪಡಿಸುವುದಕ್ಕೆ ಮತ್ತೊಂದು ತಿದ್ದುಪಡಿಯನ್ನು ತರುವುದಕ್ಕೆ ನನ್ನ ಸ್ವಾಗತ ಇದೆ. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ

† ಶ್ರೀ ಕಾಪು ಸಂಜೀವಶೆಟ್ಟಿ (ಕುಂದಾಪುರ).—ಮಾನ್ಯ ಸಭಾಧ್ಯಕ್ಷಿಣಿಯವರೇ ಇವೊತ್ತಿನದಿವಸ ಮಾನ್ಯ ಕಂದಾಯ ಮಂತ್ರಿಗಳು ಕರ್ನಾಟಕ ಭೂಸುಧಾರಣಾ ಮಸೂದೆಗೆ ಕೆಲವು ತಿದ್ದುಪಡಿಗಳನ್ನು ತಂದಿದ್ದಾರೆ. ಇದರಲ್ಲಿ ಹೆಚ್ಚಿನ ತಿದ್ದುಪಡಿಗಳು ಬಹಳಒಳ್ಳೆಯವುಗಳಾಗಿರುವುದರಿಂದ ಅವುಗಳನ್ನು ನಾನು ಸ್ವಾಗತಿಸುತ್ತೇನೆ ಮುಖ್ಯವಾಗಿ ನಮ್ಮ ಕರ್ನಾಟಕ ಭೂಸುಧಾರಣಾ ಕಾನೂನು ಜಾರಿಗೆ ಬರುವಾಗ ಒಕ್ಕಲುಗಳು ತಮ್ಮ ಭೂಮಿಯನ್ನು ಡಿಕ್ಲೇರ್ ಮಾಡಿಕೊಂಡ ಮೇಲೆ ಅವರು ಸಾಗು ಮಾಡುವ ಭೂಮಿಯನ್ನು ಟ್ರಿಬ್ಯುನಲ್‌ನವರು ತನಿಖೆ ಮಾಡಿದ ಮೇಲೆ ಅವರಿಗೆ ಒಂದು ಪಟ್ಟಾ ಕೊಡುವ ಬದಲು ಅವರಿಗೆ ಒಂದು ಸಾಗುವಳಿ ಚೀಟಿಯನ್ನು ಮಾತ್ರ ಕೊಡುತ್ತಿದ್ದಾರೆ. ಆ ಜಮೀನಿಗೆ ಧನಿಕನಿಗೆ ಸರ್ಕಾರದವರು ಪರಿಹಾರವನ್ನು ಕೊಡುತ್ತಾರೆ. ಟೆನೆಂಟ್ ಅಥವಾ ಗೇಣಿದಾರ ಆ ಭೂಮಿಯ ಬೆಲೆಯನ್ನು ಸರ್ಕಾರಕ್ಕೆ ೨೦ ಕಂತುಗಳಲ್ಲಿ ಕೊಡಬೇಕಾಗುತ್ತದೆ. ಇದನ್ನು ಲ್ಯಾಂಡ್ ಡೆವಲಪಮೆಂಟ್ ಬ್ಯಾಂಕ್ ಮೂಲಕ ಗೇಣಿದಾರ ತೆಗೆದುಕೊಂಡು ಸರ್ಕಾರದ ಖಜಾನೆಗೆ ತುಂಬಬೇಕಾಗುತ್ತದೆ. ಆದ್ದರಿಂದ ಈ ಒಂದು ಕಾನೂನನ್ನು ಮಾನ್ಯ ಮಂತ್ರಿಗಳು ಸ್ವಲ್ಪ ದುರಸ್ತು ಮಾಡಬೇಕು. ರೈತ ಧನಿಕನಿಗೆ ಕೊಡುವ ಪರಿಹಾರವನು ೨೦ ಕಂತುಗಳಲ್ಲಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೆ ಕೊಟ್ಟು ನಂತರ ಅವನು ಭೂಮಿಯನ್ನು ಪಡೆಯಬೇಕು ಎಂದರೆ ಬಡ ರೈತರಿಗೆ ಬಹಳ ತೊಂದರೆಯಾಗುತ್ತದೆ. ಇದರಲ್ಲಿ ಶೇಕಡ ೯೦ ರಷ್ಟು ರೈತರು ತೀರಾ ಬಡವರು. ಆದ್ದರಿಂದ ಧನಿಕನಿಗೆ ಕೊಡಬೇಕಾದ ಪರಿಹಾರವನ್ನು ಸರ್ಕಾರದವರೇ ಕೊಟ್ಟು ರೈತನಿಗೆ ಭೂಮಿಯನ್ನು ಕೊಡುವ ವ್ಯವಸ್ಥೆಯನ್ನು ಮಾಡಿದರೆ ಆದರಿಂದ ಸರ್ಕಾರಕ್ಕೆ ಅಷ್ಟು ಹೆಚ್ಚಿನ ನಷ್ಟವೇನೂ ಆಗುವುದಿಲ್ಲ. ನಮ್ಮ ಸರ್ಕಾರದ ಬಜೆಟ್ಟು ೬೫೦ ಕೋಟಿ ರೂಪಾಯಿಗಳು ಇರುವಾಗ ಈ ಭೂಮಾಲೀಕರಿಗೆ ಪರಿಹಾರವನ್ನು ಕೊಡುವುದಕ್ಕೆ ೧೦–೨೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದು ಅಂಥಾ ದೊಡ್ಡ ಹೊರೆಯೇನೂ ಆಗವುದಿಲ್ಲ. ಈಗ ದೊಡ್ಡ ದೊಡ್ಡ ಭೂಮಾಲೀಕರಿಗೆ ಸರ್ಕಾರದವರು ಪರಿಹಾರವನ್ನು ಕೊಡುವ ಬಗ್ಗೆ ಬಾಂಡುಗಳನ್ನು ಕೊಡಬಹುದು. ಆದರೆ ಸಣ್ಣ ಸಣ್ಣ ಭೂಮಾಲೀಕರು ಏನಿದ್ದಾರೆ ಅವರಿಗೆ ಕೂಡಲೇ ಪರಿಹಾರವನ್ನು ಕೊಡಲೇ ಬೇಕು. ಈ ಬಗ್ಗೆ ಶ್ರೀಮಾನ್ ಶೀರ್ನಾಳಿ ಚಂದ್ರಶೇಖರ್ ಅವರು ಹೇಳಿದ್ದಾರೆ. ಅವರು ಹೇಳಿದ್ದನ್ನು ನಾನು ಸಮರ್ಥನೆ ಮಾಡುತ್ತೇನೆ. ಆ ರೀತಿ ಒಂದು ತಿದ್ದುಪಡಿಯನ್ನು ತರುವುದು ಸೂಕ್ತ. ಈ ದಿಸೆಯಲ್ಲಿ ಮಾನ್ಯ ಕಂದಾಯ ಮಂತ್ರಿಗಳು ಈ ಕಾನೂನು ತಿದ್ದುಪಡಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಹೇಳಬಯಸುತ್ತೇನೆ.

ಇನು ಕೃಷಿ ಕಾರ್ಮಿಕರಿಗೆ ಮನೆಗಳನ್ನು ಕೊಡುವ ವಿಷಯದಲ್ಲಿ ಸರ್ಕಾರದವರು ಏನು ಒಂದು ತಿದ್ದುಪಡಿಯನ್ನು ತಂದಿದ್ದಾರೆ ಇದನ್ನು ನಾನು ಸ್ವಾಗತಿಸುತ್ತೇನೆ. ಏತಕ್ಕೆಂದರೆ ಕಾರ್ಖಾನೆಯ ಕೂಲಿಗಾರರಿಗೆ ಬೇಕಾದಷ್ಟು ಸವಲತ್ತುಗಳನ್ನು ಕೊಡುತ್ತಿದ್ದಾರೆ. ಅವರಿಗೆ ಬೋನಸ್ ಉಂಟು. ಅವರಿಗೆ ನಿಗದಿಯಾದ ವೇತನ ಉಂಟು. ಇವೊತ್ತು ತಲೆತಲಾಂತರದಿಂದ ಬಂದ ಕೃಷಿ ಕಾರ್ಮಿಕರು, ರೈತರು ದೇಶದ ಅಭಿವೃದ್ಧಿಗಾಗಿ ಬಹಳವಾಗಿ ದುಡಿದಿದ್ದಾರೆ. ಇಷ್ಟರವರೆಗೆ ಅವರಿಗೆ ಯಾವ ರಿಯಾಯಿತಿಯನ್ನೂ ಸರ್ಕಾರದವರು ಕೊಟ್ಟಿಲ್ಲ. ಈಗ ಈ ಒಂದು ಕೆಲಸವನ್ನು ಸರ್ಕಾರದವರು ಮಾಡಿದ್ದಾರೆ ಇದರಲ್ಲಿ ಸ್ವಲ್ಪ ಮಟ್ಟಿನ ದೋಷ ಇದ್ದರೆ ಇದನ್ನು ದುರಸ್ತು ಮಾಡಿಕೊಳ್ಳಬೇಕು. ಕೃಷಿ ಕಾರ್ಮಿಕರಿಗೆ ಮನೆಗಳನ್ನು ಕೊಡುವ ಬಗ್ಗೆ ಏನು ಒಂದು ಕಾನೂನು ಸರ್ಕಾರದವರು ಮಾಡಿದ್ದಾರೆ ಅದರ ಬಗ್ಗೆ ಅವನು ನಿಜವಾಗಿ ಕೃಷಿ ಕೆಲಸ ಮಾಡಿಕೊಂಡಾ ಖಾಯಂ ಆಗಿ ಯಾರು ಇದ್ದಾರೆಯೋ ಅಂಥವರಿಗೆ ಮಾತ್ರ ಈ ಸವಲತ್ತನ್ನು ಕೊಡಬೇಕು. ಮನೆ ಕಟ್ಟಿಕೊಳ್ಳಲು ೫ ಸೆಂಟ್ ಜಾಗವನ್ನು ಕೊಡಬೇಕೆಂದು ಇದೆ. ಆದ್ದರಿಂದ ಈ ಒಂದು ಕಾನೂನು ಒಳಗಡೆ ಬರುವಂಥಾವರಿಗೆ ಮಾತ್ರ ಆ ಒಂದು ಸವಲತ್ತನ್ನು ಕೊಡಬೇಕು ಎಂದು ಹೇಳುತ್ತೇನೆ ಮತ್ತು ಇದರಲ್ಲಿ ಧನಿಕರಿಗೆ ತೊಂದರೆ ಬಾರದ ರೀತಿಯಲ್ಲಿ ಆ ಒಂದು ಸವಲತ್ತನ್ನು ಕೊಡುವ ಹಾಗೆ ವ್ಯವಸ್ಥೆ ಮಾಡಬೇಕು. ಎಂದು ಮತ್ತೊಮ್ಮೆ ಹೇಳಬಯಸುತ್ತೇನೆ ಇನ್ನು ಮಾನ್ಯ ಕಂದಾಯ ಮಂತ್ರಿಗಳಲ್ಲಿ ಮತ್ತೊಂದು ವಿನಂತಿ ಏನೆಂದರೆ ಜನತಾ ವಸತಿ ಯೋಜನೆಯಲ್ಲಿ ಭೂಮಿ ಇಲ್ಲದೆ ಇರುವವರಿಗೆ ಮನೆ ನಿವೇಶನವನ್ನು ಕೊಟ್ಟು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಸಹಾಯ ಮಾಡುವ ಬಗ್ಗೆ ಸರ್ಕಾರದವರು ಈಗ ಏನು ಹಣ ಸಹಾಯ ಮಾಡುತ್ತಿದ್ದಾರೆ ಅದು ಸಾಕಾಗುವುದಿಲ್ಲ.

ಆದ್ದರಿಂದ ಈಗ ಕೊಡುವ ಹಣಕ್ಕಿಂತ ಸ್ವಲ್ಪ ಹೆಚ್ಚು ಹಣವನ್ನು ಕೊಟ್ಟರೆ ಎಂದರೆ ೩೫೦೦ ರೂಪಾಯಿಗಳನ್ನು ಕೊಟ್ಟರೆ ಅವರು ಸ್ವಲ್ಪ ಮಟ್ಟಿಗೆ ಪಕ್ಕಾ ಮನೆಗಳನ್ನು ಕಟ್ಟಿಕೊಂಡು ಇರುವುದಕ್ಕೆ ಅನುಕೂಲವಾಗುತ್ತದೆಂದು ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಲ್ಯಾಂಡ್ ಟ್ರಿಬ್ಯುನಲ್ ಮೀಟಿಂಗ್‌ಗಳಿಗೆ ಸದಸ್ಯರು ೩ ಮೀಟಿಂಗ್‌ಗಳಿಗೆ ಬಾರದಿದ್ದರೆ ಅಂಥವರನ್ನು ವಜಾ ಮಾಬೇಕೆಂದು ಏನು ಒಂದು ಕಾನೂನು ಇತ್ತು ಅದನ್ನು ತಿದ್ದುಪಡಿ ಮಾಡಿದ್ದಾರೆ. ಅದು ಸಂತೋಷದ ವಿಷಯ.

ಇನ್ನು ಒಕ್ಕಲುಗಳು, ಗೇಣಿದಾರರು ಡಿಕ್ಲರೇಷನ್ ಕೊಡುವುದಕ್ಕೆ ಅರ್ಜಿ ಸಲ್ಲಿಸಲು ೩/೬ ತಿಂಗಳು ಕಾಲಾವಕಾಶ ಕೊಡಬೇಕು ಎಂದು ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಇದು ಸರಿಯಲ್ಲ. ಇದರಿಂದ ಬೇನಾಮಿ ಡಿಕ್ಲರೇಷನ್ ಬರುವುದಕ್ಕೆ ಅವಕಾಶವಾಗುತ್ತದೆ. ಇದರಿಂದ ತುಂಬಾ ಅನ್ಯಾಯವಾಗುತ್ತದೆ. ಡಿಕ್ಲರೇಷನ್ ಕೊಡುವವರು ಸುಳ್ಳು ಡಿಕ್ಲರೇಷನ್ ಕೊಡುತ್ತಾರೆ ಇದರಿಂದ ಮತ್ತಷ್ಟು ಗೊಂದಲಕ್ಕೆ ಅವಕಾಶವಾಗುತ್ತದೆ. ಸರ್ಕಾರದವರು ಯಾವ ಉದ್ದೇಶದಿಂದ ಡಿಕ್ಲರೇಷನ್‌ಗೆ ಕೊಡುವುದಕ್ಕೆ ಅರ್ಜಿಯನ್ನು ಸಲ್ಲಿಸಲು ಕಾಲಾವಕಾಶವನ್ನು ಕೊಟ್ಟಿದ್ದಾರೆಯೋ ಆ ಉದ್ದೇಶ ಈಡೇರುವುದಿಲ್ಲ. ಲ್ಯಾಂಡ್ ಟ್ರಿಬ್ಯುನಲ್ ಸಮಸ್ಯೆ ಮತ್ತಷ್ಟು ಗೊಂದಲವಾಗುತ್ತದೆ. ಆದ್ದರಿಂದ ಡಿಕ್ಲರೇಷನ್ ಕೊಡುವುದಕ್ಕೆ ಟೈಮ್ ಎಕ್ಸ್‌ಟೆಂಡ್ ಮಾಡಬಾರದು ಎಂದು ನಾನು ಹೇಳಬಯಸುತ್ತೇನೆ.

ಇನ್ನು ಕೊನೆಯದಾಗಿ ಟ್ರಿಬ್ಯುನಲ್ ಕಾರ್ಯಕ್ರಮಗಳನ್ನು ನಡೆಸುವುದಕ್ಕೆ ರೆಗ್ಯುಲ್‌ರ್ ಅಸಿಸ್ಟೆಂಟ್ ಕಮಿಷನರ್, ಮತ್ತು ಡೆಪ್ಯುಟಿ ಕಮಿಷನರನ್ನು ನೇಮಕ ಮಾಡುವುದಕ್ಕೆ ಬದಲಾಗಿ ಅದಕ್ಕೆ ಪ್ರತ್ಯೇಕವಾಗಿ ಸ್ಪೆಷಲ್ ಆಗಿ ಅಸಿಸ್ಟೆಂಟ್ ಕಮಿಷನರ್ ಮತ್ತು ಡೆಪ್ಯುಟಿ ಕಮಿಷನರನ್ನು ನೇಮಕ ಮಾಡುವುದು ಒಳ್ಳೆಯದು. ಏತಕ್ಕೆಂದರೆ ಅವರು ರೆಗ್ಯುಲರ್ ಕೆಲಸ ಮಾಡಬೇಕಾಗಿರುವುದರಿಂದ ಲ್ಯಾಂಡ್ ಟ್ರಿಬ್ಯುನಲ್ ಕೆಲಸಕಾರ್ಯಗಳು ಸರಿಯಾಗಿ ಆಗುವುದಿಲ್ಲ. ಅವರಿಗೆ ರೆವಿನ್ಯೂ ಇಲಾಖೆಯ ಕೆಲಸಕಾರ್ಯಗಳು ಬೇಕಾದಷ್ಟು ಉಂಟು. ಅದಕ್ಕೆ ಅವರಿಗೆ ಸಮಯ ಸಿಕ್ಕುವುದಿಲ್ಲ. ಹೀಗಿರುವಾಗ ಅವರಿಗೆ ಟ್ರಿಬ್ಯುನಲ್ ಕೆಲಸಗಳನ್ನು ಮಾಡುವುದಕ್ಕೆ ಕಷ್ಟವಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಸುಮಾರು ೧ ಲಕ್ಷ ೬೭ ಸಾವಿರ ಡಿಕ್ಲರೇಷನ್ ಅರ್ಜಿಗಳು ಬಂದಿದ್ದು ಅವುಗಳಲ್ಲಿ ಮೂರನೇ ಒಂದು ಅಂಶಕೂಡ ಇನ್ನೂ ತೀರ್ಮಾನವಾಗಿಲ್ಲ. ಆದ್ದರಿಂದ ಈ ಅರ್ಜಿಗಳು ಆದಷ್ಟು ಜಾಗ್ರತೆ ತೀರ್ಮಾನವಾಗಬೇಕಾದರೆ ಟ್ರಿಬ್ಯುನಲ್‌ಗಳಿಗೆ ಸ್ಪೆಷಲ್ ಅಧಿಕಾರಿಗಳನ್ನು ನೇಮಕ ಮಾಡಿ ಆದಷ್ಟು ಜಾಗ್ರತೆ ಡಿಕ್ಲರೇಷನ್ ಅರ್ಜಿಗಳು ತೀರ್ಮಾನವಾಗುವ ಹಾಗೆ ಮಾಡಿ ಸಹಕರಿಸಬೇಕು ಎಂದು ಹೇಳಿ ಈ ಸಂದರ್ಭದಲ್ಲಿ ನನಗೆ ಮಾತನಾಡುವುದಕ್ಕೆ ಮಾನ್ಯ ಅಧ್ಯಕ್ಷರು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ವಿ. ಕಕ್ಕಿಲಾಯ (ವಿಟ್ಲ್). – ಸನ್ಮಾನ್ಯ ಸಭಾಧ್ಯಕ್ಷಿಣಿಯವರೆ, ಈ ಒಂದು ಮಸೂದೆಯನ್ನು ಈ ಸದನದ ಮುಂದೆ ತಂದಿರುವುದಕ್ಕೆ ಮೊದಲನೆಯದಾಗಿ ಮಾನ್ಯ ಕಂದಾಯ ಸಚಿವರನ್ನೂ ಮತ್ತು ಸರ್ಕಾರದವರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಈ ಮಸೂದೆಯ ಉದ್ದೇಶಗಳನ್ನು ವಿವರಿಸುತ್ತಾ ಹಲವಾರು ವಿಚಾರಗಳನ್ನು ಮಾನ್ಯ ಸಚಿವರು ಹೇಳಿದ್ದಾರೆ. ಅದರಲ್ಲಿ ಮುಖ್ಯವಾಗಿ ಕಳೆದ ೧೯೭೪ ನೇ ಇಸವಿಯಿಂದೀಚೆಗೆ ಭೂಸುಧಾರಣೆ ಕಾನೂನನ್ನು ಜಾರಿಗೆ ತರುವಾಗ ಏನೇನು ತೊಡಕುಗಳು ಅಡ್ಡ ಬಂದುವು ಅವುಗಳನ್ನು ಹೆಜ್ಜೆ ಹೆಜ್ಜೆಗೂ ತಿದ್ದುಪಡಿ ತಂದು ನಿವಾರಣೆ ಮಾಡತಕ್ಕ ಕ್ರಮಗಳನ್ನು ಅನುಸರಿಸಿಕೊಂಡು ಬಂದಿದ್ದಾರೆ. ಈಗಲೂ ಸಹ ಅದೇ ರೀತಿಯ ಕೆಲವು ತಿದ್ದುಪಡಿಗಳನ್ನು ಇಲ್ಲಿ ತೆಗೆದುಕೊಂಡು ಬಂದಿದ್ದಾರೆ. ಇದರಲ್ಲಿ ಮುಖ್ಯವಾದ ತಿದ್ದುಪಡಿ ಎಂದರೆ ಕ್ಲಾಸ್ ೭ ರಲ್ಲಿ ಕೃಷಿ ಕಾರ್ಮಿಕರಿಗೆ ಅವರು ಇರುವಂತಹ ಮನೆ ಮತ್ತು ಅದಕ್ಕೆ ಲಗತ್ತಾದ ಸ್ಥಳದಲ್ಲಿ ಮಾಲೀಕತ್ವ ಕೊಡತಕ್ಕಂಥ ಒಂದು ಹೊಸ ಹೆಜ್ಜೆಯನ್ನು ಸರ್ಕಾರ ಇಟ್ಟಿದೆ. ಆದರೆ ಇದು ಸಾಕಷ್ಟು ಮುಂದವರಿಯದೇ ಇರುವುದರಿಂದ ಇನ್ನೂ ಹೆಚ್ಚಿಗೆ ಕೃಷಿ ಕಾರ್ಮಿಕರನ್ನು ಈ ತಿದ್ದುಪಡಿ ಮಸೂದೆಯ ಅಡಿಯಲ್ಲಿ ತರುವ ಉದ್ದೇಶದಿಂದಲೇ ಇದನ್ನು ಇಲ್ಲಿ ತಂದಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ಆದರೆ ಎಲ್ಲವನ್ನೂ ಒಮ್ಮೆಲೇ ಜಾರಿಗೆ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ಯಾರ್ಯಾರಿಗೆ ಈ ತಿದ್ದುಪಡಿ ಮಸೂದೆಯಿಂದ ಅನುಕೂಲವಾಗುವುದಿಲ್ಲ ಅಂಥವರಿಗೆ ಅನುಕೂಲವನ್ನು ಕಲ್ಪಿಸಿಕೊಡುವ ಸಲುವಾಗಿ ಮುಂದೆ ಇನ್ನೊಂದು ತಿದ್ದುಪಡಿಯನ್ನು ಅಥವಾ ಬೇರೆ ಶಾಸನವನ್ನು ತರಬಹುದೆಂದು ನಾನು ನಿರೀಕ್ಷೆ ಮಾಡುತ್ತೇನೆ. ಈ ಮಸೂದೆಯಲ್ಲಿರುವ ಕೆಲವು ಅಂಶಗಳನ್ನು ನಾವು ಇಲ್ಲಿ ವಿಮರ್ಶಾತ್ಮಕ ದೃಷ್ಟಿಯಿಂದ ನೋಡಬೇಕಾಗಿದೆ.

ಮೊದಲನೆಯದಾಗಿ ಮೂಲ ಮಸೂದೆಯ ಸೆಕ್ಷನ್ ೨ರ ಡೆಫನಿಷನ್‌ನಲ್ಲಿ ಸಬ್ ಕ್ಲಾಸ್ ೪ರ ಕೋಕೋವನ್ನು ಪ್ಲಾಂಟೇಷನ್ ಗ್ರೂಪ್‌ನಲ್ಲಿ ಸೇರಿಸಬೇಕೆಂದು ಕೊಟ್ಟಿದ್ದಾರೆ. ನಾನಾದರೂ ಹೇಳುತ್ತೇನೆ. ಈ ಕೋಕೋವನ್ನು ಪ್ಲಾಂಟೇಷನ್ ಗ್ರೂಪ್‌ನಲ್ಲಿ ಸೇರಿಸಿ ಈ ಮಸೂದೆಯಲ್ಲಿ ತರತಕ್ಕ ಅವಶ್ಯಕತೆ ಇಲ್ಲ. ಇದು ಅನಾವಶ್ಯಕ. ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಮ್ಮ ರಾಜ್ಯದಲ್ಲಿ ಕೋಕೋವನ್ನು ಪ್ಲಾಂಟೇಷನ್ ಎಂದು ಆರಂಭ ಮಾಡಿಲ್ಲ. ಇದನ್ನು ಹೆಚ್ಚಿನ ರೀತಿಯಲ್ಲಿ ತೆಂಗು ಮತ್ತು ಅಡಿಕೆ ತೋಟಗಳಲ್ಲಿ ಇಂಟರ್ ಪ್ಲಾಂಟೇಷನ್‌ನನ್ನು ಬೆಳೆಸುವ ರೀತಿಯಲ್ಲಿ ಬೆಳೆಸುತ್ತಿದ್ದಾರೆ. ಅಲ್ಲದೆ ಅಡಿಕೆ ಮತ್ತು ತೆಂಗಿನ ತೋಟಗಳನ್ನು ಪ್ಲಾಂಟೇಷನ್ ಎಂದು ತಮ್ಮ ಮೂಲ ಮಸೂದೆಯಲ್ಲಿ ಅಂಗೀಕಾರವನ್ನು ಮಾಡಿಲ್ಲ. ಇವತ್ತು ನಮ್ಮ ಕಡೆ ಒಳ್ಳೆಯ ಅಡಿಕೆ ಬೆಲೆ ಸುಮಾರು ೭ ರೂಪಾಯಿ ಅಥವಾ ೭–೫೦ ರೂಪಾಯಿ ಬೆಲೆ ಇದೆ. ಅದೇ ಕೋಕೋ ೧ ಕೆ.ಜಿ.ಗೆ ೧೩ ಚಿಲ್ಲರೆ ರೂಪಾಯಿ ಇದೆ. ನನ್ನ ಅಭಿಪ್ರಾಯದಲ್ಲಿ ಅಡಿಕೆ ಮತ್ತು ತೆಂಗಿನ ಬೆಳೆಗಳನ್ನು ಪ್ಲಾಂಟೇಷನ್ ಬೆಳೆ ಎಂದು ಪರಿಗಣಿಸುವುದು ಸರಿಯಲ್ಲ. ಆದರೆ ಇದನ್ನು ಹಿಂಬಾಗಿಲಿನಿಂದ ಸೇರಿಸಲು ಪ್ರಯತ್ನ ಮಾಡಿರುವಂತೆ ನನಗೆ ಕಾಣುತ್ತದೆ.

SRI B. BASAVALINGAPPA.—This is a provision from the Government of India. It is a suggestion given by them and we have accepted it. They want to encourage people who want to plant cocoa. I do accept there are no plantations having this coca in Karnataka State. The Forest Department is now taking up these plantations. With a view to encourage such persons, we have brought this amendment.

ಶ್ರೀ ಬಿ. ವಿ. ಕಕ್ಕಿಲಾಯ.—ನನ್ನ ಉದ್ದೇಶ ಏನೆಂದರೆ, ತಾವು ಈ ಕೋಕೋ ಬೆಳೆಯನ್ನು ಪ್ಲಾಂಟೇಷನ್ನು ಬೆಳೆ ಎಂದು ಪರಿಗಣಿಸುವುದಾದರೆ ಅದನ್ನು ಪ್ರತ್ಯೇಕವಾಗಿ ಪರಿಶೀಲನೆ ಮಾಡಿ. ಕರಾವಳಿ ಪ್ರದೇಶದಲ್ಲಿ ಇದು ಇಂಟರ್ ಪ್ಲಾಂಟೇಷನ್ ಆಗಿ ಬರುತ್ತದೆ. If it is considered as plantation, the Plantation Labour Act is applicable to them. ಇವತ್ತು ಈ ಕೋಕೋ ಬೆಳೆ ಅಡಿಕೆ ಮತ್ತು ತೆಂಗಿಗಿಂತಲೂ ಬಹಳ ಮುಖ್ಯವಾದದು. ಇವತ್ತು ತಾವು ಅಡಿಕೆ ಮತ್ತು ತೆಂಗಿಗೆ ವಿನಾಯಿತಿ ಕೊಡದೇ ಹೋದರೆ ನಾಳೆ ಈ ತೋಟಗಳು ಪ್ಲಾಂಟೇಷನ್ ಬೆಳೆಯ ವ್ಯಾಪ್ತಿಯಲ್ಲಿ ಬರಬಹುದಾದ ಸಂದರ್ಭ ಬಂದರೂ ಬರಬಹುದೆಂದು ನಾನು ಈಗಲೇ ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ಇನ್ನೊಂದು ವಿಷಯ ಹೇಳುವುದಾದರೆ ಒಂದು ಪ್ಲಾಂಟೇಷನ್ ಮಾಡಬೇಕೆಂದರೆ ಅದು ರಿಜಿಸ್ಟರ್ ಆಗಬೇಕು, ಅಲ್ಲಿರುವ ಕಾರ್ಮಿಕರಿಗೆ ರಕ್ಷಣೆ ಕೊಡಬೇಕು, ಅನೇಕ ಅನುಕೂಲಗಳನ್ನು ಒದಗಿಸಿ ಕೊಡಬೇಕು. ಅಲ್ಲಿ ಕಾರ್ಮಿಕರ ಸಮಸ್ಯೆಗಳು ಬಹಳವಾಗಿರುತ್ತವೆ.

ಶ್ರೀ ಬಿ. ಬಸವಲಿಂಗಪ್ಪ.— ಕಾರ್ಮಿಕರ ಸಮಸ್ಯೆಗಳು ಬಂದಾಗ ನೋಡಿಕೊಳ್ಳೋಣ ಈಗ ಆ ಸಮಸ್ಯೆಗಳು ಉದ್ಭವಿಸುವುದಿಲ್ಲ. I really associate myself with the hon. member with regard to his views about the labour problem. My submission is that there is no plantation, We want to encourage such persons who want to grow them. After it is grown and developed, the labour problem will come. The Communist Party should wait until the whole thing develops and labourers are employed.

SRI B. V. KAKKILAYA.— The hon. Minister may please consider this. Sub Clause 6 reads:

> "A person who cultivates personally any land on lease created contrary to the provisions of section 5 as in force before the date of commencement of the Amendment Act."

ಎಂದು ಇದೆ.

ಈ ಒಂದು ತಿದ್ದುಪಡಿಯನ್ನು ತಂದಿದ್ದೀರಿ. ತಮ್ಮ ಅಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಹೇಳಿದ ಹಾಗೆ, ಯಾರು ೧೯೬೫ರ ನಂತರ ಮತ್ತು ೧೯೬೭ರ ತನಕ ಭೂಮಿಯನ್ನು ಗೇಣಿಗೆ ತೆಗೆದುಕೊಂಡಿದ್ದಾರೆ, ಅಂಥವರಿಗೆ ಈ ಕಾನೂನಿಂದ ರಕ್ಷಣೆ ಸಿಕ್ಕುವುದಿಲ್ಲ. ಏಕೆಂದರೆ, ತಮ್ಮ ಈ ಕಾನೂನಿಂದ ಅಂಥ ಒಂದುವಾದ ಬರುತ್ತದೆ, ಆದರೆ ತಮ್ಮ ಉದ್ದೇಶ ಅಂಥವರಿಗೆ ರಕ್ಷಣೆ ಕೊಡಿಸಬೇಕು ಎನ್ನುವುದು ಇದೆ. ಆದ್ದರಿಂದ ಇದರ ಬಗ್ಗೆ ನನ್ನ ಸಲಹೆ ಎಂದರೆ, ತಮ್ಮ ಕಾನೂನಿನ ಪ್ರಕಾರ ಬರಹ ಮೂಲಕ ಗೇಣಿಗೆ ತೆಗೆದುಕೊಂಡವರಿಗೆ ರಕ್ಷಣೆ ಸಿಕ್ಕುತ್ತದೆ, ಆದರೆ 'ಪರ್‌ಪರ್ಟಿಡ್ ಟು ಹ್ಯಾಬೀನ್ ಕ್ರಿಯೇಟೆಡ್' ಎಂದು ಒಂದು ವಾಕ್ಯವನ್ನು ಸೇರಿಸಿದರೆ, ಗೇಣಿಯನ್ನು ಕೊಟ್ಟಿರುವವರು ಬರಹ ಮೂಲಕ ಇರಲಿ ಇಲ್ಲದೆ ಇರಲಿ, ವಾಸ್ತವವಾಗಿ ಗೇಣಿಗೆ ಕೊಟ್ಟಿದ್ದರೆ, ಅಂಥವರಿಗೂ ರಕ್ಷಣೆ ಸಿಕ್ಕಬೇಕು. ಡೆಫಿನೇಷನ್‌ನಲ್ಲಿ ಏನು ಹೇಳಿದ್ದೀರಿ ಎಂದರೆ,

> "A person who cultivates personally any land on lease under a lease created contrary to the provisions of Section 5 as in force before the date of commencement of the Amendment Act." ಎಂದು ಇದೇ.

ತಮ್ಮ ವಾದವನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ, ಆದರೆ ಅದನ್ನು ಇನ್ನೂ ಬಲಪಡಿಸು ವುದಕ್ಕೋಸ್ಕರ ನಾನು ಹೇಳುವುದು ಏನೆಂದರೇ,

> "A person who cultivates personally any land on lease under a lease created or purported to have been created contrary to the the provisions of Section 5 as in force before the date of commencement of the Amendment Act." ಎಂದು ಇದ್ದರೇ,

ತಮ್ಮ ಉದ್ದೇಶ ಪೂರ್ತಿಯಾಗುತ್ತದೆ. ಮತ್ತು ತಾವು ಇದನ್ನು ಜಾರಿಗೆ ಕೊಡುವುದಕ್ಕೆ ಅನುಕೂಲ ವಾಗುತ್ತದೆ ಎನ್ನುವುದು ಮಾತ್ರ ನನ್ನ ಸಲಹೆ. ಇದನ್ನೂ ಕೂಡ ತಾವು ಪರಿಶೀಲನೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಕ್ಲಾಸ್-೭, ಇದರ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳಬೇಕು. ಇದರಲ್ಲಿ ಕೃಷಿ ಕಾರ್ಮಿಕರು ಇರುವಂಥ ವಸತಿ, ಮತ್ತು ಅದರ ಸುತ್ತಮುತ್ತ ಇರುವಂಥ ಸ್ಥಳವನ್ನು ಅವರಿಗೇ ಕೊಡಬೇಕು ಎನ್ನುವ ಉದ್ದೇಶದಿಂದ ಈ ಶಾಸನವನ್ನು ತಂದಿದ್ದಿರಿ. ಆದರೆ, ಇದಕ್ಕೆ ಸಂಬಂಧಪಟ್ಟಂತೆ ನಾನು ಒಂದು ತಿದ್ದುಪಡಿಯನ್ನು ಕೊಟ್ಟಿದ್ದೇನೆ, ಅದರ ಮೇಲೆ ನಾಳೆ ಮಾತನಾಡುವಾಗ ಅದನ್ನು ಹೇಳುತ್ತೇನೆ, ಸಾಮಾನ್ಯವಾಗಿ ಕೃಷಿಕಾರ್ಮಿಕರಿಗೆ ವರ್ಷ ಪೂರ್ತಿಯಾಗಿ ಕೆಲಸ ಮಾಡುವುದಕ್ಕೆ ಕೆಲಸ ಇರುವುದಿಲ್ಲ. ನಿಮ್ಮ ಮೂಲ ಮಸೂದೆಯಲ್ಲಿ ಏನು ಇದೇ ಎಂದರೆ.

> "A person who is considered to be an agricultural labourer only if his principal means of livelihood is mannual labour."

ಎಂದು ಇದೆ. ಈಗ ಏನಾಗುತ್ತದೆ ಎಂದರೆ, ವ್ಯವಸಾಯು ಕೇವಲ ಸೀಸನಲ್ ವರ್ಕ್. ಸರ್ವೆ ಸಾಮಾನ್ಯ ವಾಗಿ ಇದರಲ್ಲಿ ಕೆಲಸ ಮಾಡುವವರಿಗೆ ನಿಮ್ಮ ಕಾನೂನಿನ ರಕ್ಷಣೆ ಸಿಕ್ಕುವುದು ಕಷ್ಟವಾಗುತ್ತದೆ. ಅಗ್ರಿಕಲ್ಚರ್ ಲೇಬರ್ ಎನ್ನುವುದು ಸೀಸನಲ್ ವರ್ಕ್, ಇದು ನಮ್ಮ ದೇಶದ ಪರಿಸ್ಥಿತಿ. ವ್ಯವಸಾಯದಲ್ಲಿ ೩೬೫ ದಿವಸವೂ ಕೆಲಸ ಮಾಡುವಂಥ ಸ್ಥಿತಿಯಿಲ್ಲ. ಇವರಿಗೆ ರಕ್ಷಣೆ ಕೊಡಬೇಕು ಎಂದರೆ, ಈ ಕಾನೂನಿನ ವ್ಯಾಪ್ತಿಯಲ್ಲಿ ಇವರು ಬರುವುದಿಲ್ಲ ಎಂದು ನನ್ನ ಅಭಿಪ್ರಾಯ. ಆದ್ದರಿಂದ ಈ ಜನರಿಗೆ ರಕ್ಷಣೆ ಕೊಡಬೇಕು ಎಂದರೆ, ಯಾರು ವ್ಯವಸಾಯು ಕಾಲದಲ್ಲಿ, ಉಳುಮೆ ಮಾಡತಕ್ಕ ಸಮಯದಲ್ಲಿ, ಬಿತ್ತನೆ ಮಾಡತಕ್ಕ ಸಮಯದಲ್ಲಿ, ಕೊಯ್ಯಲು ಸಮಯದಲ್ಲಿ ಜಮೀನುಗಳಲ್ಲಿ ಕೆಲಸ ಮಾಡಿಕೊಂಡಿರುತ್ತಾರೆಯೋ ಅವರಿಗೆ ಇದರ ಪೂರ್ತಿ ರಕ್ಷಣೆ ಸಿಕ್ಕಬೇಕು, ಎನ್ನುವಂತೆ ತಾವು ಅವಕಾಶ ಮಾಡಬೇಕು. ಸೀಸನಲ್ ವರ್ಕರ್ ಎನ್ನುವ ರೀತಿಯಲ್ಲಿ ಆದರೆ ಇವರಿಗೆ ರಕ್ಷಣೆ ಸಿಕ್ಕುವುದಿಲ್ಲ. ಒಂದು ಕಡೆ ಇವರಿಗೆ ರಕ್ಷಣೆ ಕೊಡಬೇಕು ಎಂದು ಹೇಳಿ, ಇನ್ನೊಂದು ಕಡೆ ಸೀಸನಲ್ ವರ್ಕ್ ಮಾಡುವವರಿಗೆ ರಕ್ಷಣೆ ಸಿಕ್ಕುವುದಿಲ್ಲ ಎಂದು ಹೇಳಿದರೆ ಅದು ಸರಿಹೋಗುವುದಿಲ್ಲ. ಈ ನಿಬಂಧನೆಯನ್ನು ಏನು ತಾವು ಹಾಕಿದ್ದೀರಿ ಅದನ್ನು,

ತೆಗೆದುಹಾಕಬೇಕು ಎಂದು ನಾನು ಹೇಳುತ್ತೇನೆ. ತಮ್ಮ ಉದ್ದೇಶವೇನೋ ಇದರಲ್ಲಿ ಬಹಳ ಉತ್ತಮವಾಗಿದೆ. ಆದರೆ ಅದಕ್ಕೆ ಪೂರಕವಾಗಿ ನಾನು ಹೇಳುವಂಥ ಅಂಶವನ್ನೂ ತಾವು ಸೇರಿಸಿಕೊಳ್ಳಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನೊಂದು ಅಂಶ ಏನೆಂದರೆ, ತಾವು ತಂದಿರತಕ್ಕ ತಿದ್ದುಪಡಿಯಲ್ಲಿ the lobourer who ordinarily resides in a dwelling house ಎಂದು ಇದೆ. ಅಂದರೆ ಏನು ? ಬೇರೆ ಯಾವುದೋ ಕಡೆಯಲ್ಲಿ ಇವರು ವಾಸ ಮಾಡುತ್ತಿದ್ದು ವ್ಯವಸಾಯದ ಕೆಲಸ ಇದ್ದಾಗ ಮಾತ್ರ ಇಲ್ಲಿಗೆ ಬರುತ್ತಾರೆ. ಇವರು ಬಂದಾಗ ಇಂಥ ವಾಸದ ಮನೆಗಳನ್ನು ಮಾಡಿಕೊಡುತ್ತಾರೆ, ಇಂಥವರಿಗೆ ಇದು ಅನ್ವಯವಾಗುವುದಿಲ್ಲ. ಆದ್ದರಿಂದ ನಾನು ಹೇಳುವುದು, ಆರ್ಡಿನರಿಲಿ ರಿಸೈಡ್ಸ್ ಇನ್ ದಿ ಡ್ವೆಲಿಂಗ್ ಹೌಸ್ ಎಂದರೆ ಏನು ಅರ್ಥ ಕೊಡುತ್ತದೆ ಎನ್ನುವುದು ಸರಿಯಾಗಿಲ್ಲ. ವ್ಯವಸಾಯ ಸೀಸನಲ್ಲಿ ಕೆಲಸವಾಗಿರುವುದರಿಂದ ತಮ್ಮ ಕಾನೂನಿನ ರಕ್ಷಣೆಗೆ ಅಪಾಯ ಬರುತ್ತದೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಏಕೆಂದರೆ, ಈ ಕಾನೂನನ್ನು ಎರಡು ತರಹದಲ್ಲಿ ಅರ್ಥಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಅಗ್ರಿಕಲ್ಚರಲ್ ಲೇಬರರ್ಸ್‌ಗೆ ಬೇರೆ ಕಡೆಯಲ್ಲಿ ಮನೆಗಳು ಇದ್ದು, ವ್ಯವಸಾಯದ ಕೆಲಸ ವಿರುವಾಗ ಮಾತ್ರ ಕೆಲಸವಿದ್ದ ಕಡೆ ಬರುತ್ತಾರೆ, ಕೆಲಸ ಮಾಡಿ ತಮ್ಮ ಮನೆಗೆ ಹೊರಟು ಹೋಗುತ್ತಾರೆ. ಇಂಥವರಿಗೆ ರಕ್ಷಣೆ ಕೊಡಬೇಕು ಎಂದು ನಾನೂ ಹೇಳುತ್ತಿಲ್ಲ. A person who ordinarily resides in a dwelling house should not be deprived of the rights conferred under this Act simply because he happens to do seasonal work in agriculture. By nature, the agriculture work is seasonal. According to the defination of the Agricultural Labourer, he will be treated as an agricultural labourer if his principal, means of livelihood is agriculture. A person who works two months or three months during reaping, harvesting or sowing season but his principal means of livelihood cannot be certainly agriculture. He will have to do some other work also. Therefore, tomorrow, somebody may come and say that his principal means of livelihood is not agriculture but it is either Beedi rolling or carpentry or something else. Then. this will read to defeating the very purpose of the provision which is now being made and I am quite certain that the Hon. Minister will appreciate that point and make necessary modifications. ಇನ್ನೊಂದು ಮಾತು ಎಂದರೆ, ನಮ್ಮ ಹಳ್ಳಿಗಳಲ್ಲಿ ಇಂಥ ಮನೆಗಳನ್ನು ಕಟ್ಟಿರುತ್ತಾರೆ.

ಶ್ರೀ ಜಿ. ಕೆ. ತೇಕ್ಕೆಡ್.— ವ್ಯವಸಾಯದ ಕಾಲದಲ್ಲಿ ನಮ್ಮ ಹಳ್ಳಿಯ ಕಡೆಗಳಲ್ಲಿ ಕೆಲಸಗಾರರಿಗೆ ಟೆಂಪರರಿಯಾಗಿ ತಟ್ಟಿಗಳನ್ನು ಕಟ್ಟಿಕೊಡುತ್ತಾಗೆ. ಅವರು ಅಲ್ಲಿ ಪರ್ಮನೆಂಟ್ ಆಗಿ ಇರುವುದಿಲ್ಲ. ಸುಗ್ಗಿಯ ಕಾಲವನ್ನು ಮುಗಿಸಿಕೊಂಡು ಹೊರಟುಹೋಗುತ್ತಾರೆ. ಇದ್ದಂಥ ಸಮಯದಲ್ಲಿ ಅವರಿಗೆ ಈ ಒಂದು ರೈಟ್ ಇದೆ ಎನ್ನುವುದು ಗೊತ್ತಾದರೆ ಅವರು ಅಲ್ಲಿಯೇ ಇದ್ದುಬಿಡುತ್ತಾರೆ. ೧೦–೨೦ ವರ್ಷದಿಂದ ಇರುವವರ ಬಗ್ಗೆ ಯೋಚನೆ ಮಾಡುವುದು ಇರಲೀ, ಇವರಿಗೆ, ಅಂದರೆ, ಸ್ವಲ್ಪ ಕಾಲದವರೆಗೆ ಇರುವವರಿಗೆ ಈ ಅನುಕೂಲ ಕೊಡಬೇಕಾಗುತ್ತದೆ. ಅವರ ಬಗ್ಗೆ ತಾವು ಏನು ಹೇಳುತ್ತೀರಿ ?

ಶ್ರೀ ಬಿ. ವಿ. ಕಕ್ಕಿಲಾಯ.—ಅವರಿಗೆ ಏನೂ ಮಾಡಬೇಕಾಗಿಲ್ಲ.

4–30 ಪಿ.ಎಂ.

ನನ್ನ ಪ್ರಶ್ನೆ ಏನೆಂದರೆ, ಇವತ್ತಿನ ದಿವಸ ಅದನ್ನು ಶಾಸನದ ವ್ಯಾಪ್ತಿಯಲ್ಲಿ ತಂದಿಲ್ಲ ಎಂದು. ಅವರಿಗೆ ಬೇರೆ ಕಡೆಯಲ್ಲಿ ಮನೆ ಇದ್ದು ಅಲ್ಲಿ ಅವರು ವಾಸವಾಗಿರುತ್ತಾರೆ ಮತ್ತು ಹಂಗಾಮಿಯಾಗಿ ಈ ಒಂದು ತಾತ್ಕಾಲಿಕ ಕೆಲಸಕ್ಕೆ ಬರುತ್ತಾರೆ. ಮಣ್ಣು ಹೊಡೆಯುವುದಕ್ಕೆ, ಗೊಬ್ಬರ ಹೊಡೆಯುವುದಕ್ಕೆ, ಗದ್ದೆ ಕೆಲಸಕ್ಕೆ, ಹೀಗೆ ಇಂಥ ಹಲವಾರು ಕೆಲಸಗಳಿಗೆ ಬರುತ್ತಾರೆ. ಹೀಗೆ ಬಂದವರಿಗೆ ವಸತಿ ಏರ್ಪಾಡು ಮಾಡಿ

ಕೊಡುತ್ತೀರಿ. ಅವರಿಗೆ ಮನೆ ಕಟ್ಟಿ ಕೊಡಿ ಎಂದು ನಾನು ವಾದ ಮಾಡುವುದಿಲ್ಲ. ಈಗ ತಾವು ಏನು ಹೇಳುತ್ತಿದ್ದೀರೆಂದರೆ, ಫೋಟೋ ತೆಗೆಸುತ್ತಾನೆ, ಕೋರ್ಟಿಗೆ ಹೋಗುತ್ತಾನೆ, ಪರ್ಮನೆಂಟ್ ಎಂದು ಹೇಳುತ್ತಾನೆ ಎಂದು. ಈ ರೀತಿ ಯಾರೋ ಒಬ್ಬ ದುರುಪಯೋಗ ಮಾಡಬಹುದು. ದುರುಪಯೋಗ ಮಾಡುವ ಪ್ರಶ್ನೆ ಎರಡು ಕಡೆ ಇದೆ. ದುರುಪಯೋಗ ಮಾಡುತ್ತಾರೆನ್ನುವ ಕಾರಣದಿಂದ ನ್ಯಾಯವಾದ ಹಕ್ಕನ್ನು ಯಾರಿಗೆ ಕೊಡಬೇಕೋ ಅದನ್ನು ಅವರಿಗೆ ಕೊಡುವುದಕ್ಕೆ ಹಿಂಜರಿಯಬಾರದು. ಮಾನ್ಯ ವೀರಪ್ಪ ಮೊಯಿಲಿಯವರು ಮಾತನಾಡುವಾಗ ಸೂಚಿಸಿದರು. ಇವತ್ತು ಇರತಕ್ಕ ಅಪಾಯ ಈ ರೀತಿಯಲ್ಲಿ ಕಾರ್ಮಿಕರು ಫೋಟೋ ತೆಗೆಸಿಕೊಂಡು ಕೋರ್ಟಿಗೆ ಹೋಗುತ್ತಾರೆಂದು ಅಲ್ಲ. ಈ ಶಾಸನ ಬಂದ ಬಳಿಕ ಜಮೀನು ಮನೆ ಸಿಕ್ಕುವ ಮೊದಲೇ ಮನೆಯನ್ನು ಕೆಡವಿ ಹಾಕಿ ಅಲ್ಲಿ ಮನೆಯೇ ಇರಲಿಲ್ಲ ಎಂದು ವಾದಿಸಿರತಕ್ಕಂತಹ ನೂರಾರು ಉದಾಹರಣೆಗಳನ್ನು ಬೇಕಾದರೆ ಕೊಡಬಲ್ಲೆ. ಅಂಥ ಉದಾಹರಣೆಗಳು ನನ್ನ ಕ್ಷೇತ್ರದಲ್ಲೇ ಇವೆ. ಅಂಥದಕ್ಕೆ ರಕ್ಷಣೆ ಕೊಡಲಿಕೆ ಅಧಿಕಾರಿಗಳಿದ್ದಾರೆ, ಕೋರ್ಟ್ ಇದೆ, ಜೊತೆಗೆ ನಾವೂ ಕೂಡ ಪ್ರಯತ್ನ ಮಾಡಬೇಕು. ಆದರೆ ದುರುಪಯೋಗ ಮಾಡತಕ್ಕ ಪ್ರಶ್ನೆಯನ್ನು ಇಟ್ಟುಕೊಂಡು ಕಾನುನನ್ನು ಮಾಡುವುದಕ್ಕೆ ಬರುಪುದಿಲ್ಲ. ಕಾನೂನು ಮಾಡುವಾಗ ಒಳ್ಳೆಯ ಉದ್ದೇಶವನ್ನು ಆ ಕಾನೂನಿನಲ್ಲಿ ತರಬೇಕು. ಕೃಷಿ ಕಾರ್ಮಿಕರ ಮನೆಯಲ್ಲಿ ಹಲವಾರು ಬೇರೆಬೇರೆ ಉದ್ಯೋಗಗಳನ್ನು ಮಾಡುವವರಿದ್ದಾರೆ. ಹಳ್ಳಿಯಲ್ಲಿ ಇವತ್ತಿನ ದಿವಸ ಹಿಂದಿನ ಶತಮಾನಗಳ ಕಾಲದಿಂದ ನಡೆದುಕೊಂಡುಬಂದ ಪದ್ಧತಿ ಇಲ್ಲ, ಮತ್ತು ಹಾಗೆಯೇ ನಡೆಡುಕೊಂಡು ಹೋಗಬೇಕೆಂದು ಹೇಳುವವರೂ ಇಲ್ಲ. ನಮ್ಮಲ್ಲಿ ಭೂತ ಪೂಜಾರಿಗಳಿದ್ದಾರೆ, ನೇಕಾರರಿದ್ದಾರೆ, ಹರಿಜನರಿದ್ದಾರೆ ಬಡಗಿಗಳಿದ್ದಾರೆ, ಮಣ್ಣಿನ ಕೆಲಸ ಮಾಡುವವರಿದ್ದಾರೆ. ಇವರೆಲ್ಲರಿಗೂ ಹಳ್ಳಿಯಲ್ಲಿ ಬತ್ತವನ್ನಾಗಲೀ ಅಥವಾ ಇನ್ನು ಏನಾದರೂ ಆಹಾರ ಪದಾರ್ಥಗಳನ್ನು ಕೊಡುತ್ತಿದ್ದರು. ಅವರಿಗೆ ಮನೆಗಳಿದ್ದವು ಅವರು ಹಳ್ಳಿಯಲ್ಲಿ ತಮ್ಮ ಮುಖ್ಯವಾದ ಪಾತ್ರವನ್ನು ನಿರ್ವಹಿಸುತ್ತಿದ್ದರು. ಇವತ್ತು ಟ್ರೆಡಿಷನಲ್ ಆಗಿ ಹಳ್ಳಿಯಲ್ಲಿ ಏನಾಗಿದೆ ಎಂದರೆ ಅವರಿಗೆ ಯಾವ ಹಕ್ಕುಗಳ ಇಲ್ಲವಾಗಿವೆ. ಅಂಥವರನ್ನು ನಿರ್ಗತಿಕರನ್ನಾಗಿ ಮಾಡುವುದಕ್ಕೆ ಬರುವುದಿಲ್ಲ. ಇವತ್ತಿನ ದಿವಸ ಆ ಕಮ್ಮಾರರು, ಬಡಗಿಗಳು, ನೇಕಾರರು, ಭೂತ ಪೂಜಾರಿಗಳೇನಿದ್ದಾರೆ ಅದೇ ಅವರ ಪ್ರಧಾನಕಸಬಾಗಿದೆ, ಇಲ್ಲದಿದ್ದರೆ ಅವರಿಗೆ ಜೀವನಕ್ಕೆ ಬೇರೆ ಮಾರ್ಗವಿಲ್ಲ. ಆದ್ದರಿಂದ, ಅಂಥ ಜನರಿಗೂ ಕೂಡ ಅಂದರೆ ವ್ಯವಸಾಯಕ್ಕೆ ಸಂಬಂಧಪಟ್ಟ ಕೆಲಸಗಳನ್ನು ಯಾರ್ಯಾರು ಮಾಡುತ್ತಾರೋ ಅವರೆಲ್ಲರನ್ನು, ಈ ಶಾಸನದ ವ್ಯಾಪ್ತಿಯನ್ನು ವಿಸ್ತರಣೆ ಮಾಡಿ, ಇದರ ಮಧ್ಯೆ ತರಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಇದರಲ್ಲಿ ತರುವುದಕ್ಕೆ ಆಗುವುದಿಲ್ಲ.

ಶ್ರೀ ಬಿ.ವಿ. ಕಕ್ಕಿಲಾಯ.—ಯಾವಾಗ ತರುತ್ತಿರೋ ಆವಾಗ ನಮ್ಮ ಸ್ವಾಗತ. ಈಗ ಈ ಸಮಸ್ಯೆಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ಕ್ಲಾಸ್ ೨೦ರಲ್ಲಿ, ತಾವು ಗೇಣಿದಾರರಿಗೆ ಜಮೀನನ್ನು ಕೊಟ್ಟಮೇಲೆ ೬ ವರ್ಷಗಳ ಕಾಲ ಆ ಭೂಮಿಯನ್ನು ಪರಭಾರೆ ಮಾಡಬಾರದೆಂದಿದ್ದುದನ್ನು ೧೫ ವರ್ಷಗಳವರೆಗೆ ಪರಭಾರೆ ಮಾಡಬಾರದೆಂದು ತಿದ್ದುಪಡಿ ಮಾಡಿದ್ದೀರಿ, ಇದು ಸರಿಯಾದುದಲ್ಲವೆಂದು ನನ್ನ ಅಭಿಪ್ರಾಯ. ಏಕೆಂದರೆ, ಮಾನ್ಯ ಶೀರ್ನಾಳಿ ಚಂದ್ರಶೇಖರ್‌ರವರು ಹೇಳಿದರು, ಇವತ್ತು ಅವನಿಗೆ ಸಂಪೂರ್ಣವಾಗಿ ಮಾಲೀಕತನದ ಹಕ್ಕನ್ನು ಕೊಡಬೇಕೆಂಬುದು ನಮ್ಮೆಲ್ಲರ ಉದ್ದೇಶ ಎಂದು. ಆದ್ದರಿಂದ, ಆತನಿಗೆ ಸಂಪೂರ್ಣವಾದ ಮಾಲೀಕತನದ ಹಕ್ಕನ್ನು ಕೊಡಿ ಮತ್ತು ಆತನಿಗೆ ಪರಿಹಾರದ ಹಣವನ್ನು ಕೇಂದ್ರ ಸರ್ಕಾರದಿಂದ ತೆಗೆದುಕೊಡಿ ಎಂದು ಹೇಳುತ್ತೇನೆ. ನಂತರ ಅವನು ಏನಾದರೂ ಮಾಡುತ್ತಾನೆ. ಮೊದಲು ತಾವು ಅವನಿಗೆ ಆರ್ಥಿಕ ಸಹಾಯ ದೊರೆಯುವಂತೆ ಮಾಡಬೇಕು. ಇವತ್ತು ಇಲ್ಲಿರತಕ್ಕ ಪ್ರಶ್ನೆ ಏನೆಂದರೆ, ಅದನ್ನು ಮಾಡಲಿಕ್ಕೆ ಆಗದೆ ೨೦ ಕಂತುಗಳಲ್ಲಿ ಪರಿಹಾರ ಕೊಡುತ್ತೇವೆಂದರೆ ೨೦ ವರ್ಷ ಹಣವನ್ನು ಕೊಡುವುದಕ್ಕೆ ಹೋಯಿತು, ನಂತರ ಮತ್ತೆ ೬ ವರ್ಷಗಳ ಕಾಲ ಆತ ಅದನ್ನು ಮಾರಲಿಕ್ಕೆ ಆಗುವುದಿಲ್ಲ. ಹೀಗಾಗಿ, ಒಟ್ಟು ೨೬ ವರ್ಷಗಳ ಕಾಲ ಯಾವುದೇ ರೀತಿಯಲ್ಲಿ ಪರಭಾರೆ ಮಾಡುವುದಕ್ಕಾಗಲೀ, ಭೋಗ್ಯ ಮಾಡುವುದಕ್ಕಾಗಲೀ ಅಥವಾ ಸಹಕಾರ ಸಂಘಗಳಿಂದ ಮತ್ತಿತರ ಬ್ಯಾಂಕುಗಳಿಂದ ಸಾಲವನ್ನು ಪಡೆಯುವುದಕ್ಕಾಗಲಿ ಆಗುವುದಿಲ್ಲ. ಇನ್ನು ಇದನ್ನು ೧೫ ವರ್ಷಕ್ಕೆ ಏರಿಸಿದರೆ, ೨೦ ಪ್ಲಸ್ ೧೫, ಒಟ್ಟು ೩೫ ವರ್ಷಗಳ ಕಾಲ ಆತ ಆ ಜಮೀನಿನಲ್ಲೇ ಕುಳಿತುಕೊಂಡಿರಬೇಕಾಗುತ್ತದೆ. ಆದ್ದರಿಂದ. ಆ ಜಮೀನಿನಲ್ಲಿ ವ್ಯವಸಾಯ ಮಾಡುವುದಕ್ಕೆ ಬೇಕಾದ ಸವಲತ್ತುಗಳನ್ನು ಕೊಟ್ಟು ಬೆಳೆ ತೆಗೆಯುವುದಕ್ಕೆ ಅನುಕೂಲತೆ ಮಾಡಿಕೊಟ್ಟು ಆ ಜಮೀನು ಕೈತಪ್ಪಿ ಹೋಗದಂತೆ ಸಹಾಯ ಮಾಡುವುದು ಸೂಕ್ತವೆಂದು ಸಲಹೆ ಮಾಡುತ್ತೇನೆ. ಇವತ್ತು ಗೇಣೀದಾರರಿಗೆ ಏನು ಜಮೀನನ್ನು ಕೊಡುತ್ತಿರೋ ಅದನ್ನು ದರಖಾಸ್ತು ಜಮೀನುಗಳನ್ನು ಕೊಟ್ಟ ಹಾಗೆ, ಗ್ರಾಂಟ್ ಕೊಟ್ಟ ಹಾಗೆ ಕೊಡುವುದಲ್ಲ. ಇದು ಗ್ರಾಂಟೆಡ್ ಲ್ಯಾಂಡ್

ಅಲ್ಲ. ಬಹಳ ಕಾಲದಿಂದ ದುಡಿದಂತಹವನಿಗೆ 'ಉಳುವವನಿಗೆ ಹೊಲವನ್ನು' ಕೊಡಬೇಕೆಂಬ ತತ್ವದ ಆಧಾರದ ಮೇಲೆ ಸ್ವಾತಂತ್ರ ಬರುವುದಕ್ಕೆ ೩೦ ವರ್ಷಗಳ ಹಿಂದೆ ಹೇಳುತ್ತಿದ್ದುದನ್ನು ಸ್ವಾತಂತ್ರ್ಯ ಬಂದ ೩೨ನೇ ವರ್ಷದಲ್ಲಿ ಅನುಷ್ಠಾನಕ್ಕೆ ತಂದು ಕೊಡುತ್ತಿದ್ದೀರಿ. ಹಾಗೆ ಹಕ್ಕನ್ನು ಪಡೆಯುತ್ತಿರುವವನಿಗೆ ೧೫ ವರ್ಷದ ಅವಧಿಯನ್ನು ಗೊತ್ತುಪಡಿಸುವುದು ಸರಿಯಲ್ಲವೆಂದು ಹೇಳುತ್ತೇನೆ. ಆತ ಆ ಭೂಮಿಯ ಮಾಲೀಕನಾದ ಮೇಲೆ ಈ ರೀತಿ ನಿರ್ಬಂಧನೆಗಳನ್ನು ಹಾಕುವುದು ಸೂಕ್ತವಲ್ಲ, ನ್ಯಾಯವಾದುದಲ್ಲ. ಭೂ ಮಾಲೀಕನಿಗೆ ಇದ್ದ ಹಕ್ಕನ್ನು ರದ್ದು ಮಾಡಿ ಇವನನ್ನು ಮಾಲೀಕನನ್ನಾಗಿ ಮಾಡಿದ ಮೇಲೆ ಮಾಲೀಕನಿಗೆ ಯಾವ ಮೂಲಭೂತ ಹಕ್ಕುಗಳಿವೆಯೋ ಅವೆಲ್ಲ ಇವನಿಗೆ ಬರಬೇಕು. ಅವನ್ನು ಮೊಟಕು ಮಾಡಬಾರದು: ೧೫ ವರ್ಷವನ್ನು ಗೊತ್ತುಮಾಡಿ ೩೫ ವರ್ಷಗಳವರೆಗೆ ಕಾಲಮಿತಿಯನ್ನು ವಿಸ್ತರಿಸುವುದೆಂದರೆ ಅದು ಶಾಸ್ತ್ರೀಯವಾದುದೂ ಅಲ್ಲ, ನ್ಯಾಯವಾದುದೂ ಅಲ್ಲ ಮತ್ತು ವ್ಯವಸಾಯದ ಅಭಿವೃದ್ಧಿಗೆ ಅನುಕೂಲವಾದುದೂ ಅಲ್ಲವೆಂದು ನಾನಾದರೂ ಕೂಡ ಸ್ಪಷ್ಟವಾಗಿ ಹೇಳಬಯಸುತ್ತೇನೆ.

ಇನ್ನು ಕ್ಲಾಸ್ ೨೨ನ್ನು ನೋಡಿದರೆ ನೆಗೋಷಿಯಬಲ್ ಬಾಂಡ್ಸ್ ಇದ್ದುದನ್ನು ತೆಗೆದು ನಾನ್ ನೆಗೋಷಿಯಬಲ್ ಬಾಂಡ್ಸ್ ಎಂದು ಮಾಡಿದ್ದೀರಿ. ಭೂ ಮಾಲೀಕರಿಗೆ ಹಣವನ್ನು ಕೊಡಿ ಎಂದು ಉದಾರವಾಗಿ ಹೇಳಿದರೆ ಒಪ್ಪಲಿಕ್ಕೆ ತಯಾರಿಲ್ಲ, ಯಾರೂ ಕೂಡ ಒಪ್ಪುವುದಿಲ್ಲ. ಅವರೆ ಎಲ್ಲ ಹಕ್ಕುಗಳನ್ನು ತೆಗೆದು ಅವರಿಗೆ ಪರಿಹಾರವನ್ನು ಒಂದೇ ಗಂಟಿನಲ್ಲಿ ಕೊಡುವುದಕ್ಕೆ ಆಗುವುದಿಲ್ಲವೆಂದು ಎರಡು ಸಾವಿರ ರೂಪಾಯಿಗಳನ್ನು ಕೊಡುತ್ತೀರಿ. ಇನ್ನುಳಿದ ಹಣವನ್ನು ಕೊಡುವುದು ಕೂಡ ಬಹಳ ಕಡಿಮೆ. ಪರಿಹಾರವನ್ನು ಬಹಳ ಕಡಿಮೆ ಗೊತ್ತು ಮಾಡಿದ್ದೀರಿ. ಹೀಗೆ ಗೊತ್ತು ಮಾಡಿದ ಹಣವನ್ನು ಕೊಡುವಾಗ ೨ ಸಾವಿರ ರೂಪಾಯಿಗಳನ್ನು ಕೊಟ್ಟು ಉಳಿದದ್ದನ್ನು ಕೊಡುವಾಗ ನೆಗೋಷಿಯಬಲ್ ಬಾಂಡ್ ಎಂದು ಕೊಡುತ್ತೀರಿ. ಅದನ್ನು ಸಹಕಾರ ಸಂಘಗಳಲ್ಲಾಗಲೀ ಅಥವಾ ಬ್ಯಾಂಕುಗಳಲ್ಲಾಗಲಿ ಹಾಕಿ ಅದರಿಂದ ಬರುವ ಹಣದಿಂದ ಮಕ್ಕಳ ಮದುವೆ ಮುಂಜಿ ಮುಂತಾದುವನ್ನು ಮಾಡುತ್ತಾನೆ. ಇವತ್ತು ತಾವು ಏನು ಮಾಡುತ್ತೀರಿ ಎಂದರೆ, ನಾನ್ ನೆಗೋಷಿಯಬಲ್ ಬಾಂಡ್ (ನಾನ್ ಟ್ರಾನ್ಸ್‌ಫರಬಲ್ ಬಾಂಡ್) ಎಂದು ಕೊಡಬೇಕೆಂದು ಮಾಡಿದ್ದೀರಿ. ಅದನ್ನು ಇಟ್ಟುಕೊಂಡು ಏನು ಮಾಡಬೇಕೆಂದು ಅರ್ಥವಾಗುತ್ತಿಲ್ಲ.

SRI B. BASAVALINGAPPA.—Madam Speaker, the negotiable bonds and non-negotiable bonds were not accepted by the Reserve Bank. Now, we are introducing just to ensure that persons who loses lands can get the money by way of issuing this negotiable bonds. This is only a given assurance to the land owner to get the money when it is due.

ಶ್ರೀ ಬಿ.ವಿ. ಕಕ್ಕಿಲಾಯ.—ಇನ್ನು ವಿಧವೆಯರಿಗೆ ಒಂದೇ ಕಂತಿನಲ್ಲಿ ಹಣ ಕೊಡಬೇಕೆಂದು ಹೇಳಿದ್ದೀರಿ. ಆದನ್ನು ನಾನೂ ಒಪ್ಪುತ್ತೇನೆ. ಅವರಿಗೆ ಒಂದೇ ಕಂತಿನಲ್ಲಿ ಹಣ ಕೊಡಲೇಬೇಕು. ಕೊಡಬಾರದು ಎಂದು ನಾನು ಹೇಳುವವನಲ್ಲ. ಆದರೆ ತಮ್ಮ ತಿದ್ದುಪಡಿಯಲ್ಲಿ ಏನು ಹೇಳುತ್ತೀರೆಂದರೆ— ಆಕೆ ನನಗೆ ಬೇಡ ಎಂದರೆ ತಾನು ಜೀವಂತಳಾಗಿರುವ ತನಕ ೫ ವರ್ಷದವರೆಗೆ ಫಿಕ್ಸೆಡ್ ಡಿಪಾಸಿಟ್‌ನಲ್ಲಿ ಇಟ್ಟರೆ ಎಷ್ಟು ಬಡ್ಡಿ ಬರುತ್ತದೋ ಅಷ್ಟನ್ನು ಜೀವಂತವಾಗಿರುವ ತನಕ ಕೊಡುತ್ತೇವೆ ಎಂದು ಹೇಳುತ್ತೀರಿ. ಈ ರೀತಿ ಯಾತಕ್ಕೆ ಹೇಳಬೇಕು. ಆಕೆ ಜೀವಂತವಾಗಿರುವವರೆಗೂ ಆಕೆಗೆ ಬಡ್ಡಿ ಕೊಡುತ್ತೀರಿ. ಆದರೆ ಆಕೆ ತೀರಿಹೋದಮೇಲೆ ಆ ವಿಧವೆಯ ಹಣ ಸರ್ಕಾರಕ್ಕೆ ಯಾತಕ್ಕೆ ಬೇಕು ? ತಾವು ಆಕೆ ಜೀವಂತವಾಗಿರುವವರೆಗೆ ಬಡ್ಡಿ ಕೊಡುತ್ತೀರಿ ನಿಜ, ಆದರೆ ಕ್ಯಾಪಿಟಲ್ ಅಮೌಂಟ್ ಸರ್ಕಾರ ಯಾತಕ್ಕೆ ಇಟ್ಟುಕೊಳ ಬೇಕು. ಅದನ್ನು ನೋಡಿದ ಮೇಲೆ ಇದರಲ್ಲಿ ಕೆಲವು ಅಪಾಯಗಳಿರುವುದು ಕಂಡುಬರುತ್ತದೆ. ನಾನ್ ಟ್ರಾನ್ಸ್‌ಫರಬಲ್ ಮತ್ತು ನಾನ್ ನೆಗೋಷಿಯಬಲ್ ಬಾಂಡ್ ಕೊಡಿ, ಬೇಡ ಎಂದು ಹೇಳುವುದಿಲ್ಲ. ವಿಧವೆಯರಿಗೆ ಸ್ವಲ್ಪ ಜಾಸ್ತಿ ಬಡ್ಡಿ ಬರುತ್ತದೆ ಎಂಬ ಉದ್ದೇಶದಿಂದ ಅವರಿಂದ ಬರೆಸಿಕೊಂಡು ಅವರು ಇದ್ದಷ್ಟು ಜೀವಮಾನ ಕಾಲದವರೆಗೆ ಬಡ್ಡಿ ಕೊಟ್ಟು ಆಮೇಲೆ ಅವರ ಮೂಲ ಹಣವನ್ನೇ ಮುಳುಗಿಸುವಂಥ ಇರಾದೆ ಕಂಡಹಾಗೆಯೇ ಈ ತಿದ್ದುಪಡಿಯಲ್ಲಿ ಅಡಗಿದೆ. ಇದು ದುರುದ್ದೇಶದಿಂದ ಅಡಗಿರಬಹುದು. ಕೇಂದ್ರ ಸರ್ಕಾರವೇ ಹೇಳಿರಲಿ, ಯಾರೇ ಹೇಳಿರಲಿ ಇದು ನ್ಯಾಯವಾದುದಲ್ಲ. ಇವತ್ತು ಸಮಾಜವಾದವನ್ನು ತರುವುದಕ್ಕೆ ಆಗುತ್ತಿಲ್ಲ. ಎಲ್ಲಾ ಪ್ರಜೆಗಳಿಗೆ ಉದ್ಯೋಗ, ಜೀವನಾವಶ್

ಕತೆಗಳು, ಆರೋಗ್ಯ ರಕ್ಷಣೆ ಮತ್ತಿತರ ಅನುಕೂಲತೆಗಳನ್ನು ಕೊಡುವ ಸ್ಥಿತಿಯಲ್ಲಿ ನಮ್ಮ ಸರ್ಕಾರವೂ ಇಲ್ಲ, ಸಮಾಜ ಆ ಮಟ್ಟಕ್ಕೆ ಬಂದಿಲ್ಲ. ಇಂಥ ಸಮಾಜದಲ್ಲಿ Principal means of livelihood and Principal means of production – ಇರಬೇಕು. ಭೂಮಾಲೀಕತನದ ಹಕ್ಕು ಇರಬಾರದು, ಅದನ್ನು ರದ್ದು ಮಾಡಬೇಕು ಎಂದು ಹೇಳುವಾಗ ಅವನಿಗೆ ಏನು ಕೊಡಬೇಕೋ ಅದನ್ನು ಒಂದೇ ಕಂತಿನಲ್ಲಿ ಕೊಡಿ. ಬಾಂಡಾದರೂ ಕೊಡಿ ಏನಾದರೂ ಕೊಡಿ, ನ್ಯಾಯವಾದ ರೀತಿಯಲ್ಲಿ ಅವರು ಜೀವನ ನಡೆಸುವುದಕ್ಕೆ ಅನುಕೂಲ ಮಾಡಿಕೊಡಿ ಎಂದು ಹೇಳುತ್ತೇನೆ. ಇವತ್ತಿನ ಪರಿಸ್ಥಿತಿಯಲ್ಲಿ ಈ ಮಾರ್ಗ ಬಿಟ್ಟು ಬೇರೆ ಮಾರ್ಗದಲ್ಲಿ ಹೋದರೆ ಈ ಭೂಸುಧಾರಣೆಯನ್ನು ಜಾರಿಗೆ ತರುವುದಕ್ಕೆ ಬಹಳ ಆತಂಕವಾಗುತ್ತದೆ ಎಂಬ ಭೀತಿ ಇದೆ. ಆದ್ದರಿಂದ ಇದನ್ನು ಪರಿಶೀಲನೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು Review by Tribunals ಬಗ್ಗೆ ಹೇಳಿದ್ದೀರಿ, ರೆವ್ಯೂ ಮಾಡುವಾಗ ಸೆಕ್ಷನ್ ೪೫ರ ಪ್ರಕಾರ ಅರ್ಜಿ ಹಾಕಿರತಕ್ಕ ಕಡೆಗಳಲ್ಲಿ ತಮ್ಮ ವಿಲೇಜ್ ಅಕೌಂಟೆಂಟ್‌ಗಳು ತಪ್ಪು ತಪ್ಪಾಗಿ ಸರ್ವೇ ನಂಬರ್‌ಗಳನ್ನು ಕೊಟ್ಟಿದ್ದಾರೆ. ತಾಲ್ಲೂಕ್ ಆಫೀಸಿನ ಕಾಂಪೌಂಡ್ ಮತ್ತು ತಾಲ್ಲೂಕ್ ಆಫೀಸ್ ಹಿತ್ತಲಿನ ಸರ್ವೇ ನಂಬರ್‌ನ್ನು ಒಬ್ಬ ವಿಲೇಜ್ ಅಕೌಂಟೆಂಟ್ ಬರೆದುಕೊಟ್ಟಿದ್ದಾನೆ. ಹೀಗೆ ತಪ್ಪುತಪ್ಪಾಗಿ ಸರ್ವೇ ನಂಬರುಗಳನ್ನು ಕೊಟ್ಟು ದುರುಪಯೋಗಗಳಾದ ಸಂದರ್ಭಗಳಿವೆ. ನಾನು ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಸದಸ್ಯನಾಗಿದ್ದೆ. ಆಗ ನನಗೆ ಗೊತ್ತಾಗಿದೆ. ಅಧಿಕಾರಿಗಳ ಅಜಾಗರೂಕತೆಯಿಂದ ತಪ್ಪು ತಪ್ಪು ತೀರ್ಪುಗಳು ಆದದ್ದು ಉಂಟು. ಹೀಗೆ ಸರಿಯಾದ ಸರ್ವೆ ನಂಬರ್‌ಗಳನ್ನು ಕೊಡದೇ ಎಷ್ಟೋ ತೊಂದರೆಗಳಾಗುತ್ತಿವೆ. ಅಲ್ಲಿಗೆ ಭೂಮಾಲೀಕರು ಬರುತ್ತಾರೆ, ರೈತರು, ಬರುತ್ತಾರೆ, ಆದರೆ ತಪ್ಪನ್ನು ಸರಿ ಪಡಿಸುವುದಕ್ಕೆ ಅದಕ್ಕೆ ಅಧಿಕಾರ ಇಲ್ಲದಂಥ ಪರಿಸ್ಥಿತಿ ಇದೆ. ಆದ್ದರಿಂದ ರೆವ್ಯೂ ಪವರ್ಸ್ ಕೊಡುವಾಗ ಅದನ್ನು ಟ್ರಿಬ್ಯುನಲ್‌ಗಳಿಗೆ ಕೊಡಿ. ಇಲ್ಲದೇ ಇದ್ದರೆ ಅದಕ್ಕಿಂತಲೂ ಉನ್ನತವಾದ ಯಾವುದೇ ಒಂದು ನ್ಯಾಯ ಸ್ಥಾನವನ್ನು ಏರ್ಪಾಡು ಮಾಡಿ. ಎಲ್ಲಿ ತಪ್ಪಾಗಿರುವುದು ಕಂಡು ಬರುತ್ತದೋ ಆ ತಪ್ಪನ್ನು ತಿದ್ದುವುದಕ್ಕೆ ಅವಕಾಶ ಮಾಡಿಕೊಡಬೇಕು. ಆದ್ದರಿಂದ ಟ್ರಿಬ್ಯುನಲ್‌ಗಳಿಗೆ ಅವಕಾಶ ಮಾಡಿಕೊಡಬೇಕಾಗಿದೆ. ತಪ್ಪು ಎಂದು ಮನವರಿಕೆಯಾದರೂ ಅದನ್ನು ತಿದ್ದುವುದಿಲ್ಲ ಎಂದು ಕಾನೂನು ನಮಗೆ ಬೇಡ. ತಪ್ಪಾದುದು ನಮ್ಮ ಗಮನಕ್ಕೆ ಬಂದರೆ ಅದನ್ನು ಪರಿಶೀಲನೆ ಮಾಡಿ ಸರಿಯಾಗಿ ತಿದ್ದುವುದಕ್ಕೆ ಬೇಕಾದ ಅನುಕೂಲತೆಯನ್ನು ಕೂಡಲೇ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಈಗಾಗಲೇ ಬಹಳ ಮಟ್ಟಿಗೆ ಅನೇಕ ರೀತಿಯಲ್ಲಿ ಅನುಕೂಲಗಳನ್ನು ಮಾಡಿಕೊಟ್ಟಿದ್ದೀರಿ. ಅದೇ ರೀತಿ ಇದನ್ನೂ ಮಾಡಿಕೊಟ್ಟು ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ತಾವು ಇನಾಂ ಜಮೀನಿಗೆ ಇದನ್ನು ಅಪ್ಲೈ ಮಾಡಿದ್ದೀರಿ ಅದು ಬಹಳ ಒಳ್ಳೆಯದು. ಇನ್ನೊಂದು ವಿಷಯ ಏನೆಂದರೆ ಬರಗಾಲ ಪೀಡಿತ ಪ್ರದೇಶಗಳಿಂದ ಅನೇಕ ಜನ ಬಡಜನರು ತಮ್ಮ ಜಮೀನುಗಳನ್ನು ಬೇರೆಯವರಿಗೆ ಬಿಟ್ಟುಕೊಟ್ಟು ಊರುಗಳನ್ನು ಬಿಟ್ಟು ಹೋಗಬೇಕಾದ ಪರಿಸ್ಥಿತಿಗಳು ಎಷ್ಟೋ ಬಾರಿ ಬರುತ್ತದೆ. ಇಂಥ ಸಂದರ್ಭಗಳಲ್ಲಿ ಈ ಬಡಜನರಿಂದ ಅಲ್ಪ ಬೆಲೆಗೆ ಜಮೀನುಗಳನ್ನು ಪಡೆದುಕೊಂಡಿರುವ ಸಂದರ್ಭಗಳು ಉಂಟು. ಇಂಥ ಪರಿಸ್ಥಿತಿ ಬೀದರೆ ಜಿಲ್ಲೆ, ಗುಲ್ಬರ್ಗ ಜಿಲ್ಲೆ ಮತ್ತು ಬಿಜಾಪುರ ಜಿಲ್ಲೆಯಲ್ಲಿ ಬಂದಿದ್ದು ಅನೇಕ ಮಂದಿ ರೈತರು ಈ ವಿಚಾರ ಹೇಳುತ್ತಿದ್ದಾರೆ. ಆದ್ದರಿಂದ ನಾನು ಮನವಿ ಮಾಡಿಕೊಳ್ಳುವುದೇನೆಂದರೆ ಈ ಕಾನೂನು ವ್ಯಾಪ್ತಿಗೆ ತರುವುದಕ್ಕೆ ಆಗದೇ ಇದ್ದರೂ ಕೂಡ ನಿಜವಾಗಿ ಸಣ್ಣ ಹಿಡುವಳಿದಾರರು ಯಾರು ತಮ್ಮ ಜಮೀನನ್ನು ಕಳೆದುಕೊಂಡಿದ್ದಾರೆ ಅಂಥವರಿಗೆ ಜಮೀನನ್ನು ವಾಪಸ್ ಕೊಡಿಸುವುದಕ್ಕೆ ಬೇಕಾದ ಶಾಸನವನ್ನು ತೆಗೆದುಕೊಂಡು ಬನ್ನಿ. ಕೊನೆಯದಾಗಿ ಮಾನ್ಯ ಸಚಿವರ ಗಮನಕ್ಕೆ ಒಂದು ವಿಷಯವನ್ನು ತರುತ್ತಿದ್ದೇನೆ. ತಾವು ತಮ್ಮ ಉದ್ದೇಶವನ್ನು ಘೋಷಣೆ ಮಾಡಿದ್ದೀರಿ. ಈ ಉದ್ದೇಶದ ವ್ಯಾಪ್ತಿಗೆ ಒಳಪಡದೇ ಇರುವಂಥ, ಮೂಲ ಶಾಸನದ ವ್ಯಾಪ್ತಿಗೆ ಹೊರತಾದಂಥ ಒಂದು ತಿದ್ದುಪಡಿಯನ್ನು ತಂದಿದ್ದೀರಿ. ಸೆಕ್ಷನ್ ೫ರಲ್ಲಿ ವಿಧವೆಯರಿಗೆ, ಅಪ್ರಾಯಸ್ಥರಿಗೆ ಅಂಗವಿಕಲರಿಗೆ ಕೂಡ ಕೆಲವು ಸವಲತ್ತುಗಳನು ಕೊಟ್ಟಿದ್ದೀರಿ. ಇನ್ನೂ ಸೋಲ್ಜರ್ಸ್ ಮತ್ತು ಸೀಮೆನ್ಸ್ ಏನು ಇದ್ದಾರೋ ಅವರಿಗೆ ೧೯೬೧ರಲ್ಲಿ ಮಂಜೂರು ಮಾಡಿದ ಮೂಲ ಶಾಸನದಲ್ಲಿ ವ್ಯಾಪಕವಾದ ಎಗ್ಸೆಂಪೆಷನ್ ಇತ್ತು. ೧೯೭೪ರಲ್ಲಿ ತಿದ್ದುಪಡಿ ಮಾಡಿದಾಗ ಬಹಳವಿಚಾರ ವಿನಿಮಯ ನಡೆಸಿ ಕೇಂದ್ರ ಸರ್ಕಾರದ ಅನುಮತಿ ತೆಗೆದುಕೊಂಡು ಕೆಲವು ವಿನಾಯಿತಿ ಕೊಟ್ಟಿದ್ದೀರಿ. ದೇಶಕ್ಕೋಸ್ಕರ ಅವರು ಮಾಡುವಂಥ ಸೇವೆಯನ್ನು ಪರಿಗಣಿಸಿ ವಿನಾಯಿತಿ ಕೊಟ್ಟಿದ್ದಾರೆ. ಅವನು ಮಿಲಿಟರಿಗೆ ಸೇರುವುದಕ್ಕೆ ಮೂರು ತಿಂಗಳು ಮೊದಲು ತನ್ನ ಜಮೀನನ್ನು ಬೇರೆಯವರಿಗೆ

ಗೇಣಿಗೆ ಕೊಟ್ಟು ಸಶಸ್ತ್ರ ಪಡೆಯಲ್ಲಿ ಸೇರಿಕೊಂಡು ಅಲ್ಲಿಂದ ತನ್ನ ಸೇವೆಯನ್ನು ಮುಗಿಸಿ ಬಿಡುಗಡೆಯಾಗಿ ವಾಪಸ್ ಬಂದಮೇಲೆ ದೇಶಕ್ಕೋಸ್ಕರ ಜೀವವನ್ನು ಮುಡುಪಾಗಿಟ್ಟು ಹೋರಾಟ ಮಾಡಿದ್ದಾನೆ ಎಂಬ ಕಾರಣದಿಂದ ಜಮೀನನ್ನು ಬಿಡಿಸಿಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮೂಲ ಮಸೂದೆಯಲ್ಲಿ ಸೇರಿಸಿದೆ. ಅದನ್ನು ವಿಸ್ತಾರ ಮಾಡಿ ತಾವು ಏನು ಮಾಡಿದ್ದೀರಿ ಎಂದರೆ—Even he can resume the land if the land h d been given on lease by his predecessors in title ಎಂದು ಮಾಡಿದ್ದೀರಿ.

ಹೀಗೆ ಹೇಳಿದರೆ ಏನು ಅರ್ಥ ? ಇವನ ಹಿರಿಯರು ಗೇಣಿಗೆ ಕೊಟ್ಟಿದ್ದರೂ ಕೂಡ ಅವನು ಮಿಲಿಟರಿಗೆ ಹೋಗಿ ಬಂದಾಗ ವಾಪಸ್ ಕೊಡಬೇಕು ಎಂದು ಅವನಿಗೆ ಜಮೀನು ಎಲ್ಲಿದೆ ಎಂದು ಗೊತ್ತಿರುವುದಿಲ್ಲ, ಆದರೂ ಕೂಡ ಬಿಡಿಸುವುದಕ್ಕೆ............

SRI B. BASAVALINGAPPA.—We are deleting that provision.

SRI B. V. KAKKILAYA.—Thank you very much.

ಅವರಿಗೆ ಎಷ್ಟು ಸೌಕರ್ಯಗಳನ್ನು ಕೊಡುತ್ತೀರೋ ಅಷ್ಟೂ ಒಳ್ಳೆಯದು. ಅವರಿಗೆ ಬೇರೆ ಜಮೀನು ಕೊಡಿ. ಹೆಚ್ಚು ಪೆನ್‌ಷನ್ ಕೊಡಿ. ಪುನರ್‌ವಸತಿ ಮಾಡಿಕೊಡಿ. ಏಕೆಂದರೆ ಅವರು ದೇಶಕ್ಕೋಸ್ಕರ ಹೋರಾಟ ಮಾಡಿದಂಥ ಜನ. ಆದರೆ ಲಕ್ಷಾಂತರ ಜನ ರೈತರಿಗೆ ತೊಂದರೆಯಾಗುವ ರೀತಿಯಲ್ಲಿ ಮಾಡುವುದು ಸರಿಯಲ್ಲ. ಆದ್ದರಿಂದ ತಾವು ಅದನ್ನು ಡಿಲಿಟ್ ಮಾಡುವುದಾದರೆ ಮತ್ತೊಮ್ಮೆ ತಮಗೆ ಅಭಿನಂದನೆಗಳನ್ನು ಅರ್ಪಿಸುತ್ತೇನೆ. ಮಾನ್ಯ ಸದಸ್ಯರಾದ ಕುಮಾರಿ ಪ್ರಮೀಳಾರವರು ಇಲ್ಲಿಲ್ಲ. ಅವರು ಯಾವಾಗಲೂ ಮಹಿಳೆಯರ ಬಗ್ಗೆ ಹೇಳುತ್ತಿರುತ್ತಾರೆ. ಅದೇ ರೀತಿ ಮಹಿಳೆಯರಿಗೆ ಮತ್ತು ಪುರುಷರಿಗೆ ಸಮಾನವಾದ ಹಕ್ಕನ್ನು ಕೊಡಬೇಕೆಂದು ಪ್ರತಿಪಾದನೆ ಮಾಡುವವರಲ್ಲಿ ನಾನೂ ಒಬ್ಬ. ಅವರು ನಿನ್ನೆ ದಿವಸ ಮಾತನಾಡುವಾಗ ಕೆಲವು ಸಲಹೆಗಳನ್ನು ಕೊಟ್ಟರು. ಮತ್ತು ಮಹಿಳೆಯರ ಮತ್ತು ಅಪ್ರಾಪ್ತ ವಯಸ್ಕರ ಹಿತಕ್ಕೆ ಧಕ್ಕೆ ಆಗುತ್ತದೆ ಎಂಬ ವಿಷಯವನ್ನೂ ತಿಳಿಸಿದರು, ೧೯೬೧ರ ಆಕ್ಟ್‌ನಲ್ಲಿ ಫ್ಯಾಮಿಲಿ ಡೆಫನಿಷನ್ ಏನಿದೆಯೋ ಅದನ್ನೇ ಮಾನ್ಯ ಸದಸ್ಯರಾದ ಪ್ರಮೀಳಾ ಅವರೂ ಸೂಚನೆ ಮಾಡಿದ್ದಾರೆ. ೧೯೬೧ರ ಆಕ್ಟ್‌ನಲ್ಲಿ ಫ್ಯಾಮಿಲಿ ಎಂದರೆ ಏನು ಡೆಫನಿಷನ್ ಇದೆಯೆಂದರೆ family in relation to a person means such person and being married the wife or husband as the case may be, and the dependent children and grand children of such person. ಎಂದು ಇದೆ. ಆದರಲ್ಲಿ ಗಂಡು ಮಕ್ಕಳು, ಹೆಣ್ಣು ಮಕ್ಕಳು ಎಂಬ ಯಾವ ವ್ಯತ್ಯಾಸವೂ ಇಲ್ಲ. ೧೯೭೪ರಲ್ಲಿ ಒಂದು ಅಮೆಂಡ್‌ಮೆಂಟ್ ಬಂತು. ಇದು ಯಾತಕ್ಕೆ ಬಂತು ಎಂಬುದನ್ನು ಪರಿಶೀಲನೆ ಮಾಡಬೇಕು. ಪ್ರಮೀಳ ಅವರಿಗೆ ಅದರ ಇತಿಹಾಸ ಗೊತ್ತಿಲ್ಲ. ಆಗ ಅವರು ಅಸೆಂಬ್ಲಿಯಲ್ಲಿ ಸದಸ್ಯರಾಗಿರಲಿಲ್ಲ. ಒಂದೇ ಒಂದು ಉದ್ದೇಶದಿಂದ ಅಮೆಂಡ್‌ಮೆಂಟ್ ಬಂತು. ಆದರೆ ಹಳೇ ಆಕ್ಟ್‌ನಲ್ಲಿ ಫ್ಯಾಮಿಲಿ ಎಂಬುದಕ್ಕೆ ಯಾವ ಡೆಫನಿಷನ್ ಇದೆ ಅದನ್ನೇ ಅಳವಡಿಸುವುದಾದರೆ ಈಗಲೂ ನಾನು ೧೦೦ಕ್ಕೆ ೧೦೦ರಷ್ಟು ಬೆಂಬಲವನ್ನು ಮಾನ್ಯ ಕಂದಾಯ ಸಚಿವರಿಗ ಕೊಡುತ್ತೇನೆ. ಆದರೆ ಅದು ಏತಕ್ಕೆ ಬದಲಾವಣೆಯಾಯಿತು ಎಂದರೆ ಕೇಂದ್ರದಲ್ಲಿ ತಮ್ಮ ಪಕ್ಷದ ಸೆಂಟ್ರಲ್ ಲ್ಯಾಂಡ್ ರಿಫಾರ್ಮ್ಸ್ ಕಮಿಟಿಯವರು ಪರಿಶೀಲನೆ ಮಾಡಿ ಸೂಚನೆ ಕೊಟ್ಟು ಅದರಂತೆ ಸೀಲಿಂಗ್ ಪರಿಮಿತಿಯನ್ನು ಕಡಿಮೆ ಮಾಡುವುದಕ್ಕೆ ಕೇಂದ್ರ ಸರ್ಕಾರ ಆದೇಶ ಏನು ಕೊಟ್ಟರು ಆಗ ೧೧೬ ಎಕರೆ ಇದ್ದುದನ್ನು ೫೪ ಎಕರೆಗೆ ಕಡಿಮೆ ಮಾಡಿದ್ದೀರಿ. ಶ್ರೀಮಂತರ ಹತ್ತಿರ ಏನು ದೊಡ್ಡ ದೊಡ್ಡ ಜಮೀನಿತ್ತು ಅದು ಕೈತಪ್ಪಿ ಹೋಗಬಾರದು, ಸೀಲಿಂಗ್ ಕಡಿಮೆ ಮಾಡಬೇಕು, ಜಮೀನು ಮಾತ್ರ ಉಳಿಯಬೇಕು ಎಂಬ ಉದ್ದೇಶದಿಂದ ತಿದ್ದುಪಡಿಯಾಯಿತು. ಫ್ಯಾಮಿಲ್ಲಿ ಡೆಫನಿಷನ್‌ನಲ್ಲಿ ಬದಲಾವಣೆ ಮಾಡಿ ಫ್ಯಾಮಿಲಿಯಲ್ಲಿರುವ ಪ್ರತಿಯೊಬ್ಬ ವಯಸ್ಕನನ್ನೂ ಒಂದೊಂದು ಫ್ಯಾಮಿಲಿ ಎಂದು ಕನ್‌ಸಿಡರ್ ಮಾಡಿ ಒಬ್ಬೊಬ್ಬರಿಗೂ ಒಂದೊಂದು ಸೀಲಿಂಗ್ ಲಿಮಿಟ್ ಎಂದು ಮಾಡಿ ಜಮೀನು ಇಟ್ಟುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುವಂಥ ಪ್ರತಿಗಾಮಿ ಉದ್ದೇಶದಿಂದ ತಿದ್ದುಪಡಿ ಬಂದಿದೆ ಎಂಬುದನ್ನು ಈ ಸಂದರ್ಭದಲ್ಲಿ ಸ್ಮರಿಸಲಿಕ್ಕೆ ಇಷ್ಟಪಡುತ್ತೇನೆ. ಏತಕ್ಕೆಂದರೆ ಮಹಿಳೆಯರ ಹಕ್ಕುಬಾಧ್ಯತೆಗಳಿಗೆ ಯಾವುದೇ ಒಂದು ತೊಂದರೆ ಬರಬಾರದು, ಬರಬೇಕು ಎನ್ನುವ ಉದ್ದೇಶದಿಂದ ಅಲ್ಲ.

ಶ್ರೀ ಜೆ. ಎಚ್. ಪಟೇಲ್.—ಕುಮಾರಿ ಪ್ರಮಿಳಾರವರು ತಿಳಿಸಿದ್ದು ಏನೆಂದರೆ, ಮೈನರ್ ಸನ್ಸ್, ಅನ್ ಮ್ಯಾರೀಡ್ ಡಾಟರ್ಸ್ ಎಂದು ಇದೆ ; ಮೈನರ್ ಸನ್ಸ್, ಅನ್ ಮ್ಯಾರೀಡ್ ಡಾಟರ್ಸ್ ಎಂದು ಇರುವುದು ಸರಿಯಲ್ಲ, ಮೈನರ್ ಚಿಲ್ಡ್ರನ್ ಎಂದು ಮಾಡಿಬಿಡಿ, ವಯಸ್ಸಾದವರು ಆಕಸ್ಮಾತ್ ಮದುವೆ ಯಾಗದೇ ಇದ್ದರೆ ಈ ಪ್ರಾವಿಜನ್‌ನಲ್ಲಿ ಬರುವುದಿಲ್ಲ ಎಂದು.

ಶ್ರೀ ಬಿ. ವಿ. ಕಕ್ಕಿಲಾಯ.—ಅವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಅದಕ್ಕೆ ಬಾಧಕ ಇಲ್ಲ. ಈಗಲಾದರೂ ತಿದ್ದುಪಡಿಯಲ್ಲಿ ತಾವು ಮೈನರ್ ಚಿಲ್ಡ್ರನ್ ಎಂದು ಮಾಡಬಹುದು, ಏನೂ ತೊಂದರೆ ಬರುವುದಿಲ್ಲ. ಅನ್ ಮ್ಯಾರೀಡ್ ಡಾಟರ್ಸ್ ಎಂದು ಇದ್ದಲ್ಲಿ ಒಂದು ಕಷ್ಟ ಬರುತ್ತದೆ. ಅನ್ ಮ್ಯಾರೀಡ್ ಡಾಟರ್ಸ್ ಕುಟುಂಬಕ್ಕೆ ಒಳಪಡದೆ ಇದ್ದರೆ ಯಾರು ತಂದೆಯನ್ನು ಆಶ್ರಯಿಸಿಕೊಂಡಿದ್ದಾರೆ, ಕುಮಾರಿ ಪ್ರಮಿಳರಂತಹವರು ಲಾಯರ್ಸ್, ಡಾಕ್ಟರ್ಸೂ ಆಗಿದ್ದು ಸ್ವತಃ ಸಂಪಾದನೆ ಮಾಡಿದಂಥ ಜಮೀನನ್ನು ಇಟ್ಟುಕೊಳ್ಳಲಿಕ್ಕೆ ಅವಕಾಶ ಕೊಡುವುದು ನ್ಯಾಯವಾದುದು. ಅನ್ ಮ್ಯಾರೀಡ್ ಡಾಟರ್ಸ್ ಎಂದು ಇರುವಲ್ಲಿ ಅನ್ ಮ್ಯಾರೀಡ್ ಅಂಡ್ ಡಿಪೆಂಡೆಂಟ್ ಡಾಟರ್ಸ್ ಎಂದು ಮಾಡಿದರೆ ತಂದೆಯನ್ನೇ ಆಶ್ರಯಿಸಿ ಕೊಂಡು ಜಮೀನಿನ ಹುಟ್ಟುವಳಿಯಲ್ಲೇ ಬದುಕುವ ಹೆಣ್ಣು ಮಕ್ಕಳಿಗೆ ಅನುಕೂಲವಾಗುತ್ತದೆ. ಏಕೆಂದರೆ ಇಂತಹ ಹೆಣ್ಣುಮಕ್ಕಳು ಸಾವಿರಾರು ಜನ ಇದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಒರಿಜಿನಲ್ ಆಕ್ಟ್‌ನಲ್ಲಿ ಸೆಕ್ಷನ್ ೨ ಕ್ಲಾಸ್ ೩೩ನಲ್ಲಿ ನೋಡಿ. ಅಂಥಾ ದ್ದನ್ನು ಮಾಡಿದ್ದೇವೆ.

ಶ್ರೀ ಬಿ. ವಿ. ಕಕ್ಕಿಲಾಯ.—ಅವರೂ ಇದರ ವ್ಯಾಪ್ತಿಯೊಳಗೆ ಬರುತ್ತಾರೆ. ಇನ್ನೂ ಅನುಮಾನ ವಿದ್ದರೆ ಒಂದು ವಿಭಾಗದ ಮಹಿಳೆಯರಿಗೆ ಸ್ವತಂತ್ರವಾಗಿ ಸಂಪಾದನೆ ಮಾಡಿದಂಥ, ಆಸ್ತಿ ಇರುವಂಥ ಹೆಣ್ಣು ಮಕ್ಕಳಿಗೆ ಜಮೀನನ್ನು ಇಟ್ಟುಕೊಳ್ಳುವುದಕ್ಕೆ ಹಕ್ಕು ಕೊಡುವುದು ಮುಖ್ಯವಾದುದು. ತಂದೆ ತಾಯಿಗಳನ್ನು ಆಶ್ರಯಿಸಿಕೊಂಡಿರುವ ಹೆಣ್ಣು ಮಕ್ಕಳಿಗೆ ಮದುವೆಯಾಗುವ ತನಕ ಅವರನ್ನು ನಿರ್ಗತಿಕ ರನ್ನಾಗಿ ಮಾಡಬಾರದು. ಸೀಲಿಂಗ್‌ನ್ನು ನಿಗದಿಮಾಡುವಾಗ ಅವರನ್ನೂ ಕೂಡ ಕುಟುಂಬದ ಸದಸ್ಯರು ಎಂದು ಪರಿಗಣಿಸಬೇಕಾದ್ದು ಅಗತ್ಯ ಇದೆ.

ಶ್ರೀ ಬಿ. ಬಸವಲಿಂಗಪ್ಪ.—ಆ ಬಗ್ಗೆ ಹಿಂದು ಲಾ ಇದೆ.

ಶ್ರೀ ಬಿ. ವಿ. ಕಕ್ಕಿಲಾಯ.—ತಾವು ವಕೀಲರು, ನಾನು ವಕೀಲನಲ್ಲ. ಕಾನೂನಿನ ಪರಿಧಿಯಲ್ಲಿ ಬರಬಹುದು. ಸ್ವಂತ ಆಸ್ತಿ ಸಂಪಾದನೆ ಮಾಡಿದಂಥವರು ಇದ್ದಾರೆ, ತಂದೆ ತಾಯಿಗಳನ್ನು ಆಶ್ರಯಿಸಿ ಕೊಂಡಿರುವವರೂ ಇದ್ದಾರೆ, ಅವರಿಗೆ ನಾಳೆ ಗತಿ ಇಲ್ಲದಹಾಗೆ ಮಾಡಬಾರದು, ಅವರಿಗೂ ಇದರಲ್ಲಿ ರಕ್ಷಣೆ ಸಿಗುವಹಾಗೆ ಮಾಡಬೇಕು.

ಶ್ರೀಮತಿ ಅನುಸೂಯ ಗಜಾನನ ಶರ್ಮ.—ಅವರು ತಂದೆಯ ಆಶ್ರಯದಲ್ಲಿ ಇದ್ದರೆ ಅಡ್ಡಿ ಇಲ್ಲ. ಕೆಲವರು ಚಿಕ್ಕಪ್ಪ, ಅಣ್ಣ ಮುಂತಾದವರ ಆಶ್ರಯದಲ್ಲಿ ಉಳಿಯಬೇಕಾಗುತ್ತದೆ. ಅವರಿಗೂ ನ್ಯಾಯ ಸಿಗುವಹಾಗೆ ಮಾಡಬೇಕು. ಅವರಿಗೂ ಜಮೀನು ಇಟ್ಟುಕೊಳ್ಳಲಿಕ್ಕೆ ಬಿಡಬೇಕು.

ಶ್ರೀ ಬಿ.ವಿ. ಕಕ್ಕಿಲಾಯ.—ಕಾನೂನಿನಲ್ಲಿ ಗಂಡುಮಕ್ಕಳಿಗೆ ಜನ್ಮತಾಳಿದ ಕೂಡಲೇ ಆಸ್ತಿ ಹಕ್ಕು ಬರು ತ್ತದೆ. ಹಿಂದೂ ಫ್ಯಾಮಿಲಿಯಲ್ಲಿ ಆಸ್ತಿಯನ್ನು ಷೇರ್ ಮಾಡಿಕೊಳ್ಳುತ್ತಾರೆ. ಗಂಡು ಮಕ್ಕಳು ತಂದೆ ಯೊಂದಿಗೆ ಪಾಲು ಮಾಡಿಕೊಳ್ಳುತ್ತಾರೆ. ತಂದೆ ಇರುವಾಗಲೇ ಪಾಲು ಮಾಡಿಕೊಂಡರೆ ಹೆಣ್ಣು ಮಕ್ಕ ಳಿಗೂ ಬರುತ್ತದೆ. ತಂದೆ ಇಲ್ಲದೇ ಹೋದರೆ ಗಂಡು ಮಕ್ಕಳಿಗೆ ಬರುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾಯಿಯ ಆಸ್ತಿ ಹೆಣ್ಣುಮಕ್ಕಳಿಗೆ ಹೋಗುತ್ತದೆ, ಗಂಡು ಮಕ್ಕಳಿಗೆ ಹೋಗುವುದಿಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.—ಹಿಂದೂ ಲಾನಲ್ಲಿ ಇದೆ ಮೊನ್ನೆ ಈ ಸದನದಲ್ಲಿ ಅಳಿಯ ಸಂತಾನದ ಬಗ್ಗೆ ಚರ್ಚೆ ಮಾಡಿದ್ದೇವೆ. ಅದರಲ್ಲಿ ಹೆಣ್ಣುಮಕ್ಕಳಿಗೆ ಆಸ್ತಿ ಹಕ್ಕು ಬರುತ್ತದೆ, ಗಂಡಸರಿಗೆ ಆಸ್ತಿ ಹಕ್ಕು ಇಲ್ಲ. ನಮ್ಮಲ್ಲಿ ಅನೇಕ ಕುಟುಂಬಗಳಲ್ಲಿ ಇವತ್ತಿನದಿವಸ ಗಂಡ ಸತ್ತುಹೋದ ನಂತರ ಅವನ ಶವವನ್ನು ತೆಗೆದು ಉತ್ತರ ಕ್ರಿಯೆಗಳನ್ನು ಮಾಡಿದ ಕೂಡಲೇ ಹೆಂಡತಿ ಮಕ್ಕಳು ಮನೆ ಬಿಟ್ಟು ತನ್ನ ತಾಯಿ ಮನೆಗೆ ಹೋಗಬೇಕು ಎನ್ನುವ ನೀಚ ಪದ್ಧತಿ ಇದೆ. ಡೈವರ್ಸ್ ಮಾಡುವುದು ಸುಲಭ, ಅದರ ಬಗ್ಗೆ ಶಾಸನ ತಂದರೆ ಒಳ್ಳೆಯದು. ವಿಧವೆ ಆದಮೇಲೆ ಹೆಣ್ಣುಮಕ್ಕಳು ತಾವೂ ಕೂಡ ವೃದ್ಧಿಮಾಡಿದಂಥ ಜಮೀನಿನಲ್ಲಿ

ಅದನ್ನು ಅನುಭವಿಸುವ ಹಕ್ಕು ಇಲ್ಲ ಎನ್ನುವ ಕಾನೂನು ಇವತ್ತೂ ಕೂಡ ನಮ್ಮ ರಾಜ್ಯದಲ್ಲಿದೆ. ಇದನ್ನು ತೊಡೆದುಹಾಕುವುದಕ್ಕೆ ಕಾನೂನು ತೆಗೆದುಕೊಂಡು ಬನ್ನಿ. ಆದುದರಿಂದ ಇಂತಹ ಒಂದು ಶಾಸನ ಬರುವಾಗಲೇ ಇದನ್ನು ಹೇಳುವುದು ನ್ಯಾಯ, ಅದಕ್ಕೋಸ್ಕರ ಹೋರಾಟ ಮಾಡುವುದು ಕೂಡ ನ್ಯಾಯ. ಕಾನೂನಿನ ಇತಿಮಿತಿಗೆ ಒಳಪಟ್ಟು ಎಷ್ಟು ಮಾಡುವುದಕ್ಕೆ ಆಗುತ್ತದೆ ಎನ್ನುವುದನ್ನು ಪರಿಗಣಿಸಬೇಕು. ಈ ಶಾಸನವನ್ನು ತಂದಿರುವುದಕ್ಕೆ ಮಾನ್ಯ ಕಂದಾಯ ಸಚಿವರಿಗೆ ಮತ್ತು ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸಿ, ಇದನ್ನು ಜಾರಿಗೊಳಿಸಲಿಕ್ಕೆ ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಮತ್ತೊಮ್ಮೆ ಪ್ರಾರ್ಥನೆಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ಟಿ. ರಾಮು (ಚನ್ನಪಟ್ಟಣ).—ಮಾನ್ಯ ಅಧ್ಯಕ್ಷಣಿ ಮಾತೆಯವರೇ, ಮಾನ್ಯ ಕಂದಾಯ ಸಚಿವರು ತಿದ್ದುಪಡಿಯನ್ನು ಏನು ತಂದಿದ್ದಾರೆ ಅದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಈ ಭೂಸುಧಾರಣಾ ಶಾಸನ ಹಿಂದೆ ರೆವಿನ್ಯು ಸಚಿವರಾಗಿದ್ದಂಥ ಸನ್ಮಾನ್ಯ ಕಡಿದಾಳ್ ಮಂಜಪ್ಪನವರ ಕಾಲದಲ್ಲಿ ಅಂದರೆ ೧೯೫೭ರಲ್ಲಿ ಪ್ರಾರಂಭವಾಗಿ, ೧೯೬೧ರಲ್ಲಿ ಇಂದು ಈ ರಾಷ್ಟ್ರದ ಉಪ ರಾಷ್ಟ್ರಾಧ್ಯಕ್ಷರಾಗಿರತಕ್ಕಂಥ ಸನ್ಮಾನ್ಯ ಬಿ. ಡಿ. ಜತ್ತಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆಯಾಗಿ, ಈ ರಾಜ್ಯದಲ್ಲಿ ಸಮಗ್ರವಾದ ಭೂಸುಧಾರಣಾ ಮಸೂದೆಯನ್ನು ಜಾರಿಗೆ ತಂದರು. ಅದೂ ಸಹ ಒಂದು ಪ್ರಗತಿಪರವಾದ ಮಸೂದೆ. ಆದರೆ ಆ ಪ್ರಗತಿಪರವಾದ ಮಸೂದೆಗೆ ಒಂದು ಕ್ರಾಂತಿಯ ಮೆರುಗನ್ನು, ಕ್ರಾಂತಿಯ ಛಾಯೆಯನ್ನು ಕೊಟ್ಟಿದ್ದು ೧೯೭೪ರಲ್ಲಿ. ಇದನ್ನು ಚಾಲನೆಗೆ ಕೊಟ್ಟಿದ್ದು ೧೯೭೪ರಲ್ಲಿ ಎಂದು ನನ್ನ ಮನೋಭಾವನೆ. ೧೯೭೪ರಿಂದ ೧೯೭೮ರವರೆಗೆ ಅಂದರೆ ೪ ವರ್ಷಗಳ ಅವಧಿಯಲ್ಲಿ ಈ ಮಸೂದೆಯಲ್ಲಿ ಅಡಗಿರತಕ್ಕ ಕೆಲವು ಕ್ಲಾಸುಗಳು ಏನಿವೆ. ಅವುಗಳಲ್ಲಿರತಕ್ಕ ಲೋಪದೋಷಗಳನ್ನು, ತೊಡಕುಗಳನ್ನು ನಿವಾರಿಸಿ ಈ ತಿದ್ದುಪಡಿಗಳನ್ನು ಈಗ ನಮ್ಮ ಸರ್ಕಾರ ಮುಂದೆ ಇಟ್ಟಿದೆ. ಇದು ನಿಜವಾಗಿಯೂ ಸಹ ಒಂದು ಸ್ತುತ್ಯಾರ್ಹವಾದ ಕಾರ್ಯ ಎಂದು ನನ್ನ ಮನೋಭಾವನೆ. ಈ ಮಸೂದೆಯ ೫೮ನೇ ಸೆಕ್ಷನ್‌ಗೆ ತಂದಿರತಕ್ಕ ತಿದ್ದುಪಡಿ ಮಸೂದೆ ಏನಿದೆ ಇದು ನಿಜವಾಗಿಯೂ ಸಹ ರಾಜ್ಯದಲ್ಲಿರತಕ್ಕ ಕೃಷಿ ಕಾರ್ಮಿಕರಿಗೆ ಒಂದು ವರದಾನ ಎಂದು ನನ್ನ ಮನೋಭಾವನೆ. ಯಾವ ಆಶ್ರಯ ಇಲ್ಲದೇ ಇರತಕ್ಕ, ರಕ್ಷಣೆ ಇಲ್ಲದೇ ಇರತಕ್ಕ ಕೃಷಿ ಕಾರ್ಮಿಕರಿಗೆ ಏನು ಒಂದು ಭದ್ರವಾದಂಥ ಜೀವನವನ್ನು ಒದಗಿಸುತ್ತಿದ್ದೇವೆ, ಇದನ್ನು ಅತ್ಯಂತ ಹಾರ್ದಿಕವಾಗಿ ಎಲ್ಲಾ ಪಕ್ಷದ ಸದಸ್ಯರೂ ಸಹ ಸ್ವಾಗತ ಮಾಡಬೇಕು ಎನ್ನುವುದು ನನ್ನ ಖಚಿತವಾಗಿ ಅಭಿಪ್ರಾಯ.

೫-೦೦ ಪಿ. ಎಂ.

ಹಿಂದೆ ಏನು ಮಾಡುತ್ತಿದ್ದರು ಎಂದರೆ ಭೂಮಾಲೀಕರು ಏನಾದರೂ ಒಂದು ನೆಪ ಹೂಡಿ ಅವರ ಜಮೀನಿನಲ್ಲಿರತಕ್ಕ, ಖಾಯಂ ಆಗಿ ವಾಸ ಮಾಡಿಕೊಂಡಿರತಕ್ಕ ಕೃಷಿ ಕಾರ್ಮಿಕ ಯಾರಿದ್ದಾರೆ ಅವರನ್ನು ಒಕ್ಕಲು ಎಬ್ಬಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದರು. ಅದನ್ನು ತಡೆ ಹಿಡಿಯುವುದಕ್ಕೆ ಅಲ್ಲಿ ವಾಸವಾಗಿರತಕ್ಕ ಕೃಷೀ ಕಾರ್ಮಿಕರು ಅಲ್ಲಿಯೇ ವಾಸವಾಗಿರಬೇಕು ಎಂದು ಈ ಮಸೂದೆಯನ್ನು ತರಲಾಗಿದೆ. ಇದರ ಉದ್ದೇಶ ಬಹಳ ಒಳ್ಳೆಯದಿದೆ. ಈವೊತ್ತು ಈ ಮಸೂದೆಯನ್ನು ತರದಿದ್ದರೆ, ಕೃಷೀ ಕಾರ್ಮಿಕರೆಲ್ಲರೂ ಒಗ್ಗಟ್ಟಾಗಿ ಅವರಲ್ಲಿ ಜಾಗ್ರುತಿ ಉಂಟಾಗಿ ನಮ್ಮ ರಾಜ್ಯದಲ್ಲೂ ಒಬ್ಬ ಕರ್ನಲ್ ಜನರಲ್ ಚಾರು ಮಜೂಂದಾರ್ ಅಂಥ ಜನರನ್ನು ಉತ್ಪತ್ತಿ ಮಾಡತಕ್ಕ ಶಕ್ತಿ ಚಾಲನೆ ಆಗುವುದು ಇತ್ತು. ಆದುದರಿಂದ ಇವತ್ತು ಕೃಷಿ ಕಾರ್ಮಿಕಯಾರಿದ್ದಾರೆ ಅವರಿಗೆ ೫ ಸೆಂಟ್ ಜಮೀನು ವಾಸಕ್ಕೆ ಕೊಡಬೇಕು ಎಂದು ತಂದಿರತಕ್ಕಂಥ ಮಸೂದೆ ಏನಿದೆ ಅದು ನಿಜವಾಗಿಯೂ ಒಂದು ಶುಭ ಸೂಚನೆಯಾಗಿದೆ. ಜೊತೆಗೆ ನನ್ನ ಸ್ನೇಹಿತರಾದ ಶ್ರೀ ತಕೇಡ್ ಹೇಳಿದರು, ಕೆಲವರು ತಾತ್ಕಾಲಿಕವಾಗಿ ಬರುತ್ತಾರೆ ಕೆಲವರು ಹೊರಟು ಹೋಗುತ್ತಾರೆ, ಅದರಲ್ಲಿ ಕೆಲವರು ಉಳಿದುಕೊಂಡು ಬಿಡುತ್ತಾರೆ ಅಂಥವರಿಗೂ ಇದು ಅನ್ವಯವಾಗಬಾರದು. ಏತಕ್ಕೆಂದರೆ ಇದರ ಉದ್ದೇಶ ಅಲ್ಲಿಯೇ ವಾಸ ಮಾಡತಕ್ಕ ಕೃಷಿ ಕಾರ್ಮಿಕನಿಗೆ ಮಾತ್ರ ಇದು ಸೌಲಭ್ಯ ದೊರೆಯಬೇಕು ಎಂದು.

ಇನ್ನು ಸೆಕ್ಷನ್ ೪೮(೨)ರಲ್ಲಿರುವ ಕಲಂನ್ನು ಉಪಯೋಗಿಸಿ ಕೃಷಿ ಕಾರ್ಮಿಕರನ್ನು ಅಲ್ಲಿಂದ ಸ್ಥಳಾಂತರಿಸುವುದಕ್ಕೆ ಪ್ರಯತ್ನ ಪಡುತ್ತಾರೆ ಆದರೆ ಈ ರೀತಿ ಕೃಷಿ ಕಾರ್ಮಿಕರನ್ನು ಸ್ಥಳಾಂತರಿಸುವಾಗ ಅದಕ್ಕೆ ಸರಿಯಾದ ಕಾರಣ ಕೊಟ್ಟು ಸ್ಥಳಾಂತರಿಸಬೇಕೇ ಹೊರತು, ಸುಮ್ಮನೆ ಸ್ಥಳಾಂತರಿಸುವುದಕ್ಕೆ ಅವಕಾಶ ಕೊಡಬಾರದೆಂದು ಹೇಳುತ್ತೇನೆ. ಇನ್ನು ಕೆಲವರು ಏನು ಮಾಡುತ್ತಾರೆಂದರೆ ಇದು ಕಾನೂನಾಗಿ ಜಾರಿಗೆ ಬರುವುದನ್ನೇ ತಡೆಯಬೇಕೆಂದು ಹೇಳಿ ಪ್ರಯತ್ನ ಪಡುತ್ತಾರೆ ಮತ್ತು ಅಲ್ಲಿ ಮನೆ

ಗಳನ್ನು ಕಟ್ಟಿಸಿದ್ದರೆ ಅಲ್ಲಿ ಮನೆಯನ್ನು ಕೆಡವಿಸಿ ಮನೆಯೇ ಇರಲಿಲ್ಲವೆಂದು ಹೇಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆದುದರಿಂದ ಮಾನ್ಯ ಕಂದಾಯ ಮಂತ್ರಿಗಳವರಲ್ಲಿ ನನ್ನ ಕಳಕಳಿಯ ಮನವಿ ಏನೆಂದರೆ ತಾವು ಈಗಿನಿಂದಲೇ ಆಯಾಯ ತಾಲ್ಲೂಕ್ ಡೆಪ್ಯುಟಿ ಕಮೀಷನರ್‌ರವರಿಗೆ ಆದೇಶ ಕೊಟ್ಟು ಕೃಷಿ ಕಾರ್ಮಿಕರು ಎಲ್ಲೆಲ್ಲಿ ಆ ರೀತಿ ಜಮೀನುಗಳಲ್ಲಿ ವಾಸವಾಗಿದ್ದಾರೆ ಅಂಥವರಿಗೆ ತೊಂದರೆಯಾಗದ ಹಾಗೇ ಅವರೆಲ್ಲರಿಗೂ ರಕ್ಷಣೆ ಕೊಡುವ ವ್ಯವಸ್ಥೆ ಮಾಡಿಸಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಸೆಕ್ಷನ್ ೪೮ (ಎ) ಬಗ್ಗೆ ಹೇಳುವುದಾದರೆ, ಹೈಕೋರ್ಟಿನಲ್ಲಿ ಈ ಬಗ್ಗೆ ಇರತಕ್ಕಂಥ ಕೆಲವು ಕೇಸ್‌ಗಳನ್ನು ಕ್ಷುಲ್ಲಕ ಕಾರಣಗಳಿಗೋಸ್ಕರ ರದ್ದು ಮಾಡಿದ್ದಾರೆ. ಗೇಣಿದಾರರು ತಾವು ಅರ್ಜಿಯನ್ನು ಸಲ್ಲಿಸುವಾಗ ಚಕ್ಕುಬಂದಿಯನ್ನು ಸರಿಯಾಗಿ ಹಾಕಿಲ್ಲ ಎನ್ನುವ ಕಾರಣದಿಂದ ಆ ಮೊಕದ್ದಮೆಗಳು ರದ್ದು ಆಗಿವೆ ಎನ್ನುವುದು ನಮ್ಮ ಗಮನಕ್ಕೆ ಬಂದಿವೆ. ಮತ್ತೆ ಕೆಲವು ಸರ್ವೆ ನಂಬರ್‌ಗಳು ತಪ್ಪಾಗಿದ್ದಕ್ಕೆ ಮೊಕದ್ದಮೆಗಳು ರದ್ದು ಆದಂಥ ಸನ್ನಿವೇಶಗಳುಂಟು. ಇನ್ನು ಕೆಲವು ಶ್ರೀಮಂತರು ಫಾರಂ ನಂಬರ್ (೭)ನ್ನು ಗೇಣಿದಾರರು ಫಿಲ್ ಅಪ್ ಮಾಡಲು ಅವಕಾಶ ಕೊಡದೇ ಅವರನ್ನು ಬಂಧನದಲ್ಲಿಡಿಸಿದ್ದಾರೆ. ಇದರಿಂದ ಅವರು ಅರ್ಜಿ ಹಾಕುವುದನ್ನು ತಪ್ಪಿಸಿದ್ದಾರೆ. ಆ ರೀತಿ ತಪ್ಪಿಸಿದಂಥವರಿಗೆ, ಅದರಿಂದ ತೊಂದರೆ ಯಾದವರಿಗೆ ತಾವು ಟೈಮ್ ಎಕ್ಸ್‌ಟೆಂಡ್ ಮಾಡಿರುವುದರಿಂದ ಅವರಿಗೆ ಅನುಕೂಲ ಮಾಡಿಕೊಟ್ಟ ಹಾಗೆ ಆಗುತ್ತದೆ. ಆ ದೃಷ್ಟಿಯಿಂದ ನಮ್ಮ ಕರ್ನಾಟಕ ರಾಜ್ಯ ಸರ್ಕಾರದವರು ಕೃಷಿ ಕಾರ್ಮಿಕರಿಗೆ ಅಂದರೆ ಗೇಣಿದಾರರಿಗೆ ಏನು ಅನ್ಯಾಯವಾಗಿದೆ ಅದನ್ನು ಸರಿಪಡಿಸುವುದಕ್ಕೆ ಟ್ರಿಬ್ಯೂನಲ್‌ಗಳಿಗೆ ಅರ್ಜಿಯನ್ನು ಹಾಕಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಲು ತಿದ್ದುಪಡಿ ತಂದಿರತಕ್ಕದ್ದು ನಿಜವಾಗಿಯೂ ಬಹಳ ಒಳ್ಳೆಯ ಕಾರ್ಯವೆಂದು ಹೇಳಬಯಸುತ್ತೇನೆ.

ಇನ್ನು ಸೆಕ್ಷನ್ ೪೮(ಸಿ) ಬಗ್ಗೆ ಹೇಳುವುದಾದರೆ, ಟ್ರಿಬ್ಯೂನಲ್‌ಗಳು ನಡೆಯದೇ ಇರತಕ್ಕಂಥ ಸನ್ನಿವೇಶದಲ್ಲಿ ಚೇರ್ಮನ್‌ರವರೇ ತೀರ್ಮಾನವನ್ನು ತೆಗೆದುಕೊಳ್ಳಬಹುದು ಎನ್ನತಕ್ಕ ಕ್ಲಾಜ್‌ನ್ನು ಅಳವಡಿಸಿದ್ದೀರಿ. ಇದು ಒಂದು ರೀತಿಯಲ್ಲಿ ತಪ್ಪಾಗುತ್ತದೆ. ಕೆಲವು ವೇಳೆ ಟ್ರಿಬ್ಯೂನಲ್ ಚೇರ್ಮನ್‌ರವರು ಯಾವುದೋ ಒಂದು ಆಸೆ ಆಮಿಷಕ್ಕೆ ಒಳಗಾಗಿ ತಮ್ಮ ಈ ಒಂದು ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಗೇಣಿದಾರರಿಗೆ ಸಾಕಷ್ಟು ಅನ್ಯಾಯ ಮಾಡುವ ಸಂಭವವುಂಟು. ಮತ್ತು ಭೂ ಮಾಲೀಕರ ಜೊತೆಯಲ್ಲಿ ಸಂಚು ಹೂಡುವುದಕ್ಕೂ ಅವಕಾಶವುಂಟು ಆದುದರಿಂದ ಈ ಕ್ಲಾಜ್‌ನ್ನು ತೆಗೆದುಹಾಕಿ ಬೇಕಾದರೆ ಎಮರ್ಜೆನ್ಸಿ ಮೀಟಿಂಗನ್ನು ಕರೆದು ಅರ್ಜೆಂಟ್ ಇರುವ ಕೇಸ್‌ಗಳನ್ನು ಇತ್ಯರ್ಥ ಮಾಡಬಹುದೆಂದು ಸಲಹೆ ಮಾಡಬಯಸುತ್ತೇನೆ.

ಇನ್ನು ಸೆಕ್ಷನ್ ೪೮, ಕ್ಲಾಸ್ (೧೧) ನ್ನು ತೆಗೆದಿದ್ದೇವೆಂದು ಮಾನ್ಯ ರೆವಿನ್ಯೂ ಸಚಿವರು ಹೇಳಿದ್ದಾರೆ. ಸಂತೋಷ. ಇನ್ನು ಸೆಕ್ಷನ್ ೧೨೨ (ಎ)ಗೆ ಏನು ತಿದ್ದುಪಡಿಯನ್ನು ತಂದಿದ್ದೀರಿ ಇದು ನಿಜವಾಗಿಯೂ ಕ್ರಾಂತಿಕಾರಕ ತಿದ್ದುಪಡಿ ಎಂದು ಹೇಳಬಯಸುತ್ತೇನೆ. ಅದಕ್ಕಾಗಿ ಮಾನ್ಯ ಕಂದಾಯ ಸಚಿವರನ್ನು ಅಭಿನಂದಿಸಬಯಸುತ್ತೇನೆ. ತಾವು ತಂದಿರತಕ್ಕ ಈ ಕ್ರಾಂತಿಕಾರಕ ತಿದ್ದುಪಡಿಗಳಿಗೆ ಮಾನ್ಯ ಸದಸ್ಯರೆಲ್ಲರೂ ಒಕ್ಕೊರಲಿನಿಂದ ಬೆಂಬಲ ಕೊಡಬೇಕೆಂದು ಮತ್ತೊಮ್ಮೆ ನಾನು ಹೇಳಬಯಸುತ್ತೇನೆ.

ಇನ್ನು ಸೆಕ್ಷನ್ ೫೧ರಲ್ಲಿ ವಿಧವೆಯರಿಗೆ ಅಂಗವಿಕಲರಿಗೆ ಅಪ್ರಾಪ್ತ ಮಕ್ಕಳಿಗೆ ಒಂದೇ ಗಂಟಿನಲ್ಲಿ ಪರಿಹಾರ ಕೊಡಬೇಕು ಎನ್ನತಕ್ಕ ಒಂದು ಅಂಶವನ್ನು ಸೇರಿಸತಕ್ಕದ್ದು ಸಹ ಸ್ವಾಗತಾರ್ಹವಾದ ಸಂಗತಿ. ಆದರೆ ಅದರ ಜೊತೆಗೆ ಸಣ್ಣ ಹಿಡುವಳಿದಾರರು ಯಾರಿದ್ದಾರೆ ಅವರಿಗೂ ಸಹ ಇದರ ಒಂದು ಲಾಭ ಬರಬೇಕು ಎನ್ನುವ ಭಾವನೆಯನ್ನು ನಾನು ಇಲ್ಲಿ ವ್ಯಕ್ತಪಡಿಸಬಯಸುತ್ತೇನೆ ಈಗ ಸ್ಮಾಲ್ ಹೋಲ್ಡರ್ಸ್ ಎಂದರೆ ಬರೀ ೫ ಎಕರೆ ೬ ಬಿಲ್ಡಿಂಗ್ ಇಟ್ಟುಕೊಂಡರೆ ಸ್ಮಾಲ್ ಹೋಲ್ಡರ್ಸ್ ಆಗುವುದಿಲ್ಲ. ಯಾರಿಗೆ ವರ್ಷಕ್ಕೆ ೪,೫೦೦ ರೂಪಾಯಿಗಳಿಗಿಂತ ಮೀರದ ವರಮಾನವಿರುತ್ತದೆಯೋ ಅಂಥಾ ಸಣ್ಣ ಹಿಡುವಳಿದಾರರಿಗೂ ಸಹ ಏಕ ಕಾಲದಲ್ಲಿ ವಿಧವೆಯರಿಗೆ ಲಂಪ್‌ಸಂ ಹಣವನ್ನು ಕೊಟ್ಟ ಹಾಗೆ ಇವರಿಗೂ ಸಹ ಕೊಡಬೇಕೆಂದು ಹೇಳಬಯಸುತ್ತೇನೆ. ಈ ಭೂ ಕ್ರಾಂತಿ ಮಸೂದೆಯಿಂದ ನಮ್ಮ ರಾಜ್ಯಕ್ಕೆ ಮಾತ್ರವಲ್ಲದೆ ನಮ್ಮ ರಾಷ್ಟ್ರಕ್ಕೇ ಒಂದು ಮಾದರಿ ಮಸೂದೆಯಾಗಿ ಇದರಿಂದ ನಮ್ಮ ರಾಷ್ಟ್ರದ ಆಹಾರದ ಸಂಪತ್ತು ಸಹ ಹೆಚ್ಚಲಿಕ್ಕೆ ಒಳ್ಳೆಯದಾಗುತ್ತದೆಂದು ಹೇಳಿ, ತಾವು ಏನು ಕ್ರಾಂತಿಕಾರಕ ತಿದ್ದುಪಡಿ ಮಸೂದೆಗಳನ್ನು ತಂದಿದ್ದೀರಿ ಅವುಗಳನ್ನು ಮತ್ತೊಮ್ಮೆ ಸ್ವಾಗತಿಸುತ್ತಾ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಪಿ. ರಾಮ್‌ದೇವ್ (ಮಲ್ಲೇಶ್ವರಂ).—ಸನ್ಮಾನ್ಯ ಅಧ್ಯಕ್ಷಣೀಯುವರೇ, ಭೂ ಮಸೂದೆಗೆ ಏನೊಂದು ತಿದ್ದುಪಡಿಯನ್ನು ತಂದಿದ್ದಾರೆ ಆ ತಿದ್ದುಪಡಿ ಕೇವಲ ತೇಪೇದಾರಿ ತಿದ್ದುಪಡಿ ಮಸೂದೆ ಎಂದು ಹೇಳಬೇಕಾಗಿದೆ. ನಿಮ್ಮ ಸ್ಟೇಟ್‌ಮೆಂಟ್ ಆಫ್ ಆಬ್ಜಕ್ಷನ್ ಅಂಡ್ ರೀಜನ್ಸ್‌ನಲ್ಲಿ...

"The amendments proposed in the Bill are mainly to give effect to the suggestions made by the Government of India..." ಎನ್ನತಕ್ಕ ಮಾತನ್ನು ಹೇಳುತ್ತಾ, ಅದಕ್ಕೆ ಕಾರಣ ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದವರು ಇದನ್ನು ಇನ್ನೂ ತೀವ್ರತರದಲ್ಲಿ ತಿದ್ದುಪಡಿಯನ್ನು ತರಬೇಕೆಂದು ಹೇಳಿದ್ದರೆಂದು ನನಗನ್ನಿಸುತ್ತದೆ. ಅವರೇನು ತಿದ್ದುಪಡಿ ತರಬೇಕೆಂದು ಹೇಳಿದ್ದಾರೆಂಬುದನ್ನು ಹೇಳದೇ ಕೇವಲ ಚುನಾವಣೆಯ ದೃಷ್ಟಿಯಿಂದ ಇಷ್ಟು ಮಾತ್ರ ಇವತ್ತು ತಿದ್ದುಪಡಿ ತಂದಿದ್ದೀರಿ. ಇನ್ನು ತೀವ್ರತರವಾದ ತಿದ್ದುಪಡಿಗಳನ್ನು ಮಾನ್ಯ ಮಂತ್ರಿಗಳವರು ತರಬೇಕಾಗಿತ್ತು ಎಂದು ನನಗನ್ನಿಸುತ್ತದೆ. ಈ ಮಸೂದೆಗೆ ಒಂದು ಸಮಗ್ರವಾದ ಒಂದು ತಿದ್ದುಪಡಿಯನ್ನೇ ತಂದಿದ್ದರೆ ಚೆನ್ನಾಗಿತ್ತು ಎಂದು ನನಗನ್ನಿಸುತ್ತದೆ. ಈ ರೀತಿ ಪದೇ ಪದೇ ತರುವುದರ ಬದಲು ಒಂದೇ ಸಾರಿ ತಂದಿದ್ದರೆ ಚೆನ್ನಾಗಿತ್ತು. ಆದರೆ ಈ ರೀತಿಯಾದಂಥ ತಿದ್ದುಪಡಿಗಳನ್ನು ತರುತ್ತಿರುವುದರಿಂದ ಇದು ಒಂದು ರಾಜಕೀಯ ಸ್ಟಂಟ್ ಆಗುತ್ತದೆ. ಇದರಿಂದ ಯಾರಿಗೆ ನಿಜವಾಗಿಯೂ ಅನುಕೂಲವಾಗಬೇಕಾಗಿತ್ತೋ ಅಂಥವರಿಗೆ ಅನುಕೂಲವಾಗುವುದಿಲ್ಲವೆಂದು ನನಗೆ ಖಚಿತವಾಗಿದೆ. ಈ ತಿದ್ದುಪಡಿಯಲ್ಲಿ ಇರತಕ್ಕಂಥ ವಿಚಾರಗಳನ್ನು ಓದುತ್ತಾ ಇದ್ದರೆ ನನಗೆ ಏನು ಅನ್ನಿಸುತ್ತದೆ ಎಂದರೆ, ಈ ಬಗ್ಗೆ ಒಂದು ಉದಾಹರಣೆ ಹೇಳಬೇಕಾದರೆ ಇದರಲ್ಲಿ ಮಾಜಿ ಯೋಧರಿಗೆ ಸಂಬಂಧಪಟ್ಟ ಹಾಗೆ ಪಾಕಿಸ್ತಾನ ಮತ್ತು ಇಂಡಿಯಾಕ್ಕೆ ಯುದ್ಧ ಆದಾಗ, ಚೀನಾ ದೇಶದ ಮೇಲೆ ನಮ್ಮ ಯೋಧರು ಯುದ್ಧ ಮಾಡಿದಾಗ ನಮ್ಮ ದೇಶದ ರಾಜಕಾರಣಿಗಳು ಬಹಳ ಉನ್ನತವಾದ ರೀತಿಯಲ್ಲಿ ಅವರಿಗೆ ಅನೇಕ ಭರವಸೆಗಳನ್ನು ನೀಡಿದ್ದಾರೆ. ಅವರಿಗೆ ಪ್ರಿಯವಾದ ಅನೇಕ ಮಾತುಗಳನ್ನು ಹೇಳಿದ್ದಾರೆ. ಯುದ್ಧ ಕಾಲದಲ್ಲಿ ಅವರಿಗೆ ಮಿತಿಮೀರಿದ ಭರವಸೆಗಳನ್ನು ಕೊಟ್ಟಿರತಕ್ಕಂಥಾದ್ದನ್ನು ನಾವು ಪತ್ರಿಕೆಯಲ್ಲಿ ಓದಿದ್ದೇವೆ. ಆದರೆ ಈ ತಿದ್ದುಪಡಿಯನ್ನು ನೋಡಿದಾಗ ಅವರಿಗೆ ಆಗ ಕೊಟ್ಟಂಥ ಭರವಸೆಗಳನ್ನು ಈಡೇರಿಸತಕ್ಕಂಥ ರೀತಿಯಲ್ಲಿ ಈ ತಿದ್ದುಪಡಿಯನ್ನು ಮಾಡಿಲ್ಲ ಎಂದು ನಾನು ದುಃಖದಿಂದ ಹೇಳಬೇಕಾಗಿದೆ. ಈ ಎಕ್ಸ್ ಸರ್ವೀಸ್‌ಮೆನ್ ಏನಿದ್ದಾರೆ ಅವರು ಅನೇಕ ಸಂಘಸಂಸ್ಥೆಗಳನ್ನು ಮಾಡಿಕೊಂಡು ಅವರಿಗೆ ಆಗಿರತಕ್ಕಂಥ ಅನ್ಯಾಯಗಳ ಬಗ್ಗೆ ತಮ್ಮ ಮನವಿಗಳನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಮಾಜಿ ಯೋಧರು ಇಡೀ ದೇಶಕ್ಕೆ ಮಾಡಿರತಕ್ಕಂಥ ಸೇವೆಯನ್ನು ಇಡೀ ದೇಶವೇ ಕೊಂಡಾಡುತ್ತಾ ಇರುವಾಗ ಮಾನ್ಯಮಂತ್ರಿಯವರು ಅವರಿಗೆ ಸಾಕಷ್ಟು ರಿಯಾಯಿತಿಗಳನ್ನು ಕೊಡಬೇಕಾಗಿತ್ತು. ಅದು ನಮ್ಮ ಮಾನ್ಯ ಮಂತ್ರಿಯವರ ಕರ್ತವ್ಯವೂ ಆಗಿತ್ತು. ಆದರೆ ಅವರು ಆ ಕರ್ತವ್ಯವನ್ನು ಸಂಪೂರ್ಣವಾಗಿ ಮಾಡಿಲ್ಲ. ಅವರಿಗೆ ಅಲ್ಪಸ್ವಲ್ಪ ರಿಯಾಯಿತಿಗಳನ್ನು ಕೊಟ್ಟಿದ್ದಾರೆ ಅವರು ಕೇಳಿದಷ್ಟು ಸೌಕರ್ಯವನ್ನು ಕೊಡತಕ್ಕಂಥಾದ್ದರ ಬಗ್ಗೆ ಅವರು ಈ ತಿದ್ದುಪಡಿಯಲ್ಲಿ ವ್ಯವಸ್ಥೆ ಮಾಡಿದ್ದರೆ ಆಗ ನಾನು ಅವರನ್ನು ಮೆಚ್ಚುತ್ತಾ ಇದ್ದೆ. ಕೇಂದ್ರ ಸರ್ಕಾರದವರು ಅವರಿಗಾಗಿ ಏನೇನು ಮಾಡಿದ್ದಾರೆ ಎಂಬುದರ ಬಗ್ಗೆ ಇಲ್ಲಿ ಹೇಳಿದ್ದಾರೆಯೇ ಎಂದರೆ ಅದನ್ನೂ ಹೇಳಿಲ್ಲ. ಇದರಲ್ಲಿ ಅವರಿಗೆ ಎಲ್ಲಾ ಅನುಕೂಲಗಳನ್ನು ಮಾಡಿಕೊಟ್ಟಿದ್ದರೆ ಒಳ್ಳೆಯದಾಗುತ್ತಿತ್ತು. ಇನ್ನು ಈ ಕೃಷಿ ಕಾರ್ಮಿಕರಿಗೆ ಈ ಭೂಸುಧಾರಣಾ ಕಾನೂನು ರೀತ್ಯ ಗೃಹದ ಒಡೆತನ ಕೊಡತಕ್ಕಂಥ ಮಾತನ್ನು ಇಲ್ಲಿ ಹೇಳಿದ್ದಾರೆ. ಇದು ಬಹಳ ಸಂತೋಷದ ವಿಷಯ. ಕೃಷಿಕಾರ್ಮಿಕರ ಬಗ್ಗೆ ಸರ್ಕಾರಕ್ಕೆ ಇಷ್ಟೊಂದು ಪ್ರೀತಿ ವಿಶ್ವಾಸ, ಒಲವು ಇರುವಾಗ ಇವತ್ತು ಅವರಿಗೆ ನ್ಯಾಯಸಮ್ಮತವಾದ ವರಮಾನ ಸಿಕ್ಕುತ್ತಾ ಇಲ್ಲ. ಅವರಿಗೆ ಸರಿಯಾದ ಸಂಬಳಸಾರಿಗೆಗಳು ಸಿಕ್ಕುತ್ತಾ ಇಲ್ಲ. ಅವರಿಗೆ ಸರಿಯಾದ ವರಮಾನ ಸಿಕ್ಕುವಂತೆ ಏತಕ್ಕೆ ತಿದ್ದುಪಡಿಯನ್ನು ತರಬಾರದು ಎಂದು ಕೇಳುವುದಕ್ಕೆ ಬಯಸುತ್ತೇನೆ. ಈ ಕೃಷಿ ಕಾರ್ಮಿಕರಿಗೆ ಸಮಾನವಾದ ವೇತನವನ್ನು ಕೊಡಬೇಕು ಎಂದು ಸರ್ಕಾರದವರು ಹೇಳುವುದನ್ನು ನಾವೆಲ್ಲರೂ ಸ್ವಾಗತ ಮಾಡಿದ್ದೇವೆ. ಆದರೆ ಅವರಿಗೆ ಸಮಾನವಾದ ವೇತನವನ್ನು ಕೊಡದೇ ಪಕ್ಷಪಾತ ಆಗುತ್ತಿದೆ. ಅಧಿಕಾರಿಗಳು ಸಹ ನಾವು ಸಮಾನವಾದ ವೇತನವನ್ನು ಕೊಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಇದೆಲ್ಲವನ್ನೂ ಅವರು ಬರೀ ಮಾತಿನಲ್ಲಿ ಮಾತನಾಡುತ್ತಿದ್ದಾರೆ. ಅದನ್ನು ಕಾರ್ಯತಹ ಮಾಡುತ್ತಾ ಇಲ್ಲ. ಈಗ ಕೊಡುತ್ತಿರುವ ವೇತನವನ್ನೇ ಅವರು ವರಪ್ರಸಾದ ಎಂದು ಹೇಳುತ್ತಿದ್ದಾರೆ. ನಮ್ಮ ಅಸೆಂಬ್ಲಿಯಲ್ಲಿ ಹೆಚ್ಚು ಕಡಿಮೆ ಜಮೀನು ಇರತಕ್ಕಂಥ ಸದಸ್ಯರುಗಳೇ ಜಾಸ್ತಿ ಸಂಖ್ಯೆಯಲ್ಲಿ ಇದ್ದಾರೆ. ಈ ಕೃಷಿ ಕಾರ್ಮಿಕರ ವೇತನದ ಬಗ್ಗೆ ಅವರೆಲ್ಲಾ ನಾನಾ ಸಲಹೆಗಳನ್ನು ಕೊಟ್ಟಿದ್ದಾರೆ. ಅದರಂತೆ ಸರ್ಕಾರದವರು ಕೃಷಿ ಕಾರ್ಮಿಕರಿಗೆ ವೇತನವನ್ನು ಫಿಕ್ಸ್ ಮಾಡಿದ್ದಾರೆ, ಗಂಡಸರಿಗೆ ಇಷ್ಟು,

ಹೆಂಗಸರಿಗೆ ಇಷ್ಟು, ಮಕ್ಕಳಿಗೆ ಇಷ್ಟು ಎಂದು ವೇತನವನ್ನು ಫಿಕ್ಸ್ ಮಾಡಿದ್ದಾರೆ. ಆದರೆ ವೇತನ ಫಿಕ್ಸ್ ಮಾಡಿರುವಂತೆ ಅವರಿಗೆ ವೇತನ ಕೊಡುತ್ತಾ ಇಲ್ಲ. ಅವರಿಗೆ ವೇತನ ಫಿಕ್ಸ್ ಮಾಡಿರುವುದನ್ನು ಇಲ್ಲಿ ಆ ಬಗ್ಗೆ ಒಂದು ವಿಚಾರ ಹಾಕಿದ್ದರೆ ಚೆನ್ನಾಗಿ ಇತ್ತು ಎಂದು ಹೇಳುತ್ತೇನೆ. ಅದನು ಇಲ್ಲಿ ಹಾಕದೇ ಕೃಷಿ ಕಾರ್ಮಿಕರಿಗೆ ವಾಸದ ಗೃಹದ ಒಡೆತನ ಮಾತ್ರ ಕೊಟ್ಟಿರುವುದರಿಂದ ಇನ್ನು ಮುಂದೆ ಅದರ ಬಗ್ಗೆ ಗಲಾಟೆ ಆಗುತ್ತದೆ. ಅವರಿಗೆ ಗೃಹದ ಒಡೆತನ ಕೊಟ್ಟರೆ ಸಾಲದು, ಅವರ ಜೀವನಕ್ಕೆ ರಕ್ಷಣೆ ಕೊಡ ತಕ್ಕಂಥ, ಅವರಿಗೆ ಸರ್ವಸಮ್ಮತವಾದ ವೇತನವನ್ನು ಕೊಟ್ಟು ಅವರಿಗೆ ರಕ್ಷಣೆ ಕೊಡತಕ್ಕಂಥ ಕಾರ್ಯ ವನ್ನು ನಮ್ಮ ಸರ್ಕಾರದವರು ಮಾಡಬೇಕು. ಈ ಕೃಷಿ ಕಾರ್ಮಿಕರ ಕೆಲಸ ಏನಿದೆ ಅದರಲ್ಲಿ ಅವರು ಬೆಳಿಗ್ಗೆಯಿಂದ ಸಂಜೆಯುವರೆಗೆ ದುಡಿಯುತ್ತಾ ಇರಬೇಕಾಗಿದೆ. ಈ ಬಗ್ಗೆ ಅವರಿಗೆ ಒಂದು ನಿಗದಿಯಾದ ವೇಳೆ ಗೊತ್ತು ಮಾಡಿಲ್ಲ. ಆದರೆ ಇತರ ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕಂಥ ಕಾರ್ಮಿಕರಿಗೆ ಇಷ್ಟೇ ವೇಳೆ ಕೆಲಸಮಾಡಬೇಕೆಂಬುದಾಗಿ ಒಂದು ಫಿಕ್ಸ್ಡ್ ಹವರ್ಸ್ ಇದೆ. ಅದು ಅವರಿಗೆ ಇಲ್ಲ. ಇದಕ್ಕಾಗಿ ಹೋರಾಟ ಮಾಡಲು ಅವರಲ್ಲಿ ಸಂಘಟನೆ ಇಲ್ಲ. ಕೆಲವು ಕಡೆಗಳಲ್ಲಿ ಅವರಿಗೆ ಕೊಡತಕ್ಕಂಥ ವೇತನವನ್ನು ಹಣದ ರೂಪದಲ್ಲಿ ಕೊಡುತ್ತಾರೆ, ಇನ್ನು ಕೆಲವು ಕಡೆಗಳಲ್ಲಿ ಆಹಾರ ಪದಾರ್ಥಗಳ ಮುಖಾಂತರ ಕೊಡುತ್ತಾರೆ. ಈ ಕೃಷಿ ಕಾರ್ಮಿಕರಿಗೆ ಸಂಬಂಧಪಟ್ಟಹಾಗೆ ಒಂದು ನಿರ್ಧಿಷ್ಟ ವೇತನವನ್ನು ಮತ್ತು ನಿಗಧಿಯಾದ ಕೆಲಸದ ವೇಳೆಯನ್ನು ಇದರಲ್ಲಿ ಸೂಚಿಸಿದ್ದರೆ ಒಳ್ಳೆಯದು ಆಗುತ್ತಿತ್ತು ಎಂದೆನಿಸುತ್ತದೆ. ನಮ್ಮ ರಾಜ್ಯದಲ್ಲಿ ಇವತ್ತಿನದಿವಸ ಹೆಚ್ಚಿನ ಸಂಖ್ಯೆಯಲ್ಲಿ ಈ ಕೃಷಿ ಕಾರ್ಮಿಕರು ಇದ್ದಾರೆ. ಈ ತಿದ್ದುಪಡಿಯನ್ನು ಇಲ್ಲಿ ತರುವಾಗ ಮಾನ್ಯ ಬಸವಲಿಂಗಪ್ಪನವರು ನಾನು ಹೇಳಿರತಕ್ಕಂಥ ವಿಚಾರಗಳ ಬಗ್ಗೆ ಯೋಚನೆ ಮಾಡಿದ್ದಾರೆ ಚೆನ್ನಾಗಿ ಇರುತ್ತಿತ್ತು. ಆದರೂ ಮಾನ್ಯ ಮಂತ್ರಿಯವರು ಕೇಂದ್ರಸರ್ಕಾರ ದವರು ಈ ಬಗ್ಗೆ ಏನೇನು ಸಲಹೆಗಳನ್ನು ಮಾಡಿದ್ದಾರೆ ಎಂಬುದನ್ನು ಇಲ್ಲಿ ತರಬೇಕು ಎಂದು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಭೂಮಾಲೀಕರಿಗೆ ಪರಿಹಾರಧನ ಕೊಡುವ ವಿಷಯದಲ್ಲಿ ಒಂದು ಮಾತನ್ನು ಇಲ್ಲಿ ಹೇಳಿದ್ದಾರೆ ಏನೆಂದರೆ ಯಾವ ಭೂಮಾಲೀಕರ ವಾರ್ಷಿಕ ವರಮಾನ ೨೪೦೦ ರೂಪಾಯಿಗಳಿಗೆ ಹೆಚ್ಚಿಗೆ ಇರುವುದಿಲ್ಲವೋ ಅಂತಹವರಿಗೆ, ೨೪೦೦ ರೂಪಾಯಿಗಳ ಒಳಗೆ ವಾರ್ಷಿಕ ವರಮಾನ ಇರತಕ್ಕಂಥವರಿಗೆ ಲಂಪ್‌ಸಮ್ ಪರಿಹಾರಧನ ನೀಡಬೇಕೆಂದು ಇದರಲ್ಲಿ ಹೇಳಿದ್ದಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಬಹಳ ದೊಡ್ಡ ಲ್ಯಾಂಡ್‌ಲಾರ್ಡ್‌ಗಳು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲ. ಸ್ವಲ್ಪ ಹೆಚ್ಚಿಗೆ ಇರತಕ್ಕಂಥ ಅಬ್‌ಸೆಂಟಿ ಲ್ಯಾಂಡ್ ಲಾರ್ಡ್‌ಗಳಲ್ಲಿ ಹೆಚ್ಚಾಗಿ ಬಡವರೇ ಇದ್ದಾರೆ. ಅವರ ಜಮೀನನ್ನು ಕಿತ್ತುಕೊಂಡು ಬೇರೆಯವರಿಗೆ ಕೊಟ್ಟಿದ್ದಾರೆ. ಇದು ಸರಿಯಲ್ಲ. ಇದು ಹೇಗೇ ಇದ್ದರೂ ವಾರ್ಷಿಕ ವರಮಾನ ೨೪೦೦ ರೂಪಾಯಿಗಳು ಇದ್ದವರಿಗೆ ಮತ್ತು ಅದರ ಕೆಳಗೆ ವಾರ್ಷಿಕ ವರಮಾನ ಇದ್ದವರಿಗೆ ಮಾತ್ರ ಸಂಪೂರ್ಣವಾಗಿ ಪರಿಹಾರ ಧನವನ್ನು ಕೊಡುತ್ತೇವೆ, ಬೇರೆಯವರಿಗೆ ಬೇರೆ ರೀತಿಯಲ್ಲಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಹೀಗೆ ಹೇಳಿರತಕ್ಕಂಥದ್ದು ಸರಿಯಲ್ಲ, ಇದರಲ್ಲಿ ಯಾರೇ ಆಗಲಿ ಅವರ ವಾರ್ಷಿಕ ವರಮಾನ ೪೮೦೦ ರೂಪಾಯಿಗಳು ಇದ್ದರೆ ಮತ್ತು ಅದಕ್ಕಿಂತ ಕಡಿಮೆ ವಾರ್ಷಿಕ ವರಮಾನ ಇದ್ದರೆ ಅಂತಹವರಿಗೆ ಸಂಪೂರ್ಣವಾಗಿ ಪರಿಹಾರಧನವನ್ನು ಕೊಡತಕ್ಕಂಥ ರೀತಿಯಲ್ಲಿ ಈ ತಿದ್ದುಪಡಿಯನ್ನು ತರಬೇಕು ಎಂದು ನಾನು ಈ ಸಂದರ್ಭದಲ್ಲಿ ಸಲಹೆ ಕೊಡುತ್ತೇನೆ. ವಿಧವೆಯರಿಗೆ ಸಂಪೂರ್ಣವಾಗಿ ಪರಿಹಾರಧನವನ್ನು ಕೊಡಬೇಕೆಂದು ಇದರಲ್ಲಿ ಹೇಳಿದ್ದಾರೆ. ಇದು ಸಂತೋಷದ ಸಂಗತಿ. ಆದರೆ ಮಾಜಿ ಯೋಧರಿಗಾಗಿ ಸರ್ಕಾರದವರು ಏನು ಮಾಡಿದ್ದಾರೆ ಎಂದು ನಾನು ಕೇಳುತ್ತೇನೆ. ಅವರಲ್ಲಿ ಅನೇಕರು ಯುದ್ಧರಂಗದಿಂದ ಬಂದು ಇವತ್ತಿನದಿವಸ ಅವರ ಜಮೀನನ್ನು ಬೇರೆಯವರ ಕೈಯಲ್ಲಿ ಕೊಟ್ಟು ನಗರದಲ್ಲಿ ಅನೇಕ ಕಡೆಗಳಲ್ಲಿ ಹೊಟ್ಟೆಗಿಲ್ಲದೇ ಇದ್ದಾರೆ. ಅವರು ಸಹ ಪರಿಹಾರಧನದ ಬಗ್ಗೆ ರೆಪ್ರೆಸೆಂಟೇಷನ್ ಕೊಟ್ಟಿದ್ದಾರೆ, ಈ ಬಗ್ಗೆ ತಾವು ತೀವ್ರ ಪರಿಶೀಲನೆ ಮಾಡಿ, ವಿಧವೆಯರಿಗೆ ಸಂಪೂರ್ಣವಾಗಿ ಪರಿಹಾರಧನವನ್ನು ಕೊಡ ಬೇಕೆಂದು ತೀರ್ಮಾನ ಮಾಡಿರುವ ರೀತಿಯಲ್ಲಿ ಈ ಮಾಜಿ ಯೋಧರಿಗೂ ಸಂಪೂರ್ಣವಾದ ಪರಿಹಾರ ಧನವನ್ನು ಕೊಡಲು ಒಂದು ತಿದ್ದುಪಡಿಯನ್ನು ತರಬೇಕು ಎಂದು ತಮ್ಮಲ್ಲಿ ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆಮೇಲೆ ಈ ರಿಲೀಜಿಯಸ್ ಮತ್ತು ಚಾರಿಟಬಲ್ ಇನ್‌ಸ್ಟಿಟ್ಯೂಷನ್ ನವರಿಗೆ ಬಡ್ಡಿದರವನ್ನು ವಾರ್ಷಿಕವಾಗಿ ಕೊಡಬೇಕು ಎಂದು ಇದರಲ್ಲಿ ಹೇಳಿದ್ದಾರೆ. ನಾನು ಹೇಳುವುದೇ ನೆಂದರೆ ಅವರಿಗೆ ವಾರ್ಷಿಕವಾಗಿ ಬಡ್ಡಿದರವನ್ನು ಕೊಡುವುದರ ಬದಲು ತಿಂಗಳಿಗೊಮ್ಮೆ ಕೊಟ್ಟರೆ ಒಳ್ಳೆಯದು. ಈ ತರಹ ಅನೇಕ ಬ್ಯಾಂಕ್‌ಗಳಲ್ಲಿಯೂ ಸಹ ಇದೆ. ಇದು ಸಾರ್ವಜನಿಕವಾಗಿ ಧರ್ಮದ ಕೆಲಸಗಳಿಗೆ ವಿನಿಯೋಗವಾಗತಕ್ಕಂಥ ಹಣವಾದ್ದರಿಂದ ವರ್ಷಕ್ಕೊಮ್ಮೆ ಬಡ್ಡಿ ಹಣ ಕೊಡುವುದರ ಬದಲು

ತಿಂಗಳಿಗೊಮ್ಮೆ ಕೊಡುವುದು ಒಳ್ಳೆಯದೆಂದು ನಾನು ಸಲಹೆ ಮಾಡಬಯಸುತ್ತೇನೆ. ಆಮೇಲೆ ಇದರಲ್ಲಿ ಭೂಮಾಲೀಕರಿಗೆ ಪರಿಹಾರ ನೀಡುವಾಗ ನಾನ್–ನೆಗೋಷಿಯೆಬಲ್ ಬಾಂಡ್ಸ್ ರೂಪದಲ್ಲಿ ಅವರಿಗೆ ಪರಿಹಾರ ಕೊಡಬೇಕು ಎಂದು ಹೇಳಿದ್ದಾರೆ. ಈ ಬಗ್ಗೆ ಮಾನ್ಯ ಕಕ್ಕಿಲಾಯರವರು ಮಾತನಾಡತಕ್ಕಂಥ ಕಾಲದಲ್ಲಿ ನಾನ್–ನೆಗೋಷಿಯೆಬಲ್ ಬಾಂಡ್ಸ್ ಎಂದು ಇರುವುದನ್ನು ತೆಗೆದುಬಿಟ್ಟು ನೆಗೋಷಿಯೇಬಲ್ ಬಾಂಡ್ಸ್ ರೂಪದಲ್ಲಿ ಅವರಿಗೆ ಕಾಂಪೆನ್ಸೇಷನ್ ಕೊಟ್ಟು, ಇದನ್ನು ರೀಟೈನ್ ಮಾಡಬಹುದು ಎಂದು ಹೇಳಿದ್ದಾರೆ. ಅದರಂತೆ ಈ 'ನಾನ್' ಎನ್ನತಕ್ಕಂಥ ಶಬ್ದವನ್ನು ತೆಗೆದುಹಾಕಿ ನೆಗೋಷಿಯೆಬಲ್ ಬಾಂಡ್ಸ್ ಎಂದು ರೀಟೈನ್ ಮಾಡಿದರೆ ಇದರಿಂದ ಅವರಿಗೆ ಬಹಳ ಉಪಕಾರ ಆಗುತ್ತದೆ. ಏಕೆಂದರೆ ನೆಗೋಷಿಯೇಬಲ್‌ಗೂ ನಾನ್‌ನೆಗೋಷಿಯೇಬಲ್‌ಗೂ ಬಹಳ ವ್ಯತ್ಯಾಸ ಇದೆ. ಹಣಕಾಸಿನ ವ್ಯವಹಾರದಲ್ಲಿ ಈ ನೆಗೋಷಿಯೆಬಲ್ ಬಾಂಡ್ಸ್ ಮೂಲಕ ಹಣವನ್ನು ಸಾಲವಾಗಿ ಪಡೆಯಬಹುದು. ಆದರೆ ಈ ನಾನ್ ನೆಗೋಷಿಯೆಬಲ್ ಬಾಂಡ್ಸ್ ಮೂಲಕ ಆ ರೀತಿ ಮಾಡುವುದಕ್ಕಾಗುವುದಿಲ್ಲ ಎಂದು ಕಾಣಿಸುತ್ತದೆ. ಆದ್ದರಿಂದ ಇದರಲ್ಲಿ ನೆಗೋಷಿಯೆಬಲ್ ಬಾಂಡ್ಸ್ ಎನ್ನತಕ್ಕಂಥಾದ್ದನ್ನು ರೀಟೈನ್ ಮಾಡಬೇಕು ಎಂದು ಸಲಹೆ ಮಾಡುತ್ತೇನೆ. ಅಲ್ಲದೇ ಇದರಲ್ಲಿ ಜಮೀನಿನ ವರ್ಗೀಕರಣ ಮಾಡಿರುವುದರಿಂದ ಈ ತಿದ್ದುಪಡಿಯನ್ನು ಜಂಟಿ ಸಲಹಾ ಸಮಿತಿಗೆ ಕಳಿಸಿದರೆ ಒಳ್ಳೆಯದು ಎಂದು ಅನ್ನಿಸುತ್ತದೆ. ಇದನ್ನು ಜಂಟಿ ಸಲಹಾ ಸಮಿತಿಗೆ ಕಳಿಸಬೇಕು ಎಂದು ಮತ್ತೊಮ್ಮೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ರಾಜುಗೌಡ (ಹನ್ನೂರು).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈ ಕರ್ನಾಟಕ ರಾಜ್ಯದ ಭೂ ಸುಧಾರಣಾ ಮಸೂದೆಗೆ ತಂದಿರತಕ್ಕಂಥ ತಿದ್ದುಪಡಿಗಳು ಬಹಳ ಪ್ರಗತಿದಾಯಕವಾಗಿದೆ ಹಾಗೂ ಸಮಯೋಚಿತವಾಗಿದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಅಲ್ಲದೇ ಈ ಒಂದು ತಿದ್ದುಪಡಿಗಳಿಂದ ಈ ಸಮಾಜದಲ್ಲಿನ ಬಡವ ಬಲ್ಲಿದರ ಅಂತರವನ್ನು ಕಡಿಮೆ ಮಾಡುವುದರಲ್ಲಿ ಇದೊಂದು ದೊಡ್ಡ ಮೈಲಿಗಲ್ಲಾಗಿದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ೧೯೭೪ನೇ ಇಸವಿಯಲ್ಲಿ ಈ ಒಂದು ಭೂ ಸುಧಾರಣಾ ಮಸೂದೆಯನ್ನು ಜಾರಿಗೆ ಕೊಟ್ಟು, ಅದನ್ನು ಕಾರ್ಯಗತ ಮಾಡುವಾಗ ಏನೇನು ಅಡ್ಡಿ ಅತಂಕಗಳು ಬಂದು ಒದಗಿದವೋ, ಏನೇನು ಅಡೆತಡೆಗಳು ಬಂದು ಒದಗಿದವೋ ಅದನ್ನು ನಿವಾರಣೆ ಮಾಡತಕ್ಕಂಥ ಉದ್ದೇಶದಿಂದ ಮತ್ತು ಗೇಣೀದಾರರಿಗೆಪೂರ್ಣವಾಗಿ ರಕ್ಷಣೆ ಕೊಡುವುದಕ್ಕೆ ಮತ್ತು ಅವರ ಅಸ್ತಿತ್ವಕ್ಕೆ ಯಾವ ರೀತಿಯಲ್ಲೂ ಧಕ್ಕೆ ಬರಬಾರದು ಎಂಬ ಸದುದ್ದೇಶದಿಂದ ಈ ತಿದ್ದುಪಡಿಗಳನ್ನು ನಮ್ಮ ಸರ್ಕಾರದವರು ತಂದಿದ್ದಾರೆ. ಬಹುಶಃ ನಮ್ಮ ಸರ್ಕಾರದವರು ಈ ತಿದ್ದುಪಡಿಗಳನ್ನು ತರದೆ ಇದ್ದಿದ್ದರೆ ಈ ರಾಜ್ಯದಲ್ಲಿರುವ ಗೇಣೀದಾರರು ಅನೇಕ ರೀತಿಯಲ್ಲಿ ವಂಚಿತರಾಗುತ್ತಿದ್ದರು. ನಾನು ಭೂ ನ್ಯಾಯಮಂಡಲಿಯಲ್ಲಿ ಕೆಲವು ವರ್ಷಗಳ ಕಾಲ ಸದಸ್ಯನಾಗಿ ಇದ್ದುದರಿಂದ ಕೆಲವು ಕಡೆಗಳಲ್ಲಿ ಗೇಣಿದಾರರರು ಯಾವ ರೀತಿಯಿಂದ ವಂಚಿತರಾಗಿದ್ದಾರೆ ಎಂಬುದನ್ನು ಈಗ ನಾನು ಈ ಮಾನ್ಯ ಸಭೆಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಬಡ ಗೇಣಿದಾರರು ಭೂ ನ್ಯಾಯ ಮಂಡಲಿಗೆ ಅವನು ಗೇಣಿಗೆ ಪಡೆದಂತಹ ಭೂಮಿಯ ಮಾಹಿತಿಯನ್ನು ಕೊಡಬೇಕಾದರೆ ಆ ಗ್ರಾಮದ ವಿಲೇಜ್ ಅಕೌಂಟೆಂಟ್ ಅಥವಾ ಆ ಗ್ರಾಮದಲ್ಲಿರತಕ್ಕಂಥ ಪತ್ರ ಬರೆಯುವವರ ಆಶ್ರಯ ಪಡೆಯದೇ ಗತ್ಯಂತರವಿಲ್ಲ. ಅಂತಹ ಒಂದು ಸಂದರ್ಭವನ್ನು ಭೂ ಮಾಲೀಕರು ದುರುಪಯೋಗ ಮಾಡಿಕೊಂಡು ಈ ಮುಖಾಂತರ ಬೇರೆ ಸರ್ವೆ ನಂಬರ್‌ನ್ನು ನಮೂದು ಮಾಡಿ, ಅಥವಾ ಸುಳ್ಳು ಸರ್ವೇ ನಂಬರ್ ಕೊಟ್ಟಿರುತ್ತಾರೆ. ಇಂತಹ ಮೊಕದ್ದಮೆಗಳು ಭೂ ನ್ಯಾಯ ಮಂಡಲಿಯ ಮುಂದೆ ಬಂದಾಗ ಇದು ಸುಳ್ಳು ಎಂಬುದಾಗಿ ತೀರ್ಮಾನವಾಗಿರುವಂತಹವು ಅನೇಕ ನಿದರ್ಶನಗಳು ಇವೆ. ಇದೂ ಅಲ್ಲದೆ ಆ ಗೇಣಿದಾರ ಭೂ ನ್ಯಾಯ ಮಂಡಲಿಯ ಮುಂದೆ ತನ್ನ ಅರ್ಜಿಯನ್ನು ಹಾಕಿದ್ದಾಗ ಅದನ್ನು ವಿಚಾರಣೆ ಮಾಡುವುದಕ್ಕೆ ದಿನಾಂಕವನ್ನು ಗೊತ್ತುಪಡಿಸಿದಾಗ ಅದನ್ನು ಆ ಗೇಣಿದಾರನಿಗೆ ತಿಳಿಯಪಡಿಸುವುದಕ್ಕ ಭೂ ನ್ಯಾಯ ಮಂಡಲಿಯವರು ಒಂದು ಸಮನ್ಸ್‌ನನ್ನು ತನ್ನ ಪ್ರೊಸೆಸ್ ಸರ್ವರ್ ಮುಖಾಂತರ ಜಾರಿ ಮಾಡುವುದು ಪದ್ಧತಿ. ಇದರಲ್ಲೂ ಭೂಮಾಲೀಕರು ತಮ್ಮ ಪ್ರಭಾವವನ್ನು ಬೀರಿದ್ದಾರೆ. ಆ ಸಮನ್ಸ್‌ಅನ್ನು ಸರ್ವ್ ಮಾಡುವುದಕ್ಕೆ ಪ್ರೊಸೆಸ್ ಸರ್ವರ್ ಹೋದಾಗ ಆ ಗೇಣಿದಾರ ಈ ಗ್ರಾಮದಲ್ಲಿಲ್ಲ ಎಂಬುದಾಗಿ ಸುಳ್ಳು ಹೇಳಿ, ಕೊನೆಗೆ ಯಾರದೋ ಮನೆಯ ಮುಂದೆ ಆ ಸಮನ್‌ನ್ನು ಅಂಟಿಸಿದರೂ ಕೂಡ ಆತನು ಭೂ ನ್ಯಾಯ ಮಂಡಲಿಯ ಮುಂದೆ ಬಂದು ತನ್ನ ಅಹವಾಲನ್ನು ಹೇಳುವುದಕ್ಕೆ ಅವಕಾಶವಿಲ್ಲದಿರುವುದರಿಂದ ಗೇಣಿದಾರರ ವಿರುದ್ಧವಾಗಿ ತೀರ್ಮಾನವಾಗಿರುವಂತಹ, ನಿದರ್ಶನಗಳು ಅನೇಕವಿವೆ. ಇದೂ ಅಲ್ಲದೆ ಗೇಣಿದಾರ ಅರ್ಜಿಯನ್ನು ಭೂ

ನ್ಯಾಯ ಮಂಡಲಿಗೆ ಕೊಟ್ಟಿದ್ದಾನೆಂದು ತಿಳಿದಾಗ ತನಗೆ ಬೇಕಾದವರೊಬ್ಬರ ಅರ್ಜಿಯನ್ನು ಹಾಕಿಸಿ, ಆ ಅರ್ಜಿ ಮೊದಲು ವಿಚಾರಣೆಗೆ ಬರುವಂತೆ ಏರ್ಪಾಡು ಮಾಡಿ ಅದನ್ನು ತನಗೆ ಬೇಕಾದವರ ಹೆಸರಿಗೆ ಆ ಭೂಮಿಯನ್ನು ಡಿಕ್ಲೆರೇಷನ್ ಮಾಡಿಸಿಕೊಂಡಿರುವ ಸಂದರ್ಭ ಕೂಡ ಬೇಕಾದಷ್ಟು ಇವೆ. ನಾನೂ ಕೂಡ ಭೂ ನ್ಯಾಯ ಮಂಡಲಿಯ ಸದಸ್ಯನಾಗಿದುದರಿಂದ ಇಂತಹ ಅನೇಕ ನಿದರ್ಶನಗಳು ನನ್ನ ಗಮನಕ್ಕೆ ಬಂದಿವೆ. ಸರ್ಕಾರ ಈ ಹಿಂದೆ ಗೇಣಿದಾರರು ಭೂ ನ್ಯಾಯ ಮಂಡಲಿಗೆ ಅರ್ಜಿಗಳನ್ನು ಹಾಕಿಕೊಳ್ಳುವುದಕ್ಕೆ ೩೧-೧೨-೧೯೭೭ ರವರೆಗೆಂದು ನಿಗದಿ ಮಾಡಿತು. ಇದು ಆದನಂತರ ಕೆಲವರು ಅರ್ಜಿಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಸಾಕಷ್ಟು ಕಾರಣಗಳು ನಮೂದಾಗಿಲ್ಲದ ಪ್ರಯುಕ್ತ ಅದು ಶ್ರೇಷ್ಠ ನ್ಯಾಯಾಲಯದಲ್ಲಿ ತಿರಸ್ಕೃತವಾಗುವ ಸಂದರ್ಭ ಇದೆ. ಇಂತಹ ಪರಿಸ್ಥಿತಿ ಇರುವುದರಿಂದ ಇದರಿಂದ ಬಡ ಗೇಣಿದಾರರಿಗೆ ಅನುಕೂಲವಾಗುವುದಿಲ್ಲ. ಇದನ್ನು ಮನಗಂಡ ಮಾನ್ಯ ಬಸವಲಿಂಗಪ್ಪನವರು ಈ ತಿದ್ದುಪಡಿಗಳನ್ನು ಜಾರಿಗೆ ಬಂದ ನಂತರದಿಂದ ಇನ್ನೂ ೬ ತಿಂಗಳು ಕಾಲಾವಕಾಶವನ್ನು ಕೊಟ್ಟಿರುವುದು ಬಹಳ ಒಳ್ಳೆಯ ನೀತಿಯುಕ್ತವಾದಂತಾದ್ದು ಎಂಬುದಾಗಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದನ್ನು ಮಾಡದಿದ್ದರೆ ರಾಜ್ಯದಲ್ಲಿ ಈ ಕಾನೂನು ಜಾರಿಗೆ ಬಂದಿದ್ದರೂ ಕೂಡ ಸಮಗ್ರವಾಗಿ ಎಲ್ಲ ಗೇಣಿದಾರರಿಗೂ ನ್ಯಾಯವನ್ನು ದೊರಕಿಸಿಕೊಡುವುದಕ್ಕೆ ಆಗುತ್ತಿರಲಿಲ್ಲ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ವೇಳೆ ಕಾಲಾವಕಾಶವನ್ನು ಜಾಸ್ತಿ ಮಾಡಿದಾಗ ಅನೇಕ ಸುಳ್ಳು ಅರ್ಜಿಗಳನ್ನು ಸೇರಿಸಲಿಕ್ಕೆ ಅನುಕೂಲವಾಗುತ್ತದೆಂದು ಅನೇಕ ಮಾನ್ಯ ಸದಸ್ಯರು ತಮ್ಮ ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಈ ಬಗ್ಗೆ ನಾನು ಒಂದು ಉದಾಹರಣೆಯನ್ನು ಕೊಡುವುದಾದರೆ, ನಮ್ಮ ರಾಜ್ಯದಲ್ಲಿ ಅನೇಕ ಪೋಲೀಸ್ ಠಾಣೆಗಳು ಇವೆ. ಮತ್ತು ಬೇಕಾದಷ್ಟು ಪೋಲೀಸ್ ಸಿಬ್ಬಂದಿ ಸಹ ಇದೆ. ಇಷ್ಟೆಲ್ಲಾ ಇದ್ದರೂ ಕೂಡ ಅಲ್ಲಲ್ಲಿ ಅಕೃತ್ಯಗಳು, ಅನ್ಯಾಯ, ಸುಲಿಗೆ, ದರೋಡೆ, ಹಿಂಸೆ ಈ ರೀತಿಯ ನಾನಾ ಪ್ರಕರಣಗಳು ನಡೆಯುತ್ತಿವೆ. ಇದರಿಂದ ಪೋಲೀಸ್ ಠಾಣೆ ಹಾಗೂ ಪೋಲೀಸ್ ಸಿಬ್ಬಂದಿಯನ್ನೇ ತೆಗೆದುಹಾಕಿಬಿಡಿ ಎಂಬುದಾಗಿ ಯಾರಾದರೂ ಹೇಳುವುದಕ್ಕೆ ಸಾಧ್ಯವಾಗುತ್ತದೆಯೇ ಇಲ್ಲ. ಮತ್ತೆ ಹೊಲದಲ್ಲಿ ಕಳೆ ಕೀಳುವಾಗ ಕಳೆಯ ಜೊತೆಯಲ್ಲಿ ಒಂದೆರಡು ಒಳ್ಳೆಯ ಪೈರುಗಳು ಬರುತ್ತವೆ. ಅಂದಮೇಲೆ ಒಳ್ಳೆಯ ಪೈರು ಹೊರಟು ಹೋಗುತ್ತವೆಂದು ಕಳೆಯನ್ನು ಕೀಳಲೆ ಇರುವುದಕ್ಕಾಗುತ್ತದೆಯೇ ? ಇಲ್ಲ. ಆದ್ದರಿಂದ ಕಾಲಾವಕಾಶವನ್ನು ವಿಸ್ತರಿಸಿರುವುದರಿಂದ ಸುಳ್ಳು ಅರ್ಜಿಗಳು ಸೃಷ್ಟಿಯಾಗುತ್ತವೆಂಬುದನ್ನು ತಿಳಿದುಕೊಳ್ಳದೆ ಇದರಿಂದ ಬಡ ಗೇಣಿದಾರರಿಗೆ ಅನುಕೂಲವಾಗುತ್ತದೆಂಬುದನ್ನು ತಿಳಿಸುತ್ತಿದ್ದೇನೆ. ಮತ್ತೆ ಭೂ ನ್ಯಾಯ ಮಂಡಲಿಯ ಮುಂದೆ ಇರತಕ್ಕಂಥ ಕೇಸುಗಳನ್ನು ಜಿಲ್ಲಾಧಿಕಾರಿಗಳು ಅವಶ್ಯಕ ಎಂಬುದಾಗಿ ಕಂಡುಬಂದರೆ ಅವುಗಳನ್ನು ಬೇರೆ ಕಡೆಗೆ ವರ್ಗ ಮಾಡಬಹುದೆಂಬುದನ್ನೂ ತಂದಿದ್ದಾರೆ. ಇದು ಬಹುಶಃ......

ಶ್ರೀ ಬಿ. ಬಸವಲಿಂಗಪ್ಪ.—ಅದನ್ನು ಬಿಟ್ಟಿದ್ದೇವೆ.

ಶ್ರೀ ಜಿ. ರಾಜುಗೌಡ.—ಅದನ್ನು ಬಿಟ್ಟಿರುವುದು ಒಳ್ಳೆಯದೆಂದು ನಾನು ಹೇಳುತ್ತೇನೆ. ಮೂಲಭೂತ ಶಾಸನದಲ್ಲಿ ಏನು ಹೆಚ್ಚುವರಿ ಭೂಮಿ ಇದ್ದರೆ ಆಯಾಯ ಭೂ ನ್ಯಾಯ ಮಂಡಲಿಯವರು ಹಂಚತಕ್ಕಂಥ ವ್ಯವಸ್ಥೆಯನ್ನು ಮಾಡಿದರು. ಆದರೆ ಈಗ ಅದಕ್ಕೆ ತಿದ್ದುಪಡಿಯನ್ನು ತಂದು ಅದನ್ನು ಜಿಲ್ಲಾಧಿಕಾರಿಯವರಿಗೆ ಕೊಟ್ಟಿದ್ದಾರೆಂಬುದನ್ನು ನಾವು ಕೇಳಿದ್ದೇವೆ. ಮೊದಲಿನಂತೆ ಇದ್ದರೆ ಆಯಾಯ ಸ್ಥಳದಲ್ಲಿರತಕ್ಕಂಥ ಭೂ ನ್ಯಾಯ ಮಂಡಲಿಯ ಸದಸ್ಯರಿಗೆ ಯಾವ ಭೂಮಿ ಹೆಚ್ಚುವರಿ ಇದೆ, ಎಂಬುದು ಗೊತ್ತಿರುತ್ತದೆ. ಅವರಿಗಿಂತ ಹೆಚ್ಚಿಗೆ ಮಾಹಿತಿ ಜಿಲ್ಲಾಧಿಕಾರಿಯವರಿಗೆ ಗೊತ್ತಿರುವುದಿಲ್ಲ. ಆದ್ದರಿಂದ ಆ ಅಧಿಕಾರವನ್ನು ಭೂ ನ್ಯಾಯ ಮಂಡಲಿಗೆ ವಹಿಸಿಕೊಡಬೇಕೆಂದು ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತೇನೆ.

ಇನ್ನು ಅಸಿಸ್ಟೆಂಟ್ ಕಮೀಶನರ್‌ರವರು ಭೂ ನ್ಯಾಯ ಮಂಡಲಿಯ ಅಧ್ಯಕ್ಷರಾಗಿದ್ದುಕೊಂಡು ಯಾವ ರೀತಿ ತಮ್ಮ ತೀರ್ಪನ್ನು ಬರೆಯುತ್ತಾರೆಂಬುದನ್ನು ಒಂದೆರಡು ಉದಾಹರಣೆಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅಸಿಸ್ಟೆಂಟ್ ಕಮೀಷನರ್‌ರವರು ಬರೆಯತಕ್ಕಂಥ ತೀರ್ಮಾನ ಯಾವ ರೀತಿ ಇದೆ ಎಂದರೆ ಭೂ ಮಾಲೀಕರು ಹಾಜರು. ಗೇಣಿದಾರ ಹಾಜರಿ, ಇಂತಹ ಸರ್ವೆ ನಂಬರ್ ಜಮೀನನ್ನು ಇಂತಹ ಗೇಣಿದಾರರಿಗೆ ಕೊಡಲಾಗಿದೆ ಎಂಬುದಾಗಿ ಎರಡೇ ವಾಕ್ಯಗಳಲ್ಲಿ ತಮ್ಮ ತೀರ್ಮಾನವನ್ನು ಬರೆಯುತ್ತಾರೆ. ಇಂತಹ ತೀರ್ಪನ್ನು ಬರೆಯುವುದರಿಂದ ನಾಳೆ ಇದು ಹೈಕೋರ್ಟಿನಲ್ಲಿ ಬಿದ್ದುಹೋಗಬಹುದು ಎನ್ನುವ ಸಂಶಯ ನನಗಿದೆ. ಆದ್ದರಿಂದ ಎಲ್ಲಾ ಅಸಿಸ್ಟೆಂಟ್ ಕಮೀಷನರ್‌ರವರಿಗೂ ತಾವು ಸುತ್ತೋಲೆ ಮೂಲಕ ತಿಳಿಸಿ, ಏನೆಂದರೆ ಒಂದು ಸಭೆಯನ್ನು ಏರ್ಪಾಡು ಮಾಡಿ ವಿವರಗಳನು

ಅವರಿಗೆ ತಿಳಿಸಬೇಕು ಎಂದು. ಯಾವ ಗ್ರಾಮ ? ಸರ್ವೆ ನಂಬರ್ ಯಾವುದು ? ಮತ್ತೆ ಭೂಮಾಲೀಕರ ಸ್ಟೇಟ್‌ಮೆಂಟ್ ಮತ್ತು ಗೇಣಿದಾರರ ಸ್ಟೇಟ್‌ಮೆಂಟ್ ಇವುಗಳ ಮಧ್ಯೆ ನಡೆಯುವ ವಾದ ವಿವಾದ ಹಾಗೂ ಇದಕ್ಕೆ ಸಂಬಂಧಪಟ್ಟ ದಾಖಲೆ ಪತ್ರಗಳು ಎಲ್ಲವನ್ನೂ ರೆಕಾರ್ಡ್ ಮಾಡಿ ನಂತರ ಆಲೋಚನೆ ಮಾಡಿ ಸಮಗ್ರವಾದ ತೀರ್ಪನ್ನು ಕೊಡುವಂತೆ ಎಲ್ಲ ಅಸಿಸ್ಟೆಂಟ್ ಕಮೀಷನರ್‌ರವರಿಗೆ ತಿಳಿಸಬೇಕೆಂದು ನಾನು ಮತ್ತೊಮ್ಮೆ ಹೇಳುವುದಕ್ಕೆ ಬಯಸುತ್ತೇನೆ.

ಇದೂ ಅಲ್ಲದೆ ಅನೇಕ ನಮ್ಮ ಸ್ನೇಹಿತರು ಮಾತನಾಡುತ್ತಾ ನಮ್ಮ ರಾಜ್ಯದಲ್ಲಿ ಏನೊಂದು ಸಣ್ಣ ಪುಟ್ಟ ಭೂ ಮಾಲೀಕರಿದ್ದಾರೆ, ಮತ್ತು ಗೇಣಿದಾರರು ಏನಿದ್ದಾರೆ ಇವರೆಲ್ಲರ ಭೂಮಿಯನ್ನು ತಾನೇ ತೆಗೆದುಕೊಂಡು ಸರ್ಕಾರವೇ ಒಂದು ದೊಡ್ಡ ಭೂ ಮಾಲೀಕರಾಗಿ ಇರುವುದಕ್ಕೆ ಈ ತಿದ್ದುಪಡಿಯನ್ನು ತಂದಿದ್ದಾರೆಂಬುದಾಗಿ ಹೇಳಿದರು. ಸರ್ಕಾರದ ಉದ್ದೇಶವೇನೆಂಬುದನ್ನು ಯಾರೂ ಅರ್ಥಮಾಡಿಕೊಂಡ ಹಾಗೆ ಕಾಣಿಸುವುದಿಲ್ಲ, ೧-೩-೧೯೭೪ರಲ್ಲಿ ಯಾರು ಭೂಮಿಯನ್ನು ಗೇಣಿ ಮಾಡುತ್ತಿದ್ದರೋ ಅಂತಹ ಭೂಮಿಯನ್ನು ಪರಭಾರೆ ಮಾಡಬಾರದು, ಬೇರೆಯವರಿಗೆ ಕ್ರಯ ವಿಕ್ರಯ ಮಾಡಬಾರದು. ಆ ರೀತಿ ಪರಭಾರೆ ಮಾಡಿದ್ದರೆ ಅಂತಹ ಗೇಣಿದಾರರ ಭೂಮಿ ನಮ್ಮ ಸರ್ಕಾರಕ್ಕೆ ಸೇರಿದ್ದು ಎಂಬ ಒಂದು ನಿರ್ಬಂಧವನ್ನು ಹಾಕಿದ್ದಾರೆ. ಒಂದು ವೇಳೆ ಗೇಣಿದಾರರು ಅರ್ಜಿ ಕೊಟ್ಟಮೇಲೆ ಭೂಮಾಲೀಕರು ಆ ಭೂಮಿಯನ್ನು ಮತ್ತಾರಿಗೋ ಕೊಡುವುದನ್ನು ತಪ್ಪಿಸಬೇಕು, ಮತ್ತು ಪರಭಾರೆ ಮಾಡುವುದನ್ನು ತಪ್ಪಿಸಬೇಕೆಂಬ ಸದುದ್ದೇಶದಿಂದ ಈ ಒಂದು ಕಾನೂನನ್ನು ತಂದಿದ್ದಾರೆ. ತಾನೆ ದೊಡ್ಡ ಭೂಮಾಲೀಕರಾಗಿ ಮೆರೆಯಬೇಕೆಂಬುದು ಸರ್ಕಾರಕ್ಕಿಲ್ಲ. ಆ ಭಾವನೆಯೂ ಇಲ್ಲ. ಬಡ ಗೇಣಿದಾರರಿಗೆ ರಕ್ಷಣೆಯನ್ನು ಕೊಡಬೇಕೆಂಬ ಪೂರ್ಣ ಉದ್ದೇಶದಿಂದ ಈ ಒಂದು ಕಾಯಿದೆಯನ್ನು ತಂದಿದ್ದಾರೆ. ಎಂಬುದನ್ನು ನಮ್ಮ ವಿರೋಧಪಕ್ಷದ ಸದಸ್ಯರು ತಿಳಿದುಕೊಳ್ಳಬೇಕಾಗಿದೆ. ಈ ಒಂದು ಭೂಸುಧಾರಣೆ ಕಾಯಿದೆಯ ಬಗ್ಗೆ ಏನೆಂದು ತಿದ್ದುಪಡಿಯನ್ನು ತಂದಿದ್ದಾರೆ, ಇದು ನಿಜಕ್ಕೂ ಸ್ತುತ್ಯಾರ್ಹವಾದುದು. ಹಾಗೂ ಪರಿಪೂರ್ಣವಾದುದು, ಆದ್ದರಿಂದ ಆದಷ್ಟು ಬೇಗನೆ ಜಾರಿಗೆ ಕೊಡಬೇಕು. ಮತ್ತೊಮ್ಮೆ ಗೇಣಿದಾರರಿಗೆ ಅನ್ಯಾಯ ಹಾಗೂ ಅಕೃತ್ಯಗಳು ಗ್ರಾಮಾಂತರ ಪ್ರದೇಶದಲ್ಲಿ ಆಗದಂತೆ ಅದನ್ನು ಕೂಡ ತಡೆಗಟ್ಟಬೇಕು. ಅನೇಕ ಜನರಿಗೆ ಹಿಂಸೆ ಕೊಡುತ್ತಿದ್ದಾರೆ. ಮತ್ತೆ ಗೇಣಿದಾರರನ್ನು ಉಚ್ಚಾಟನೆ ಮಾಡಿದ್ದಾರೆ, ಅವರು ಮತ್ತೊಮ್ಮೆ ಅರ್ಜಿಯನ್ನು ಭೂ ನ್ಯಾಯ ಮಂಡಲಿಯ ಮುಂದೆ ಅರ್ಜಿಯನ್ನು ಹಾಕಿಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಿದ್ದಾರೆ, ಆದ್ದರಿಂದ ಈ ತಿದ್ದುಪಡಿಯನ್ನು ಸರ್ವ ಸದಸ್ಯರೂ ಕೂಡ ಬೆಂಬಲಿಸುತ್ತಾರೆಂದು ನಾನು ತಿಳಿದಿದ್ದೇನೆ. ನನಗೆ ಇಷ್ಟು ಸಮಯ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಅಧ್ಯಕ್ಷಣಿಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೆ. ಮಾನ್ಯ ಕಂದಾಯ ಸಚಿವರು ಈ ಮನೆಯ ಮುಂದೆ ತಂದಿರತಕ್ಕಂಥ ತಿದ್ದುಪಡಿಗಳಲ್ಲಿ ಎಲ್ಲವನ್ನೂ ವಿರೋಧಮಾಡುವುದಕ್ಕಾಗುವುದಿಲ್ಲ. ಕೆಲವನ್ನು ಸ್ವಾಗತ ಮಾಡಲೇಬೇಕಾಗುತ್ತದೆ. ಏಕೆಂದರೆ ಪ್ರಗತಿಪರವಾದ ಕೆಲವು ತಿದ್ದುಪಡಿಗಳನ್ನು ತಂದಿದ್ದಾರೆ. ಆದರೆ ನಾನು ಮೊಟ್ಟಮೊದಲನೆಯದಾಗಿ ಮಾನ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಈ ತಿದ್ದುಪಡಿಯನ್ನು ಬಹಳ ಆತುರಾತುರವಾಗಿ ಏನು ತಂದಿದ್ದಾರೆ. ಅದನ್ನು ನಾನು ಪ್ರಶ್ನೆ ಮಾಡುವುದಿಲ್ಲ ಆದರೆ ಇದನ್ನು ಆದಷ್ಟು ಬೇಗನೆ ಜಾರಿಗೆ ಕೊಡಬೇಕು ಎಂದು ಹೇಳುತ್ತೇನೆ. ಏಕೆಂದರೆ ಬಹುಶಃ ಪ್ರಗತಿಪರವಾದ ಯೋಜನೆಯನ್ನು ಮಾಡತಕ್ಕಂಥಾದ್ದರಲ್ಲಿ ಯಾರೂ ಕೂಡ ಅದಕ್ಕೆ ಅಡ್ಡಿ ಬರಲಾರರು. ಆದಷ್ಟು ಬೇಗ ಈ ಭೂಸುಧಾರಣೆ ಕಾಯಿದೆ ಜಾರಿಗೆ ಬರಬೇಕೆಂಬುದು ಎಲ್ಲರ ಇಚ್ಛೆಯಾಗಿದೆ. ಆದರೆ ಇವತ್ತು ನಮ್ಮ ಮುಂದಿರತಕ್ಕಂಥ ತಿದ್ದುಪಡಿ ಮಸೂದೆ ಏನು ಇದೆ ಅದನ್ನು ಮಾನ್ಯ ಬಸವಲಿಂಗಪ್ಪನವರು ಸೂಕ್ಷ್ಮವಾಗಿ ಪರಿಶೀಲನೆ ಮಾಡುವುದು ಅಗತ್ಯವಿದೆ. ಬಹುಶಃ ಈ ಮನೆಯಲ್ಲಿ ಚರ್ಚೆ ಮಾಡಿ ಅನುಭವ ಮಾಡಿಕೊಳ್ಳುವುದಕ್ಕಿಂತ ಈ ಮನೆಯ ಸದಸ್ಯರನ್ನೊಳಗೊಂಡಂತಹ ಒಂದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಇದನ್ನು ಕಳುಹಿಸುವುದು ಸೂಕ್ತ ಎಂಬುದನ್ನು ನಾನು ತಿಳಿದುಕೊಂಡಿದ್ದೇನೆ. ಇವತ್ತು ನಮ್ಮ ಮುಂದೆ ಸುಮಾರು ೩೮ ತಿದ್ದುಪಡಿ ಮಸೂದೆಗಳನ್ನು ಇಟ್ಟಿದ್ದೀರಿ. ಈ ಹಿಂದೆ ತಮ್ಮ ಪತ್ರಿಕಾ ಹೇಳಿಕೆಯನ್ನೂ ಕೂಡ ನಾನು ನೋಡಿದ್ದೇನೆ. ಈ ಅಧಿವೇಶನದಲ್ಲಿ ಭೂಸುಧಾರಣೆಗೆ ಸಂಬಂಧಪಟ್ಟಂತೆ ೩೦ ತಿದ್ದುಪಡಿ ಮಸೂದೆಗಳನ್ನು ತರುತ್ತೇವೆಂದು ತಾವು ಹೇಳಿಕೆ ಕೊಟ್ಟದ್ದನ್ನು ನಾನು ನೋಡಿದ್ದೇನೆ. ಇನ್ನೂ ೮ ತಿದ್ದುಪಡಿ ಮಸೂದೆಗಳನ್ನು ಜಾಸ್ತಿ ಮಾಡಿ ಒಟ್ಟು ೩೮ ತಿದ್ದುಪಡಿಗಳನ್ನು ಈ ದಿವಸ ತಾವು

ತಂದಿದ್ದೀರಿ. ಈ ೩೮ ತಿದ್ದುಪಡಿಗಳು ಪಾಸಾಗುವುದಕ್ಕೆ ಮೊದಲೇ ಮತ್ತೆ ೭ ತಿದ್ದುಪಡಿಗಳನ್ನು ತಂದಿದ್ದೀರಿ. ಈ ೩೮ ರಲ್ಲಿ ೭ನ್ನು ತಿದ್ದುಪಡಿ ಮಾಡಬೇಕೆಂದು ತಾವೇ ಸೂಚನೆ ಮಾಡಿದ್ದೀರಿ. ಅಂದರೆ ಇದರ ಅರ್ಥ ಏನಾಗುತ್ತದೆಂದರೆ.........

೫-೩೦ ಪಿ. ಎಂ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಪ್ರಜಾಪ್ರಭುತ್ವದ ತತ್ವದಲ್ಲಿ ನಂಬಿಕೆಯಿರುವವನು. ತಾವು ಅದೇ ರೀತಿ ನಂಬಿಕೆ ಇಟ್ಟಿದ್ದೀರಿ. ನಾವು ಯಾವಯಾವ ಹಿನ್ನೆಲೆಯಲ್ಲಿ ಈ ತಿದ್ದುಪಡಿಗಳನ್ನು ತೆಗೆದುಕೊಂಡು ಬಂದಿದ್ದೇವೆ ಅವುಗಳ ಬಗ್ಗೆ ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಆ ಸಲಹೆಗಳು ಸರಿ ಎಂದು ಕಂಡು ಬಂದಾಗ, ಅದಕ್ಕೆ ಸಂಬಂಧಪಟ್ಟಂತೆ ತಿದ್ದುಪಡಿಗಳನ್ನು ತರುವುದರಲ್ಲಿ ತಪ್ಪೇನಿದೆ ? ಮಾನ್ಯ ಸದಸ್ಯರು ಈ ಭೂಸುಧಾರಣಾ ಕಾಯಿದೆಗೆ ಸಂಬಂಧಪಟ್ಟಂತೆ ಒಳ್ಳೆಯ ಉದ್ದೇಶ ಇಟ್ಟುಕೊಂಡು ತಮ್ಮಗಳ ಒಂದು ಅನುಭವದಿಂದ ಸಲಹೆಗಳನ್ನು ಕೊಟ್ಟಾಗ, ಆ ಸಲಹೆಗಳನ್ನು ನಾವು ಮನಸ್ಸಿನಲ್ಲಿಟ್ಟುಕೊಂಡು ಒಂದು ಸಲ ಅಲ್ಲ, ಎರಡು ಸಲ ಅಲ್ಲ, ಮೂರು ಸಲ ತಿದ್ದುಪಡಿ ತಂದರೂ ಸಹ ಅದರಲ್ಲಿ ತಪ್ಪೇನೂ ಆಗುವುದಿಲ್ಲ. ಇದನ್ನು ತಾವು ತಿಳಿದುಕೊಳ್ಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಬಸಪ್ಪನವರು ತಿದ್ದುಪಡಿಗಳನ್ನು ತರಬಾರದೆಂದು ಹೇಳುವುದಿಲ್ಲ. ತಾವು ಒಂದು ಸಲ ತಿದ್ದುಪಡಿಗಳನ್ನು ಸೂಚಿಸಿದ ಮೇಲೆ, ಅವುಗಳು ಪಾಸಾಗುವುದಕ್ಕೆ ಮೊದಲೇ ಬೇರೆ ತಿದ್ದುಪಡಿಗಳನ್ನು ತಂದಿದ್ದೀರಿ. ಆದರಿಂದಲೇ ನಿಮ್ಮ ಅವಸರ ಏನಿದೆ ಎಂಬುದು ಅರ್ಥವಾಗುತ್ತದೆ. ಇಂತಹ ಒಂದು ತಿದ್ದುಪಡಿಗಳ ಸುರಿಮಳೆಯನ್ನೇ ಈ ಸಭೆಯ ಮುಂದೆ ಇಟ್ಟು, ಅವಸರವಸರವಾಗಿ ಈ ಸಭೆಯ ಅಂಗೀಕಾರಕ್ಕಾಗಿ ಕೇಳುತ್ತಿದ್ದೀರಿ. ಇದು ಸರಿಯಲ್ಲ. ಇದನ್ನು ಆಳವಾಗಿ ಯೋಚನೆ ಮಾಡುವುದು ಅವಶ್ಯಕವಿದೆ, ಏಕೆಂದರೆ, ಒಂದು ಸಲ ಕಾನೂನು ಮಾಡಿದ ಮೇಲೆ ಅದು ೧೦ ವರ್ಷಗಳಕಾಲ ಇರಬಹುದು, ಇಲ್ಲವೇ ೧೫ ವರ್ಷಗಳ ಕಾಲ ಇರಬಹುದು; ಆದಕಾರಣ ಆ ಕಾನೂನಿನ ಫಲಿತಾಂಶ ಯಾವ ರೀತಿ ಇರುತ್ತದೆಂಬುದನ್ನು ಪೂರ್ವಭಾವಿಯಾಗಿ ಯೋಚನೆ ಮಾಡಿ, ಆಳವಾಗಿ ಯೋಚನೆ ಮಾಡಿ ನಂತರ ಒಂದು ಕಾನೂನು ಎಂದು ಮಾಡಿದರೆ, ಅದರಿಂದ ಜನರಿಗೂ ಸಹ ಅನುಕೂಲವಾಗುತ್ತದೆ. ಮತ್ತು ಅದರಿಂದ ಸರ್ಕಾರಕ್ಕೂ ಸಾಫಲ್ಯತೆ ಸಿಗುತ್ತದೆ. ಇದನ್ನು ಅವರು ಮನಸ್ಸಿನಲ್ಲಿಟ್ಟುಕೊಂಡು ಹೇಳಿದರೇ ಹೊರತು ಬೇರೆ ಅನ್ಯಥಾ ರೀತಿಯಲ್ಲಿ ಹೇಳಲಿಲ್ಲ. ಈ ದೃಷ್ಟಿಯಿಂದ ಇದನ್ನು ತಾವು ಸೆಲೆಕ್ಟ್ ಕಮಿಟಿಗೆ ಕಳುಹಿಸಿದರೆ, ಅವರು ಅಲ್ಲಿ ಆಳವಾಗಿ ಯೋಚನೆ ಮಾಡಿ ತಮ್ಮ ಅಭಿಪ್ರಾಯಗಳನ್ನು ಕೊಡುತ್ತಾರೆ. ಈ ರೀತಿ ಮಾಡದಿದ್ದರೆ ತಾವು ಇದು ಪಾಸಾಗುವುದಕ್ಕೆ ಮೊದಲೇ ಇನ್ನಷ್ಟು ತಿದ್ದುಪಡಿಗಳನ್ನು ತರಬಹುದೆಂದು ಕಾಣುತ್ತದೆ.

One of the essential features of a piece of legislation is its applicability in the long process, conceivably during a long period of time. But before an amendment is moved and approval of the House is got for it, another amendment is moved. Perhaps, you may come up with another amendment before it takes shape. Therefore, a suggestion is thrown that the matter may be gone into in depth, by a Joint Select Committee and a period within which the Joint Select Committee should submit its report to this House, may be fixed. The house may have an opportunity of going through the report of the Committee and then give approval to it. That is the point made out by hon'ble member Mr. M.C. Basappa. It is in the interests of all concerned, including the people for whom this amendment is brought.

ಶ್ರೀ ಬಿ.ವಿ. ಕಕ್ಕಿಲಾಯ.—೧೯೬೧ರಲ್ಲಿ ಈ ಕಾನೂನಾಯಿತು. ಆದರೆ ೧೯೭೪ರ ಮಾರ್ಚ್ ತಿಂಗಳ ವರೆಗೆ ಇದರ ಪ್ರಸ್ತಾಪವನ್ನೇ ಮಾಡಲಿಲ್ಲ, ಮತ್ತು ಇದು ಜಾರಿಗೂ ಬರಲಿಲ್ಲ. ೧೯೭೪ ರಿಂದ ೧೯೭೮ರ ವರೆಗೆ ಇದನ್ನು ಕಾರ್ಯರೂಪದಲ್ಲಿ ತರುತ್ತಿರುವಾಗ, ನಮ್ಮ ಒಂದು ಅನುಭವದಿಂದ ಇದಕ್ಕೆ ಕೆಲವು

ತಿದ್ದುಪಡಿಗಳನ್ನು ಮಾಡುವುದು ಅವಶ್ಯಕತೆ ಇದೆ ಎಂದು ಕಂಡು ಬಂದಾಗ ತಿದ್ದುಪಡಿಗಳನು ಮಾಡುವುದರಲ್ಲಿ ತಪ್ಪೇನೂ ಇಲ್ಲವೆಂದು ನನಗನಿಸುತ್ತದೆ. ಇವು ಅನುಭವದಿಂದ ತಂದಿರುವ ತಿದ್ದುಪಡಿಗಳು ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಪಿ.ಕೆ. ಕಳ್ಳಿಗುಡ್ಡ.—ನಮ್ಮ ಬಾಗಲಕೋಟೆಯಲ್ಲಿ ೬೦ ಜನ ಗೇಣಿದಾರರು ತಾರೀಖು ಮುಗಿದ ನಂತರ ಡಿಕ್ಲರೇಷನ್ ಕೊಡಲು ಅಲ್ಲಿಯ ಭೂಮಾಲಿಕರೇ ಕಾರಣ. ಇದನ್ನು ಸರಿಪಡಿಸುವ ಕಾರಣದಿಂದ ಮಾನ್ಯ ಮಂತ್ರಿಗಳು ತಿದ್ದುಪಡಿಗಳನ್ನು ತಂದಿದ್ದಾರೆ. ಇವುಗಳನ್ನು ಇನ್ನು ಒಂದು ತಾಸೂ ಸಹ ತಡ ಮಾಡದೆ ಪಾಸ್ ಮಾಡಬೇಕೆಂದು ಕಳಕಳಿಯಿಂದ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಸಿ. ಬಸಪ್ಪ.—ಈ ತಿದ್ದುಪಡಿಗಳನ್ನು ನಾನು ವಿರೋಧ ಮಾಡಲಿಲ್ಲ. ಮತ್ತು ಇದಕ್ಕೆ ತಿದ್ದುಪಡಿಗಳು ಆಗಬಾರದೆಂದೂ ಸಹ ನಾನು ಹೇಳುವುದಿಲ್ಲ. ಈ ಶಾಸನ ಜಾರಿಗೆ ಬಂದಮೇಲೆ ತಾವು ೧೧ನೇ ಬಾರಿಗೆ ತಿದ್ದುಪಡಿಗಳನ್ನು ತರುತ್ತಿದ್ದೀರಿ. ಈ ಬಾರಿ ತಂದಿರುವ ತಿದ್ದುಪಡಿಗಳಲ್ಲಿ ಬಹಳ ವ್ಯತ್ಯಾಸಗಳಿವೆ. ತಾವು ಈ ಸಭೆ ಪ್ರಾರಂಭವಾಗುವುದಕ್ಕೆ ಮೊದಲು ೩೦ ತಿದ್ದುಪಡಿಗಳನ್ನು ತರುವುದಾಗಿ ತಿಳಿಸಿದ್ದೀರಿ. ಆದರೆ ಈಗ ೩೮ ತಿದ್ದುಪಡಿಗಳನ್ನು ತಂದಿದ್ದೀರಿ. ಮತ್ತು ಇವುಗಳ ಅವಶ್ಯಕತೆ ಇತ್ತು ಎಂದು ಸಹ ಈಗ ಹೇಳಿದ್ದೀರಿ. You felt it genuinely and I welcome it. ಆದರೆ ಇವುಗಳನ್ನು ಈ ಸಭೆ ಅನುಮೋದಿಸುವುದಕ್ಕೆ ಮೊದಲೇ ತಾವು ೭ ತಿದ್ದುಪಡಿಗಳನ್ನು ನಮಗೆ ಸರ್ಕ್ಯುಲೇಟ್ ಮಾಡಿಸಿದ್ದೀರಿ. ಈ ೩೮ ತಿದ್ದುಪಡಿಗಳಲ್ಲಿ ಯಾವುದು ಸರಿ, ಯಾವುದು ತಪ್ಪು, ಯಾವುದದ್ನು ಕೈಬಿಡಬೇಕು ಎಂಬುದನ್ನು ನಾವು ಇನ್ನು ಹೇಳಿಯೇ ಇಲ್ಲ. ಈ ಮಧ್ಯೆ ತಾವು ೭ ತಿದ್ದುಪಡಿಗಳನ್ನು ಸೂಚಿಸಿಸಿದ್ದೀರಿ. ಈಗತಾನೇ ನಮ್ಮ ಪಕ್ಷದ ಉಪನಾಯಕರು ಹೇಳಿದರು, ಏನೆಂದರೆ, ಶಾಸನ ಮಾಡುವಾಗ ಅದನ್ನು ಜಾರಿಗೆ ಕೊಡುವುದರಲ್ಲಿ ಏನಾದರೂ ತೊಂದರೆಗಳು ಬರುತ್ತವೆಯೋ ಎಂಬುದನ್ನು ಆಲೋಚನೆ ಮಾಡುವುದಕ್ಕಾಗಿ ಇದನ್ನು ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡುವುದು ಅಗತ್ಯ ಎಂದು ನನ್ನ ವಾದವೂ ಸಹ ಅದೇ ಆಗಿದೆ. ಆ ಕಮಿಟಿಗೆ ಸ್ವಲ್ಪ ಸಮಯ ಕೊಟ್ಟು ಅನಂತರ ಅದನ್ನು ಪಾಸ್ ಮಾಡಲು ಈ ಶಾಸನ ಸಭೆಯನ್ನು ಕರೆಯಬಹುದು. ನಾವು ಮಹತ್ತರವಾದಂಥ ಬದಲಾವಣೆಗಳನ್ನು ಮಾಡುವುದಕ್ಕೆ ಹೊರಟಿರುವಾಗ ಈ ರೀತಿ ಮಾಡುವುದು ಅವಶ್ಯಕವಾಗಿದೆ. ಈಗ ಸೆಕ್ಷನ್ ೩೮ನ್ನು ತಿದ್ದುಪಡಿ ಮಾಡಲಾಗುತ್ತಿದೆ. ಅದರ ಪ್ರಕಾರ ಒಂದು ಫಾರಂನಲ್ಲಿ ವ್ಯವಸಾಯ ಕೂಲಿಗಾರರು ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದರೆ, ಆ ವಾಸ ಮಾಡುವ ಜಾಗದ ಹಕ್ಕನ್ನು ಅವರಿಗೆ ಕೊಡಬೇಕಾಗುತ್ತದೆ. ಈ ಸೆಕ್ಷನ್ ಹೊಸದು ಎಂದು ತಿಳಿದುಕೊಂಡಿದ್ದರೆ ಅದು ಸರಿಯಲ್ಲ. ಏಕೆಂದರೆ, ಈ ಭೂಸುಧಾರಣಾ ಕಾನೂನು ೧೯೭೪ರಲ್ಲಿ ಜಾರಿಗೆ ಬಂದಾಗ, ಮಾನ್ಯ ಹುಚ್ಚಮಾಸ್ತಿಗೌಡರು ಸೆಲೆಕ್ಟ್ ಕಮಿಟಿಯಲ್ಲಿದ್ದರು. ನಾನೂ ಸಹ ಆ ಕಮಿಟಿಯಲ್ಲಿದ್ದೆ. ಮಾನ್ಯ ಸುಬ್ಬಯ್ಯಶೆಟ್ಟರೂ ಸಹ ಇದ್ದರು. ಆಗ ಈ ವಿಷಯದ ಬಗ್ಗೆ ಚರ್ಚೆಯಾಯಿತು. ಈ ಒಂದು ಸಮಸ್ಯೆ ಹೆಚ್ಚಾಗಿ ದಕ್ಷಿಣಕನ್ನಡ ಜಿಲ್ಲೆಯಲ್ಲಿದೆ. ಆದಕಾರಣ ಈ ವಿಷಯದ ಮೇಲೆ ಅಲ್ಲಿ ಬಹಳಷ್ಟು ಚರ್ಚೆಯಾಯಿತು. ಅಲ್ಲಿ ಮೂಲಹೊಲೆಯ ಜನಾಂಗದವರು ಅನುಚಾನವಾಗಿ ಅಂದರೆ ವಂಶಪಾರಂಪರ್ಯವಾಗಿ ಯಾವುದೋ ಜಮೀನಿನಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡಿಕೊಂಡು ಬರುತ್ತಿದ್ದಾರೆ. ಇಂತಹ ಜಮೀನು ಏನಾದರು ಮಾರಾಟವಾದರೆ ಅವರೂ ಸಹ ಮಾರಾಟವಾಗುತ್ತಾರೆ. ಅಂದರೆ ಜಲ, ತರು, ಪಾಷಾಣ ಎಲ್ಲವೂ ಟ್ರಾನ್ಸ್‌ಫರ್ ಆಗುವಂತೆ ಇವರೂ ಸಹ ಟ್ರಾನ್ಸ್‌ಫರ್ ಆಗುತ್ತಾರೆ. This is a most uncivilised and crude method. ಇದು ನಮ್ಮ ರಾಜ್ಯದ ಒಂದು ಜಿಲ್ಲೆಯಲ್ಲಿ ಮಾತ್ರ ಇದೆ. ಆದರೆ ಈಗ ಇಡೀ ರಾಜ್ಯಕ್ಕೆ ಅನ್ವಯವಾಗುವಂತಹ ರೀತಿಯಲ್ಲಿ ಕಾನೂನು ಮಾಡುತ್ತಿದ್ದೀರಿ. ಇದು ಸರಿಯಲ್ಲ. ತಾವು ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಮಾಡುವಾಗ ನಾನು ತಮಗೆ ತೋರಿಸಿದೆ, ಏನೆಂದರೆ, ಒಂದು ಜಮೀನಿನಲ್ಲಿ ಇರಿಗೇಷನ್ ವೆಲ್ ಇರುತ್ತದೆ, ಫಾರಮ್ ಹೌಸ್ ಎಂದು ಇರುತ್ತದೆ, ಅಲ್ಲೆಲ್ಲಾ ವಾಚ್‌ಮನ್ ಎಂಬುದಾಗಿ ಇರುತ್ತಾರೆ. ಅವರು ೩-೪-೫-ವರ್ಷಗಳ ಕಾಲ ಇದ್ದು ನಂತರ ಬಿಟ್ಟು ಹೊರಟು ಹೋಗುತ್ತಾರೆ. ಆದರೆ ಇನ್ನು ಮುಂದೆ ಈ ಒಂದು ಕಲಂ ಪ್ರಕಾರ ಈ ವಾಚ್‌ಮನ್‌ಗಳು ಸಹ ತಹಶೀಲ್ದಾರರ ಮುಂದೆ ಇಲ್ಲವೇ ಟ್ರಿಬ್ಯುನಲ್ ಮುಂದೆ ಡಿಕ್ಲರೇಷನ್ ಕೊಡುವುದಕ್ಕೆ ಬರುತ್ತದೋ ಅಥವಾ ಇಲ್ಲವೋ ಎಂಬುದನ್ನು ನೋಡಬೇಕಾಗುತ್ತದೆ. ಒಂದು ವೇಳೆ ಇವರು ಡಿಕ್ಲರೇಷನ್ ಕೊಟ್ಟರೆ ಏನಾಗಬಹುದು ಎಂಬುದನ್ನು ಸಹ ನೋಡಬೇಕಾಗುತ್ತದೆ. ಈಗ ನಮ್ಮ ರಾಜ್ಯದ ಯಾವುದೋ ಒಂದು ಭಾಗದಲ್ಲಿ ಇಂತಹ ತೊಡಕಿದ್ದರೆ ಅಲ್ಲಿಗೆ ಮಾತ್ರ ಪರಿಹಾರ ಕಂಡು ಹಿಡಿಯಬೇಕೇ ಹೊರತು, ಇಡೀ ರಾಜ್ಯಕ್ಕೆ ಇದು ಅನ್ವಯವಾಗುವಂತೆ ಮಾಡುತ್ತಿರುವುದು ಸರಿಯಲ್ಲ.

ನಿಮ್ಮ ಪಕ್ಷದ ಶ್ರೀ ಚಂದ್ರಶೇಖರ್ ಅವರು ಸಹ ಈ ಬಗ್ಗೆ ಹೇಳಿದರು. ಅವರೂ ಸಹ ಇದನ್ನು ಸ್ವಾಗತ ಮಾಡಲಿಲ್ಲ. ಈಗ ಸೆಕ್ಷನ್ ೬೩ರ ಪ್ರಕಾರ ಸೀಲಿಂಗ್ ಏನು ಬಂದಿದೆ, ಆ ಬಗ್ಗೆ ಹೇಳಬೇಕೆಂದರೆ, in all other section plantations are not exempted ಎಂದು ಹೇಳಿದ್ದೀರಿ.

ಈ ಸೀಲಿಂಗ್ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಾತನಾಡುತ್ತಾ ಹೇಳಿದರು. ಕೆಲವು ಸಂದರ್ಭ ಗಳಲ್ಲಿ ದೊಡ್ಡ ತೋಟಗಳಲ್ಲಿ ಎಂದರೆ ಅಡಿಕೆ ತೋಟ ಅಥವಾ ಬಾಳೆ ತೋಟದಲ್ಲಿ ವಾಚ್‌ಮೆನ್ ಆಗಿ ವಾಸಮಾಡುತ್ತಾ ಇರುವವರು ಬಿಟ್ಟು ಹೋಗಬಹುದು ಅವರಿಗೆ ಡಿಕ್ಲರೇಷನ್ ಕೊಡುವುದಕ್ಕೆ ೩ ತಿಂಗಳು ಇದ್ದದ್ದನ್ನು ಆರು ತಿಂಗಳು ಮಾಡಬೇಕೆಂದು ಹೇಳಿದರು. ಆ ರೀತಿ ಮಾಡಿದರೆ ಅದರ ಪರಿಣಾಮ ಏನಾಗಬಹುದು ಎನ್ನುವುದನ್ನು ತಾವು ನೋಡಬೇಕು. ನಾನು ವೈಯಕ್ತಿಕವಾಗಿ ಹೇಳುವು ದಾದರೆ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹಾಕತಕ್ಕಂಥಾದ್ದು ಒಳ್ಳೆಯದು ಎಂದು ಹೇಳುತ್ತೇನೆ. ಈ ಕಾಲಂನಲ್ಲಿ ಏನು ಇದೆ ಇದನ್ನು ಯಾವ ಕಾರಣದಿಂದಲೇ ಆಗಲೀ ಬದಲಾಯಿಸುವುದಕ್ಕೆ ಬದಲಾಗಿ ಇರತಕ್ಕ ಅಡ್ಡಿ ಆತಂಕಗಳಿಗೆ ಒಂದು ಪರಿಹಾರವನ್ನು ಕಂಡುಹಿಡಿಯಬೇಕು ಎಂದು ಹೇಳುತ್ತೇನೆ. ಮಲೆನಾಡು ಪ್ರದೇಶದಲ್ಲಿ ಯಾವ ಒಂದು ಪರಿಸ್ಥಿತಿ ಇದೆ, ಅದೇ ಮೈದಾನ ಪ್ರದೇಶದಲ್ಲಿ ಇರುವುದಿಲ್ಲ. ಇದನ್ನೆಲ್ಲಾ ವಾಸ್ತವಾಂಶಗಳನ್ನು ಆಲೋಚನೆ ಮಾಡಿ ಒಂದು ತೀರ್ಮಾನಕ್ಕೆ ಬರುವುದು ಒಳ್ಳೆಯದು. ಅದಕ್ಕೋಸ್ಕರವಾಗಿ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿ ಮುಂದೆ ಹಾಕಬೇಕೆಂದು ನನ್ನ ಸೂಚನೆ ಎಂದು ಹೇಳುವುದಕ್ಕೆ ಇಚ್ಛಿಸುತ್ತೇನೆ.

ಇನ್ನು ಎರಡನೆಯದು, ಸೆಕ್ಷನ್ ೪೮ಕ್ಕೆ ಏನು ಒಂದು ಅಮೆಂಡ್‌ಮೆಂಟ್ ಪ್ರೊಪೋಸ್ ಮಾಡಿದ್ದೀರಿ ಅದರಲ್ಲಿ ಯಾವುದೇ ಟ್ರಿಬ್ಯುನಲ್ ಸದಸ್ಯರು ಮೂರು ಮೀಟಿಂಗ್‌ಗಳಿಗೆ ಹಾಜರಾಗದೆ ಹೋದರೆ ಹಾಗೂ ಅಥವಾ ಚೇರ್‌ಮೆನ್ ಪರ್ಮಿಷನ್ ತೆಗೆದುಕೊಳ್ಳದೆ ಹೋದರೆ ಅವರ ಸದಸ್ಯತ್ವ ಕಳೆದುಕೊಳ್ಳು ತ್ತಾರೆಂದು ಹೇಳಿದ್ದೀರಿ.

Clause 11 says as follows :

"(4A) Any member who absents himself from three consecutive meetings of the Tribunal, except with the written permission of the Chairman, shall cease to be a member." ಎಂದು.

Then (5A) says as follows :—

"The Deputy Commissioner may, if he deems it expedient so to do, for the ends of justice, transfer any application or other proceedings relating there to pending before any Tribunal to any other Tribunal within his jurisdiction."

ಮುಂದೆ ತಾವು ಕ್ಲಾಸ್ ಬೈ ಕ್ಲಾಸ್ ಮೂವ್ ಮಾಡುವಾಗ ಇದಕ್ಕೆ ತಿದ್ದುಪಡಿ ಮೂವ್ ಮಾಡುತ್ತೀರಿ ಎಂದು ಕಾಣುತ್ತದೆ. ಇದರಲ್ಲಿ ಒಂದು ವಿಷಯ ಏನಾಗಿದೆ ಎಂದರೆ, ಇದರ ಬಗ್ಗೆ ರಿಟ್ ಪಿಟಿಷನ್ಸ್ ಹೈಕೋರ್ಟ್ ಮುಂದೆ ಬಂದಿವೆ. On some of the Members, definite charges were there it may be charges of corruption or it may be any other charge. ಈ ರೀತಿ ಸದಸ್ಯರಿಂದ ನಮಗೆ ಅನ್ಯಾಯವಾಗಿದೆ ಇಂತಹವರು ಟ್ರಿಬ್ಯೂನಲ್‌ನಲ್ಲಿ ಇದ್ದರೆ ನಮಗೆ ನ್ಯಾಯ ದೊರೆಯುವುದಿಲ್ಲ ಎಂದು ಹೇಳಿ ರಿಟ್ ಹೋದಾಗ ಆ ರಿಟ್ ಪಿಟಿಷನ್ಸ್ ಮೇಲೆ ಹೈಕೋರ್ಟಿ ನವರು ತೀರ್ಮಾನ ಕೂಡಾ ಕೊಟ್ಟಿದ್ದಾರೆ. They have stated that you can raise an objection that the particular Member should not sit and if it contravened you can again come back to the High Court. ಎಂದು ಜಡ್ಜ್‌ಮೆಂಟ್ ಬರೆದಿದ್ದಾರೆ. ಇಂತಹ ಒಂದು ಪ್ರಾವಿಷನ್ ಇದ್ದರೆ ಡೆಪ್ಯುಟಿ ಕಮಿಷನರ್ ಮುಂದೆ ಈ ರೀತಿ ಯಾವುದೇ ಕೇಸ್ ಬಂದರೆ ಅವರು ಟ್ರಾನ್ಸ್‌ಫರ್ ಕೊಡುವುದಿಲ್ಲ. ಆದರೆ ಟ್ರಾನ್ಸ್‌ಫರ್ ಕೊಡುವುದು ಅಗತ್ಯವಿದೆ. ಟ್ರಿಬ್ಯೂನಲ್‌ನಲ್ಲಿ ಪ್ರಿಜುಡಿಸ್ ಆದಂತಹ ಅರ್ಜಿದಾರ ನನಗೆ ನ್ಯಾಯ ದೊರೆಯುವುದಿಲ್ಲವೆಂದು ಕೇಳಿ

ದಾಗ ಆಗ ಟ್ರಾನ್ಸ್‌ಫರ್ ಕೊಡಬೇಕಾಗುತ್ತದೆ. ಆದ್ದರಿಂದ ಈ ಪ್ರಾವಿಷನ್ ಇರುವುದು ಒಳ್ಳೆಯದು ಇದನ್ನು ಏತಕ್ಕೆ ತೆಗೆಯುತ್ತೀರಿ ಎಂದು ಕೇಳುತ್ತೇನೆ. ಇನ್ನು ಒಂದು ಅಮೆಂಡ್‌ಮೆಂಟ್ ಮೂವ್ ಮಾಡುತ್ತಾ ಇದ್ದೀರಿ ? ನನ್ನ ವೈಯುಕ್ತಿಕ ಅಭಿಪ್ರಾಯ ಕೇಳುವುದಾದರೆ ಕ್ಲಾಸ್ ೪ (ಎ) ಏನು ಇದೆ ಅದನ್ನು ಕೈಬಿಡಿ. ಚೇರ್‌ಮೆನ್ ಪರ್ಮಿಷನ್ ತೆಗೆದುಕೊಳ್ಳದೆ ಮೂರು ಮೀಟಿಂಗ್‌ಗಳನ್ನು ಅಟೆಂಡ್ ಮಾಡದೆ ಹೋದರೆ ಅವನ ಮೆಂಬರ್‌ಷಿಪ್ ಕಳೆದುಕೊಳ್ಳುತ್ತಾರೆ ಎಂದು ಏನು ಹೇಳಿದ್ದೀರಿ ಅನೇಕ ಸಂದರ್ಭಗಳಲ್ಲಿ ಆ ರೀತಿ ಸನ್ನಿವೇಶ ಬರುತ್ತದೆ, ಆದ್ದರಿಂದ ಇದನ್ನು ಕೈಬಿಡಬೇಕೆಂದು ಹೇಳುತ್ತೇನೆ. ಇನ್ನು ಟ್ರಾನ್ಸ್‌ಫರ್ ಪ್ರಾವಿಷನ್ ಏನು ಇದೆ, if the Deputy Commissioner is convinced ಆಗ ಅದನ್ನು ಬೇರೆ ಟ್ರಿಬ್ಯೂನಲ್‌ಗೆ ಟ್ರಾನ್ಸ್‌ಫರ್ ಮಾಡಿದರೆ ಅದರಿಂದ ಏನು ತೊಂದರೆಯಾಗುತ್ತದೆ ? ಆ ಕಾಲಮ್‌ನ್ನು ಬಿಡಬಾರದು, ಅದು ಕಂಟೀನ್ಯೂ ಆಗಬೇಕೆಂದು ನಾನು ಅಭಿಪ್ರಾಯ ಪಡುತ್ತೇನೆ.

In Clause 12, you have stated as follows :—

"(1) for the figures and words "31st day of December 1974." the words brackets and figures "expiry of a period of three months from the date of the commencement of Section 1 of the Karnataka Land Reforms (Amendment) Act, 1978," shall be substituted."

Here again, ಆಳುವ ಪಕ್ಷದವರು ಭಾಷಣವನ್ನು ಏನು ಮಾಡಿದ್ದಾರೆ ಅದನ್ನೇ ನಾನು ಇಲ್ಲಿ ಕೋಟ್ ಮಾಡಬೇಕಾಗುತ್ತದೆ.

ಇನ್ನು ಡಿಕ್ಲರೇಷನ್ ಕೊಡುವುದಕ್ಕೆ ಸಮಯ ಕೊಟ್ಟರೆ ಅವರಿಗೆ ವಾಯಿದೆ ಮುಗಿದಿದ್ದರೂ ಕೂಡಾ ನಾಲ್ಕು ಸಾರಿ ಎಕ್ಸ್‌ಟೆನ್ಶನ್ ಕೊಟ್ಟಿದ್ದಾರೆ. ಇದರಿಂದ ಅನೇಕ ಜೆನಿಯುನ್ ಅಪ್ಲಿಕೇಷನ್ ಬಂದಿವೆ. ಕೆಲವು ಅನ್ ಜೆನಿಯುನ್ ಅಪ್ಲಿಕೇಷನ್‌ಗಳು ಕೂಡ ಬಂದಿವೆ. ಇದರಿಂದ ಯಾರು ಯಾರು ಟೆನೆಂಟ್ ಎಂದು ಅರ್ಜಿ ಕೊಟ್ಟಿದ್ದಾರೆ ಅದರಲ್ಲಿ ಬೇಕಾದಷ್ಟು ನ್ಯೂನತೆಗಳು ಇವೆ. ಅವರು ಈಗ ಆಕ್ಯೂಪೆನ್ಸಿ ರೈಟ್ ಕೊಡಿ ಎಂದು ಅರ್ಜಿ ಕೊಟ್ಟಿದ್ದಾರೆ. ಇದರಲ್ಲಿ ಇನಾಮ್ ಲ್ಯಾಂಡ್ಸ್‌ಗಳು ಇವೆ, ಇನ್ನು ಕೆಲವು ದೇವಸ್ಥಾನಗಳಿಗೆ ಸೇರಿದ ಲ್ಯಾಂಡ್‌ಗಳು ಇವೆ. ಒರಿಜನಲ್ ಕಾನೂನಿನಲ್ಲಿ ಇದು ಬರುತ್ತಾ ಇರಲಿಲ್ಲ. ಇದರ ಪ್ರಕಾರ ಮೂರು ತಿಂಗಳು ಇದ್ದದ್ದನ್ನು ಕಿತ್ತು ಆರು ತಿಂಗಳು ಮಾಡುತ್ತಾ ಇದ್ದೀರಿ ? ಈ ಒಂದು ಸೆಕ್ಷನ್‌ನ್ನು ತಾವು ಸಂಪೂರ್ಣವಾಗಿ ಟೆನೆನ್ಸಿ ಪರ್‌ವ್ಯೂನಲ್ಲಿ ತರುತ್ತಾ ಇದ್ದೀರಿ, ಡಿಸ್‌ಪ್ಯೂಟ್ ಆಫ್ ಲ್ಯಾಂಡ್ ಬಗ್ಗೆ ಹೈಕೋರ್ಟಿಗೆ ರಿಟ್ ಪಿಟಿಷನ್ಸ್ ಬಂದು ಏನಾದರೂ ತೀರ್ಮಾನ ಆದರೆ ಅದು ಪುನಃ ಟ್ರಿಬ್ಯೂನಲ್‌ಗೆ ಬರಬೇಕಾದ ಅವಶ್ಯಕತೆ ಇಲ್ಲ. ಆದರೆ ಹೊಸದಾಗಿ ಇದನ್ನು ಟ್ರಿಬ್ಯೂನಲ್ ಪರ್‌ವ್ಯೂಗೆ ತರುತ್ತಾ ಇದ್ದೀರಿ ? ಸೆಕ್ಷನ್ ೪೮ ಹೊಸದಾಗಿ ಏನು ಇದೆ, ಅದರ ಪ್ರಕಾರ ಡಿಕ್ಲರೇಷನ್ ಆಫ್ ಒವರ್ ಷಿಪ್ ರೈಟ್, ಹಕ್ಕು ಕೊಡಬೇಕು, ಆದರೆ ಅದಕ್ಕೆ ಟೈಮ್ ಕೊಡಬೇಕು. ತಾವು ಎಲ್ಲಾದಕ್ಕೂ ಹೊಸದಾಗಿ ಡಿಕ್ಲರೇಷನ್ ಮಾಡಬೇಕೆಂದು ಹೇಳಿದರೆ ಹೇಗೆ ? ಸ್ವಲ್ಪ ಹೆಚ್ಚು ಕಡಿಮೆ ಎಲ್ಲಾ ಕಡೆಯಲ್ಲಿಯೂ ಏನು ನಡೆದಿದೆ ಎಂದರೆ ಅವನ ಜಮೀನಿಗೆ ಇವನು ಡಿಕ್ಲರೇಷನ್ ಕೊಟ್ಟಿರುತ್ತಾನೆ ಇವನ ಜಮೀನಿಗೆ ಅವನು ಡಿಕ್ಲರೇಷನ್ ಕೊಟ್ಟಿರುತ್ತಾನೆ. ಆದ್ದರಿಂದ ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡುವುದು ಒಳ್ಳೆಯದು. ಡಿಕ್ಲರೇಷನ್‌ಗೆ ೬ ತಿಂಗಳು ಎಲ್ಲಾ ಜಮೀನಿಗೆ ಕೊಡುವುದರ ಬದಲು ಇನಾಮ್ ಜಮೀನಿಗೆ ಮಾತ್ರ ಕೊಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. In the case of some disputed lands, Writ Petitions havs been filed before the High Court. They have already declared before the Tribunal and they are disputed and they have gone to the High Court and obtained an order from the High Court.

ಸ್ವಾಮಿ, ಇನ್ನು ಹೊಸದಾಗಿ ಸೆಕ್ಷನ್ ೧೨೨ (ಎ) ನಲ್ಲಿ ಏನು ಇದೆ ಎಂದರೆ Review by the Tribunal.—Where the Tribunal either *suo motu* or otherwise, after such enquiry as it considers necessary is satisfied that an order under

sub-section (1) of section 67 has been obtained by fraud, misrepresentation, or suppression of facts or by furnishing false, incorrect or incomplete decalration, it may, within a period of two years from the date of such order or within a period of one year from the date of Commencement of section 1 of the Karnataka Land Reforms (Amendment) Act, 1978 whichever is later reopen the case and pass such order with respect there to as it thinks fit : ಎಂದು ಇದೆ ಅಂದರೆ ರೆವ್ಯೂ ಮಾಡತಕ್ಕ ಪವರ್ ಎರಡು ವರ್ಷದ ಒಳಗಾಗಿ ಇರಬೇಕು ಎಂದು ಇದೆ ಅಥವಾ ಈ ಆ್ಯಕ್ಟ್ ಜಾರಿಗೆ ಬಂದ ಒಂದು ವರ್ಷದೊಳಗೆ ಏನಾದರೂ ಆಗಿದ್ದರೆ ಅದೇ ಟ್ರಿಬ್ಯೂನಲ್‌ಗೆ ರೆವ್ಯೂ ಮಾಡತಕ್ಕ ಪವರ್ ಕೊಟ್ಟಿದ್ದೀರಿ. You have your own non-official members who have fully hundred percent belief in Land Reforms ಯಾವುದಾದರೂ ಟ್ರಿಬ್ಯುನಲ್‌ನಲ್ಲಿ ಉದ್ದೇಶಪೂರಿತವಾಗಿ ತಪ್ಪು ಮಾಡಿದರೆ ಯಾರೂ ಮುಂದೆ ಹೋಗುವುದಕ್ಕಾಗುವುದಿಲ್ಲ. ಅನೇಕ ರಿಟ್ ಪಿಟೀಷನ್‌ಗಳು ಹೈಕೋರ್ಟಿನಲ್ಲಿ ಬಂದಿವೆ. They cannot sit in judgment over the decision of the Tribunals. If there an mistakes committed ಅದನ್ನು for reconsidration before the Tribunal ಎಂದು ವಾಪಸ್ಸು ಕಳುಹಿಸುತ್ತಿದ್ದಾರೆ. ತಮಗೆ ಇದರ ಬಗ್ಗೆ ಸಾಕಷ್ಟು ಅನುಭವ ಇದೆ. ಲಕ್ಷಾಂತರ ಡಿಕ್ಲೆರೇಷನ್‌ಗಳಲ್ಲಿ ಈ ಬಗ್ಗೆ ಸಾವಿರಾರು ಅರ್ಜಿಗಳು ಹೋಗಿರಬಹುದು. ಆದ್ದರಿಂದ ಜಿಲ್ಲಾ ಮಟ್ಟದಲ್ಲಿ ಅಪಲೇಟ್ ಟ್ರಿಬ್ಯುನಲ್ ಮಾಡಿ. ಈ progressive piece of legislation ಅನ್ನು ನಾನು ಬೇಡ ಎಂದು ಹೇಳುವುದಿಲ್ಲ.

SRI B. BASAVALINGAPPA.—Even after the judgment is pronounced by the Deputy Commissioner, if the parties file writ Petitions in the High Court, against the decision of the Deputy Commissioner, how can we prevent the parties from going to the High Court ?

SRI M. C. BASAPPA.—There is no remedy even if they go to High Court. What I am legally thinking of is that, where injustice has been done let there be a place to set right the injustice done to the parties. ಹೈಕೋರ್ಟಿಗೆ ಹೋಗುವವರನ್ನು ಸುಪ್ರೀಂ ಕೋರ್ಟಿಗೆ ಹೋಗುವವರನ್ನು ತಡೆ ಹಿಡಿಯುವುದು ಬೇಡ. ಅದನ್ನು ನಾನು ತಪ್ಪಿಸಿ ಎಂದು ಹೇಳುತ್ತಿಲ್ಲ. ಅನ್ಯಾಯ ಆದವನಿಗೆ ಅನ್ಯಾಯ ಆಗಿದೆ ಎಂದು ಹೇಳುವುದಕ್ಕೆ there is no appellate authority. ಹೈಕೋರ್ಟಿಗೆ ಹೋದರೆ ಅವರು we find some procedural irregularities in this case, Please reconsider your judgment in view of this procedural irregularities ಅಂತ ಹೇಳಿ they send back the case to the Tribunal. This is the scope in the Writ Petition. They cannot sit in judgment over the decision given by them Tribunal. ನಾನು ತಮ್ಮನ್ನು ಕೇಳಿಕೊಳ್ಳುವುದು ಏನೆಂದರೆ ಈ ರೀತಿ ಅನ್ಯಾಯವಾಗಿದ್ದರೆ ಟ್ರಿಬ್ಯುನಲ್‌ನಲ್ಲಿ ಅದನ್ನು ಸರಿಮಾಡುವಂತಹ ಅಪಲೇಟ್ ಅಥಾರಿಟಿ ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಇರಬೇಕು. ಸುಪ್ರೀಂ ಕೋರ್ಟಿಗೆ ಹೈಕೋರ್ಟಿಗೆ ಹೋಗತಕ್ಕ ಅರ್ಜಿ ನಿಲ್ಲಿಸುವುದಕ್ಕೆ ಆಗುತ್ತದೆ ಎಂದು ಅಲ್ಲ. Let them file an appeal in the Supreme Court if they have money. ಅದು ಪ್ರಶ್ನೆ ಅಲ್ಲ. ಟೆನೆಂಟ್‌ಗೆ ಅನ್ಯಾಯವಾಗಿದ್ದರೆ they cannot go to the appellate authority. In the name of the tenant ನಾನು ಟೆನೆಂಟ್ ಎಂದು ಹೇಳಿ ಲ್ಯಾಂಡ್‌ಲಾರ್ಡ್ ಜಮೀನು ಪಡೆದಿರುತ್ತಾರೆ. ಅವರಿಗೆ ಅಪಲೇಟ್ ಅಥಾರಿಟಿಗೆ ಅಪೀಲ್ ಹೋಗಲಿಕ್ಕೆ ಅವಕಾಶ ಇಲ್ಲ; ಆದ್ದರಿಂದ ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ಅನ್ಯಾಯವಾಗಿದೆ ಎಂದರೆ ಸರಿಪಡಿಸಲಿಕ್ಕೆ ಡೆಪ್ಯುಟಿ ಕಮಿಷನರ್ ಅವರ ಅಧ್ಯಕ್ಷತೆಯಲ್ಲಿ ಅಪಲೇಟ್ ಟ್ರಿಬ್ಯುನಲ್ ಮಾಡತಕ್ಕದ್ದು ಬಹಳ ಅವಶ್ಯಕ. ಅದನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ತಾವು ಷೆಡ್ಯೂಲ್ ಅಮೆಂಡ್‌ಮೆಂಟ್ ಮಾಡಬೇಕೆಂದು ಸೂಚನೆ ಮಾಡಿದ್ದೀರಿ. ಇದರ ಪ್ರಕಾರ ಕೈಬಿಟ್ಟಿದ್ದೀರಿ. ತಾವು ಕೈಬಿಟ್ಟರೂ ಒಂದು

ಅಮೆಂಡ್‌ಮೆಂಟ್ ಹಾಕಿದ್ದೀರಿ. ಅದು ಮೇಲೇನೂ ಕಾಣುವುದಿಲ್ಲ. ಆದರೆ ಆದರಲ್ಲಿ ಬಹಳ ಚೇಂಜಸ್ ಇದೆ. we can anticipate many things in that ತಾವು ಏನು ಹೇಳಿದ್ದೀರಿ ಅಂದರೆ For clause 38, substitute the following :—

"38. Amendment of Schedule I :—In schedule I to the Principal Act, the words "notified by the State Government to be" in the three places where they occur shall be omitted." ಸ್ವಾಮಿ, what will happen according to this amendment ? ತಮ್ಮ ಸೀಲಿಂಗ್ ಫಿಕ್ಸ್ ಮಾಡುವುದಕ್ಕೆ ಮುಂಚೆ ಸರ್ವೆ ಮಾಡಿ ನೋಟಿಫೈ ಮಾಡಬೇಕಾಗಿದೆ. ತಾವು ಪ್ರಪೋಸಲ್ ಮಾಡಿರುವುದು ಹೇಳಿದೆ. ಈ ಅಮೆಂಡ್ ಮೆಂಟ್ ಎಕ್ಸ್‌ಟೆಂಡ್ ಮಾಡಬೇಕು ಅಂದರೆ you need not get the land classified at all ತಾವು ನೋಟಿಫೈ ಮಾಡಬೇಕಾದ ಅವಶ್ಯಕತೆ ಇಲ್ಲ. ತಾವು ಯಾವುದಾದರೂ ಒಂದು ಆಧಾರ ಇಟ್ಟುಕೊಂಡು ನಿಮ್ಮ ಅಧಿಕಾರಿಗಳು ಕೊಟ್ಟ ಲೆಕ್ಕದ ಮೇಲೆ ಹೊರಟು ಹೋಗಬಹುದು. There is every chance of notification which will be published in the Gazette and the person who is going to be affected by that notification will have the opportunity to approach the Government or some authorities and place his replies as to what modifications are to be done there ಅಥವಾ ನಿಮ್ಮ ಕ್ಲಾಸಿಫಿಕೇಷನ್‌ನಲ್ಲಿ ಏನು ತಪ್ಪು ಇದೆ ಅದನ್ನು ಸರ್ಕಾರದ ಗಮನಕ್ಕೆ, ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಲಿಕ್ಕೆ ಅವನಿಗೆ ಹಕ್ಕು ಇದೆ. ತಮ್ಮ ಅಮೆಂಡ್‌ಮೆಂಟ್‌ನಲ್ಲಿ ಏನು ಹೇಳಿದ್ದೀರಿ ? ಆದರ ಪ್ರಕಾರ ನೋಟಿಫಿಕೇಷನ್ ಮಾಡಬೇಕಾದ ಅವಶ್ಯಕತೆ ಇಲ್ಲ. ಒಬ್ಬ ವಿಲೇಜ್ ಅಕೌಂಟೆಂಟ್, ಒಬ್ಬ ರೆವಿನ್ಯೂ ಅಧಿಕಾರಿ ಏನು ಸ್ಟೇಟ್‌ಮೆಂಟ್ ಕೊಡುತ್ತಾನೆ ಅದರ ಮೇಲೆ ಸೀಲಿಂಗ್ ನಿಗದಿ ಮಾಡಬಹುದು ಎಂದರೆ ಇದು ಅಬ್ರಿಟ್ರರಿ ಆಗಲಿಲ್ಲವೇ ?

ಶ್ರೀ ಬಿ. ಬಸವಲಿಂಗಪ್ಪ.—೧೯೭೪ನೇ ಇಸವಿಯಿಂದ ಸುಮಾರು ೬೦ ಸಾವಿರ ಎಕರೆ ಸರ್‌ಪ್ಲಸ್ ಲ್ಯಾಂಡ್ ಬಾಂಬೆ ಕರ್ನಾಟಕ ಏರಿಯಾದಲ್ಲಿ ಸರ್ವೆ ಮಾಡಿದ್ದಾರೆ. ಆದರೆ ಇವೊತ್ತಿನವರೆಗೂ ಒಂದು ಎಕರೆ ಕೂಡ ಹಂಚಲಿಕ್ಕೆ ಆಗಲಿಲ್ಲ. ಪ್ರತಿಯೊಂದು ಸರ್ವೆ ನಂಬರ್ ತಂದು ನೋಟಿಫೈ ಮಾಡುವವರೆಗೆ ಹಂಚಲಿಕ್ಕೆ ಆಗುವುದಿಲ್ಲ. ಆದ್ದರಿಂದ ಅದು ಹೋಗುವುದು ಲೇಸೋ, ಇದನ್ನು ಇಟ್ಟುಕೊಳ್ಳುವುದು ಲೇಸೋ ನೀವೇ ಹೇಳಿ.

ಶ್ರೀ ಎಂ. ಸಿ. ಬಸಪ್ಪ.—ಮೊದಲು ಲ್ಯಾಂಡ್ ರಿಫಾರಮ್ಸ್ ಆ್ಯಕ್ಟ್ ತಂದಾಗ ಏನು ಯೋಚನೆ ಮಾಡಿದಿರಿ ? It shall be notfied ಎಂದು ಮಾಡಿದಿರಿ. ಸರ್ಕಾರ ಕೆಲಸ ಮಾಡಲಿಕ್ಕೆ ಸಾಧ್ಯವಾಗ ಲಿಲ್ಲ. ಕಂಬರಸಮ್ ಆಗುತ್ತದೆಂದು ನ್ಯಾಚುರಲ್ ಜಸ್ಟಿಸ್ ಒಬ್ಬ ಮನುಷ್ಯನಿಗೆ ಕೊಟ್ಟಿರುವುದು ಕಿತ್ತು ಕೊಳ್ಳುವುದು ಸರಿಯೇ ? ಸರ್ಕಾರಕ್ಕೆ ೨೦ ವರ್ಷದಿಂದ ಹಂಚಲಿಕ್ಕೆ ಆಗಲಿಲ್ಲ ಅಂದರೆ......Is it the fault of the farmer ? Is it not the fault of the administrators who are not able to demarcate and fix the ceiling ? Sir, I fix the responsibility on the Government people who are at the held of affairs and who are not capable of implementing the Land Reforms.

ಶ್ರೀ ಬಿ. ಬಸವಲಿಂಗಪ್ಪ.—ಅದಕ್ಕೋಸ್ಕರವೆ ಸಲೀಸಾಗಿ ಮಾಡುತ್ತಿದ್ದೇವೆ.

ಶ್ರೀ ಎಂ. ಸಿ, ಬಸಪ್ಪ.—ಈಗ ಇರತಕ್ಕ ನ್ಯಾಚುರಲ್ ಜಸ್ಟಿಸ್ ಅವನಿಗೆ ಏನು ಮಾಡಿದ್ದನ್ನು ಹೇಳಲಿಕ್ಕೆ ಅವಕಾಶ ಇತ್ತು. ಅದು ಕಿತ್ತುಹಾಕುತ್ತಿದ್ದೀರಿ. ಲ್ಯಾಂಡ್ ರಿಫಾರಮ್ಸ್ ಹೆಸರಿನಲ್ಲಿ ಏನು ಬೇಕಾದರೂ ಅನ್ಯಾಯ ಮಾಡಬೇಕು ಎನ್ನುವ ತೀರ್ಮಾನಕ್ಕೆ ಬಂದಿದ್ದರೆ ಅದಕ್ಕೆ ನನ್ನ ಹತ್ತಿರ ಉತ್ತರ ಇಲ್ಲ.

ಶ್ರೀ ಜೆ. ಹೆಚ್. ಪಟೇಲ್.—ನೆಗಡಿ ಆಯಿತು ಎಂದು ಮೂಗು ಕೊಯ್ದು ಬಿಟ್ಟಹಾಗೆ.

ಶ್ರೀ ಎಂ. ಸಿ. ಬಸಪ್ಪ.—೨೦ ವರ್ಷದಿಂದ ಏತಕ್ಕೆ ಹಂಚಲಿಲ್ಲ ನಮ್ಮ ರಾಜ್ಯದಲ್ಲಿ ಸರ್ವೇಯರ್ಸ್ ಇರಲಿಲ್ಲವೇ ? ನೋಟಿಫೈ ಮಾಡಲಿಕ್ಕೆ ಗೆಜೆಟ್ ಇರಲಿಲ್ಲವೆ ? ಇಷ್ಟು ಹೊತ್ತಿಗೆ ಇಂಪ್ಲಿಮೆಂಟ್ ಮಾಡ ಬಹುದಿತ್ತು. But we are going to do away with the system of this reclassification and notification in the Gazette. That will not meet the ends of justice. I also agree it is a progressive legislation. But it should be implemented progressively not retrogressively. ಇಷ್ಟು ಹೊರತು ಇನ್ನು ಏನು ಹೇಳುವುದೂ ಕಷ್ಟವಾಗುತ್ತದೆ. ತಾವು ತಮ್ಮ ಮನಸ್ಸಿಗೆ ಬಂದಂತೆ ಇಂಪ್ಲಿಮೆಂಟ್ ಮಾಡಿ ಅಸಂಬದ್ಧವಾಗಿ ಮಾಡತಕ್ಕದ್ದು ಸರಿಯಲ್ಲ. ಅಮೆಂಡ್‌ಮೆಂಟ್ ಏನು ಮೂವ್ ಮಾಡಬೇಕು ಎಂದು ಯೋಚನೆ ಮಾಡಿದ್ದೀರಿ ಅದನ್ನು ಪುನರಾಲೋಚನೆ ಮಾಡಬೇಕು ಎಂದು ವಿನಂತಿ ಮಾಡಿ ಸಭಾಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

MADAM DEPUTY SPEAKER.—Now, the House stands adjourned to meet at 1-00 P.M. tomorrow.

The House adjourned at Six of the Clock to meet again at One of the Clock on Wednesday the 23rd August 1978.